

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 28 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 103 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಡಿನ ಸಮೃದ್ಧಿಗೆ ಪ್ರಾರ್ಥಿಸಿದ್ದೇನೆ...

ಮೈಸೂರು, ಜು.27(ಎಂಟಿವೈ)–ರಾಜ್ಯದಲ್ಲಿ ಸಮೃದ್ಧಿ ನೆಲೆಸುವಂತೆ ನಾಡದೇವಿ ಚಾಮುಂಡೇಶ್ವರಿ ತಾಯಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ವರ್ಧಂತಿ ಮಹೋತ್ಸವದ ಅಂಗವಾಗಿ ಚಿನ್ನದ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವರ್ಧಂತಿ ಮಹೋತ್ಸವದಲ್ಲಿ ನಾಡಿನ ಜನತೆಗೆ ಒಳಿತಾಗಲಿ ಎಂದು ಸಂಕಲ್ಪ ಮಾಡಿ ಪ್ರಾರ್ಥಿಸಿದ್ದೇವೆ. ಅತಿವೃಷ್ಟಿಯೂ ಬೇಡ, ಅನಾವೃಷ್ಟಿಯೂ ಬೇಡ. ಸಮೃದ್ಧಿ ನೆಲೆಗೊಳ್ಳಲಿ ಎಂದು ಪ್ರಾರ್ಥನೆ ಮಾಡಿದ್ದೇನೆ. ರಾಜ್ಯದ ಜನತೆ ನೆಮ್ಮದಿಯಿಂದ ಬಾಳ್ವೆ ನಡೆಸಲು ದೇವಿಯ ಅನುಗ್ರಹ ಬೇಕಾಗುತ್ತದೆ. ಆ ಕಾರಣದಿಂದ ಪ್ರಾರ್ಥಿಸಿರುವುದಾಗಿ ತಿಳಿಸಿದರು. ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಂಸದರಾದ ಬಳಿಕ ಮೊದಲ ಬಾರಿಗೆ ಆಷಾಢ ಮಾಸದ ಪೂಜೆ ಹಾಗೂ ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಂಡ ಬಗ್ಗೆ ಪ್ರತಿಕ್ರಿಯಿಸಿದ ಅವರು, ದೇವರ ಮುಂದೆ ಸಂಸದ ಸ್ಥಾನ ದೊಡ್ಡದಲ್ಲ. ದೇವತಾ ಕಾರ್ಯಕ್ರಮದಲ್ಲಿ ಸಂಸದರಾಗಿ ಪಾಲ್ಗೊಳ್ಳದೆ ಸದಾ ಮಗನಾಗಿ ಪಾಲ್ಗೊಳ್ಳುತ್ತಾರೆ. ಈ ಆಚರಣೆ ಪರಂಪರಾನುಗತವಾಗಿ ನಡೆದುಕೊಂಡು ಬರುತ್ತಿದೆ. ಅದನ್ನು ಮುಂದೆಯೂ ಮುಂದುವರೆಸಿಕೊಂಡು ಹೋಗುತ್ತೇವೆ ಎಂದರು.

ದೇವಿಗೆ ಸೀರೆ ಸಮರ್ಪಣೆ: ವರ್ಧಂತಿ ಮಹೋತ್ಸವದಲ್ಲಿ ಚಾಮುಂಡೇಶ್ವರಿ ದೇವಿಗೆ ಪ್ರಮೋದಾದೇವಿ ಒಡೆಯರ್ ಸೀರೆ ಸಮರ್ಪಿಸಿದ್ದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಎಲ್ಲಾ ದೇವಿಯ ಅನುಗ್ರಹ. ಕಳೆದ ಬಾರಿಯೇ ಕೊಡಬೇಕು ಅಂದುಕೊಂಡಿದ್ದೆ. ಆದರೆ ಸೀರೆ ಕೊಡಲು ಸಾಧ್ಯವಾಗಿರಲಿಲ್ಲ. ಈ ಬಾರಿ ಪ್ರತಿ ವರ್ಷದಂತೆ ಮೂಲಮೂರ್ತಿ, ಉತ್ಸವಮೂರ್ತಿ ಎರಡಕ್ಕೂ ಸೀರೆ ನೀಡಿದ್ದೇನೆ ಎಂದು ತಿಳಿಸಿದರು.

ಕೆಆರ್‌ಎಸ್‌ಗೆ ತೆರಳಿ ಪೂಜೆ ಸಲ್ಲಿಸುವೆ: ಮಳೆ ಹೆಚ್ಚಾಗಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿದೆ. ಇದರಿಂದ ಕೆಆರ್‌ಎಸ್‌ಗೆ ಭೇಟಿ ಕೊಡುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಬೇರೆ ಎಲ್ಲರೂ ಬಂದು ಹೋದ ನಂತರ ನಾನು ಕೆಆರ್‌ಎಸ್‌ಗೆ ಭೇಟಿ ■ 2ನೇ ಪುಟಕ್ಕೆ

ಅದ್ಧೂರಿ ಚಾಮುಂಡೇಶ್ವರಿ ವರ್ಧಂತಿ ಉತ್ಸವ



ಶನಿವಾರ ಚಾಮುಂಡಿ ಬೆಟ್ಟದಲ್ಲಿ ಚಿನ್ನದ ಪಲ್ಲಕ್ಕಿ ಉತ್ಸವಕ್ಕೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಈ ವೇಳೆ ಜಿ.ಟಿ.ದೇವೇಗೌಡರಿದ್ದಾರೆ.



ಮೈಸೂರು, ಜು.27(ಎಂಟಿವೈ)– ಚಾಮುಂಡಿ ಬೆಟ್ಟದಲ್ಲಿ ಶನಿವಾರ ನಾಡದೇವಿ ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವ ಅಪಾರ ಭಕ್ತ ಸಮೂಹದ ನಡುವೆ ಅದ್ಧೂರಿ ಹಾಗೂ ವಿಜೃಂಭಣೆಯಿಂದ ಜರುಗಿತು. ನಾಡದೇವಿಯ ಉತ್ಸವಮೂರ್ತಿಯ ಚಿನ್ನದ ಪಲ್ಲಕ್ಕಿಯಲ್ಲಿದ್ದ ಮಂಟಪೋತ್ಸವವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ದೇವಿಗೆ ಜೈಕಾರ ಮೊಳಗಿಸಿದರು.

ಆಷಾಢ ಮಾಸದ ಕೃಷ್ಣ ಪಕ್ಷದ ರೇವತಿ ನಕ್ಷತ್ರ ದಿನದಂದು ತಾಯಿ ಚಾಮುಂಡೇಶ್ವರಿ ದೇವಿಯ ವರ್ಧಂತಿ(ಜನ್ಮದಿನ) ಉತ್ಸವ ನೆರವೇರುತ್ತದೆ. ಚಾಮುಂಡಿಬೆಟ್ಟವೂ ಸೇರಿದಂತೆ ಮೈಸೂರು ನಗರದಾದ್ಯಂತ ಚಾಮುಂಡಿಯ ಉತ್ಸವ ಸಂಭ್ರಮ ಹಾಗೂ ಅದ್ಧೂರಿಯಾಗಿ ನೆರವೇರುತ್ತದೆ. ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಶನಿವಾರ ಬೆಳಗ್ಗಿನಿಂದ ಸಂಜೆವರೆಗೂ ಅಪಾರ ಸಂಖ್ಯೆಯ ಭಕ್ತರು, ನಾಡದೇವಿ ದರ್ಶನ ಪಡೆದರು.

ವರ್ಧಂತಿ ಮಹೋತ್ಸವ ಅಂಗವಾಗಿ ಮುಂಜಾನೆ 5.30ರಿಂದ ವಿಶೇಷ ಮಹೋತ್ಸವ ನೆರವೇರಿಸಲಾಯಿತು. ಚಾಮುಂಡೇಶ್ವರಿ ವಿಗ್ರಹಕ್ಕೆ ಎಣ್ಣೆ ಮಜ್ಜನದ ಬಳಿಕ ಮಹಾನ್ಯಾಸ ■ 2ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ-ಜೆಡಿಎಸ್ ಭ್ರಷ್ಟಾಚಾರ ಆರೋಪಕ್ಕೆ ಪ್ರತಿತಂತ್ರ

ಮೈಸೂರಲ್ಲಿ ಕಾಂಗ್ರೆಸ್ ಸತ್ಯ ಸಂದೇಶ!

● ವಿಪಕ್ಷಗಳ ಮೈಸೂರು ಪಾದಯಾತ್ರೆ ವೇಳೆ ಸಮಾವೇಶ ● ರಾಜ್ಯದ ಜನತೆ ಮುಂದೆ ಸತ್ಯ ಸಂಗತಿ ಸಾರುವುದು ಕಾಂಗ್ರೆಸ್ ಉದ್ದೇಶ

ಬೆಂಗಳೂರು, ಜು.27(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮೇಲೆ ದಿನನಿತ್ಯ ಭ್ರಷ್ಟಾಚಾರ ಆರೋಪಗಳನ್ನು ಹೊರಿಸುತ್ತಿರುವ ಬಿಜೆಪಿ–ಜೆಡಿಎಸ್ ವಿರುದ್ಧ ಮೈಸೂರಿನಲ್ಲೇ 'ಸತ್ಯ ಸಂದೇಶ' ಬೃಹತ್ ಸಮಾವೇಶವನ್ನು ಪ್ರದೇಶ ಕಾಂಗ್ರೆಸ್ ಹಮ್ಮಿಕೊಳ್ಳುತ್ತಿದೆ.

ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣ, ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿನ ನಿವೇಶನ ಹಂಚಿಕೆ ಹಗರಣ ಮುಂದಿಟ್ಟುಕೊಂಡು ಪ್ರತಿಪಕ್ಷಗಳ ನಾಯಕರು ದಿನನಿತ್ಯ ಸಾರ್ವಜನಿಕರಲ್ಲಿ ತಪ್ಪು ಭಾವನೆ ಮೂಡಿಸುತ್ತಿದ್ದಾರೆ. ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಾಂತರ ರೂ. ಅವ್ಯವಹಾರ ಆರೋಪ ಬರುತ್ತಿದ್ದಂತೆ ಸರ್ಕಾರ ಎಸ್‌ಐಟಿ ರಚನೆ ಮಾಡಿ, ಇಲಾಖಾ ಸಚಿವರ ರಾಜೀನಾಮೆ ಪಡೆದು, ಅಧಿಕಾರಿಗಳನ್ನು ಜೈಲಿಗೆ ಕಳುಹಿಸಿದೆ. ಅಷ್ಟೇ ಅಲ್ಲದೆ, ಬ್ಯಾಂಕ್ ನೀಡಿದ ದೂರಿನ ಆಧಾರದ ಮೇಲೆ ಸಿಬಿಐ ಮತ್ತು ಇ.ಡಿ. ಪ್ರತ್ಯೇಕ ತನಿಖೆಗಳನ್ನು ನಡೆಸುತ್ತಿವೆ. ಮುಖ್ಯಮಂತ್ರಿ ಅವರ ಕುಟುಂಬ ಕಾನೂನುಬದ್ಧವಾಗಿ ಮುಡಾದಿಂದ ಬಿಡಿ ನಿವೇಶನಗಳನ್ನು ಪಡೆದಿದ್ದರೂ ಅದನ್ನು ಬಿಜೆಪಿ ಮತ್ತು ಜೆಡಿಎಸ್ ರಾಜಕೀಯವಾಗಿ ಬಳಸಿಕೊಳ್ಳುತ್ತಿವೆ. ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆಯೇ ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚೆ ಮಾಡಿ ಜನಪರ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಲಿಲ್ಲ. ಅಷ್ಟೇ ಅಲ್ಲ, ಸಂಸತ್‌ನಲ್ಲೂ ಇದರ ಪ್ರಸ್ತಾಪ ಮಾಡಿ ಸಿದ್ದರಾಮಯ್ಯ ಸರ್ಕಾರದ ಮೇಲೆ ಕಪ್ಪುಚುಕ್ಕಿ ಇಡುವ ಕೆಲಸ ಮಾಡುತ್ತಿದ್ದಾರೆ. ಇದೀಗ ಬೆಂಗಳೂರಿನಿಂದ ಮೈಸೂರಿಗೆ ಉಭಯ ಪಕ್ಷಗಳು ಪಾದಯಾತ್ರೆ ಹಮ್ಮಿಕೊಳ್ಳಲು ಉದ್ದೇಶಿಸಿವೆ. ಇವರು ಪಾದಯಾತ್ರೆ ನಡೆಸುವ ತೀರ್ಮಾನ ಕೈಗೊಂಡಿದ್ದೇ ಆದಲ್ಲಿ, ಯಾತ್ರೆ ಸಂದರ್ಭದಲ್ಲೇ ಸತ್ಯ ಸಂದೇಶ ಸಮಾವೇಶ ನಡೆಸಿ ರಾಜ್ಯದ ಜನತೆ ಮುಂದೆ ಸತ್ಯ ಬಿಚ್ಚಿಡಲು ಕಾಂಗ್ರೆಸ್ ಮುಂದಾಗಿದೆ.



ಪಾದಯಾತ್ರೆಗೆ ಪ್ರತಿಯಾಗಿ ಪಾದಯಾತ್ರೆ ಮಾಡದಿರಲು ಕಾಂಗ್ರೆಸ್ ತೀರ್ಮಾನಿಸಿದ್ದು ಸಮಾವೇಶದ ಮೂಲಕವೇ ಪ್ರತಿಪಕ್ಷಗಳಿಗೆ ಉತ್ತರ ನೀಡಲು ಮುಂದಾಗಿದೆ. ಅಷ್ಟೇ ಅಲ್ಲ, ಜಿಲ್ಲಾ ಕೇಂದ್ರಗಳಲ್ಲೂ ಸಮಾವೇಶ ನಡೆಸಿ ಬಿಜೆಪಿ–ಜೆಡಿಎಸ್ ಆರೋಪಗಳಿಗೆ ಉತ್ತರ ನೀಡಲು ತೀರ್ಮಾನಿಸಿದೆ. ಕಾಂಗ್ರೆಸ್ ಹಗರಣಗಳಿಗೆ ಸಂಬಂಧಿಸಿದಂತೆ ಪಾದಯಾತ್ರೆ ಎಂದು ನಡೆಸಬೇಕು, ಅದರ ರೂಪು ರೇಷೆ ಹೇಗಿರಬೇಕು ಎಂಬ ಬಗ್ಗೆ ನಾಳೆ ಎನ್‌ಡಿಎ ಮಿತ್ರಪಕ್ಷಗಳು ಸಭೆ ನಡೆಸಲಿವೆ. ಎನ್‌ಡಿಎ ಸಭೆ ತೆಗೆದುಕೊಳ್ಳುವ ತೀರ್ಮಾನದ ಮೇಲೆ ಕಾಂಗ್ರೆಸ್‌ನ ಸತ್ಯ ಸಂದೇಶದ ಸಭೆ ಮತ್ತು ದಿನಾಂಕ ನಿಗದಿಯಾಗಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.



ಜು.30ರಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ದೆಹಲಿ ಪ್ರವಾಸ

● ಇತ್ತೀಚಿನ ನಾನಾ ಆರೋಪಗಳ ಸಂಬಂಧ ವರಿಷ್ಠರಿಗೆ ವಿವರಣೆ ● ಕೇಂದ್ರದಲ್ಲಿ ನನೆಗುದಿಗೆ ಬಿದ್ದಿರುವ ರಾಜ್ಯದ ಯೋಜನೆಗಳ ಸಂಬಂಧ ಸಚಿವರ ಭೇಟಿ ಉದ್ದೇಶ

ಬೆಂಗಳೂರು, ಜು.27(ಕೆಎಂಶಿ)–ಸರ್ಕಾರದ ವಿರುದ್ಧ ಬರುತ್ತಿರುವ ಆರೋಪಗಳಿಗೆ ಸಂಬಂಧಿಸಿದಂತೆ ವರಿಷ್ಠರಿಗೆ ಮನದಟ್ಟು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 2 ದಿನಗಳ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಜುಲೈ 30ರಂದು ದೆಹಲಿಗೆ ತೆರಳಿ ಎರಡು ದಿನಗಳ ಕಾಲ ದೆಹಲಿಯಲ್ಲೇ ಬಿಡಾರ ಹೂಡಿ ಪಕ್ಷದ ಮುಖಂಡರನ್ನಷ್ಟೇ ಅಲ್ಲದೆ, ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಬಾಕಿ ಇರುವ ಯೋಜನೆಗಳಿಗೆ ಅನುಮತಿ ದೊರಕಿಸುವಂತೆ ಕೇಂದ್ರ ಸಚಿವರುಗಳನ್ನೂ ಭೇಟಿ ಮಾಡಲಿದ್ದಾರೆ. ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣ, ಮುಡಾ ಬಿಡಿ ನಿವೇಶನಗಳ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಪ್ರತಿಪಕ್ಷಗಳು ಮಾಡುತ್ತಿರುವ ಆರೋಪ, ಇದ ರಿಂದ ಸರ್ಕಾರ ಮತ್ತು ಪಕ್ಷಕ್ಕೆ ಆಗಿರುವ ಮುಜುಗರದ ಬಗ್ಗೆಯೂ ವರಿಷ್ಠರಿಗೆ ಮಾಹಿತಿ ನೀಡಲಿದ್ದಾರೆ. ಕರ್ನಾಟಕ ವಿಧಾನ ಮಂಡಲದಲ್ಲೂ ಪ್ರತಿಪಕ್ಷಗಳು ಈ ಆರೋಪಗಳನ್ನು ರಾಜಕೀಯ ವಾಗಿ ಬಳಸಿಕೊಂಡವು.



ಈ ವಿಷಯವನ್ನೇ ರಾಷ್ಟ್ರಮಟ್ಟದಲ್ಲಿ ಬಿಂಬಿಸಲು ಬಿಜೆಪಿ ಸದಸ್ಯರು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮತ್ತೆ ಪ್ರಸ್ತಾಪಿಸುವ ಸಾಧ್ಯತೆ ಇದೆ. ಇಂತಹ ಸನ್ನಿವೇಶದಲ್ಲಿ ನಮ್ಮ ನೆರವಿಗೆ ಧಾವಿಸುವಂತೆ, ಸಂಬಂಧಪಟ್ಟ ದಾಖಲೆಗಳನ್ನು ವರಿಷ್ಠರಿಗೆ ನೀಡುವ ಉದ್ದೇಶ ಹೊಂದಿದ್ದಾರೆ. ಎರಡು ವಿಷಯಗಳನ್ನು ಪ್ರತಿಪಕ್ಷಗಳು ಮುಂದಿಟ್ಟುಕೊಂಡು ಕರ್ನಾಟಕದ ಜನತೆಯನ್ನು ಬಿಜೆಪಿ ■ 2ನೇ ಪುಟಕ್ಕೆ





ಮೈಸೂರು ನಗರಪಾಲಿಕೆಗೆ ಶೀಘ್ರವೇ ಚುನಾವಣೆ: ರಾಜ್ಯ ಚುನಾವಣಾ ಆಯುಕ್ತ



ರಾಜ್ಯ ಚುನಾವಣಾ ಆಯುಕ್ತರಾಗಿ ನೇಮಕಗೊಂಡಿರುವ ಜಿ.ಎಸ್.ಸಂಗ್ರೇಶಿ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಶನಿವಾರ ಅಭಿನಂದಿಸಲಾಯಿತು.

ಸಂಗ್ರೇಶಿ ಸ್ಪಷ್ಟನೆ

ಮೈಸೂರು, ಜು.27(ಬಿಎಲ್‌ಯು)– ಮೈಸೂರು ನಗರಪಾಲಿಕೆ ಸೇರಿದಂತೆ ರಾಜ್ಯದ ಇತರೆ ನಗರಪಾಲಿಕೆಗಳ ಚುನಾವಣೆಯನ್ನು ಶೀಘ್ರವೇ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಸ್ಪಷ್ಟಪಡಿಸಿದ್ದಾರೆ.

ಮೈಸೂರು ವಕೀಲರ ಸಂಘದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಚುನಾವಣಾ ಆಯುಕ್ತನಾಗಿ ನಿನ್ನೆ ಅಧಿಕಾರ ಸ್ವೀಕರಿಸಿದ್ದೇನೆ. ಚುನಾವಣೆ ನಡೆಸುವ ಸಂಬಂಧ ಸಮಗ್ರ ಮಾಹಿತಿ ಪಡೆಯುತ್ತೇನೆ ಎಂದರು. ಮೈಸೂರು ನಗರಪಾಲಿಕೆ ಹಾಗೂ ಪಂಚಾಯಿತಿಗಳಿಗೆ ಈಗಾಗಲೇ ಚುನಾವಣೆ ನಡೆಯಬೇಕಿತ್ತು. ಆದರೆ ಯಾವ ಕಾರಣಕ್ಕೆ ಇನ್ನು ಚುನಾವಣೆ ನಡೆದಿಲ್ಲ ಎಂಬ ಮಾಹಿತಿ ಪಡೆಯುತ್ತೇನೆ. ತರುವಾಯ ಶೀಘ್ರದಲ್ಲೆ ಚುನಾವಣೆ ನಡೆಸಲಾಗುವುದು ಎಂದು ಹೇಳಿದರು. ಆದರೆ ಮೀಸಲಾತಿ ಹಾಗೂ ಕ್ಷೇತ್ರ ಮರು ವಿಂಗಡಣೆ ಸಂಬಂಧ ಬಿಬಿಎಂಪಿಗೆ ಚುನಾವಣೆ ನಡೆದಿಲ್ಲ. ಇದರ ಮಧ್ಯೆ ಗ್ರೇಟರ್ ಬೆಂಗಳೂರು ಅಥಾರಿಟಿ ಪ್ರಸ್ತಾಪ ಕೂಡ ಇದೆ. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಜುಲೈ 30ರಂದು ಪ್ರಕರಣದ ವಿಚಾರಣೆ ■ 2ನೇ ಪುಟಕ್ಕೆ



ಮೈಸೂರು ಮಿತ್ರ ಭಾನುವಾರ 28 ಜುಲೈ 2024

ನಾಳೆ ಚಾಮುಂಡೇಶ್ವರಿ ಅಮ್ಮನವರ ಉತ್ಸವ



ಮೈಸೂರು, ಜು. 27–ಮೈಸೂರು ಹೆಬ್ಬಾಳಿನ ಸೂರ್ಯ ಬೇಕರಿ ವೃತ್ತದಲ್ಲಿರುವ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಜು.29ರಂದು ಶ್ರೀಚಾಮುಂಡೇಶ್ವರಿ ಅಮ್ಮನವರ ಹಬ್ಬ ಮತ್ತು ಅಮ್ಮನವರ ಉತ್ಸವ ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆಯಿಂದ ಗಣಪತಿ ಪೂಜೆ, ನವಗ್ರಹ ಮತ್ತು ಮೃತ್ಯುಂಜಯ ಹೋಮ, ಬೆಳಗ್ಗೆ 11ಕ್ಕೆ ಗಣಪತಿ ಹೋಮ, ನವಗ್ರಹ, ಮೃತ್ಯುಂಜಯ ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 2 ಗಂಟೆಯಿಂದ ದೇವಸ್ಥಾನದಿಂದ ಅಮ್ಮನವರ ಉತ್ಸವ ಹೊರಟು, ಸಿದ್ದಪ್ಪಾಜಿ ಕೊಳ ತಲುಪುತ್ತದೆ. ಸಂಜೆ 6ಕ್ಕೆ ಸಿದ್ದಪ್ಪಾಜಿ ಕೊಳದಿಂದ ಅಮ್ಮನವರ ಮೆರವಣಿಗೆಯು ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ ಹಾಗೂ ಭಕ್ತಾದಿಗಳ ಕಳಸ ಹೊಂಬಾಳೆಯೊಂದಿಗೆ ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನ ತಲುಪುವುದು.

ಶ್ರೀ ಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ವಿಶೇಷ ಪೂಜೆ



ಮೈಸೂರಿನ ಸುಮಯ ಪ್ರಾಪರ್ಟೀಸ್ ವತಿಯಿಂದ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ವರ್ಧಂತಿ ಹಾಗೂ ಆಷಾಢ ಶುಕ್ರವಾರದ ಪ್ರಯುಕ್ತ ವಿಶೇಷ ಪೂಜೆ, ಅಭಿಷೇಕ, ಅಲಂಕಾರವನ್ನು ಜೆಎಸ್‌ಎಸ್ ಆಯುರ್ವೇದಿಕ್ ಆಸ್ಪತ್ರೆಯ ಬೆಟ್ಟದ ಪಾದದ ಬಳಿ ಇರುವ ತಾಯಿ ಚಾಮುಂಡೇಶ್ವರಿಯ ದೇವಸ್ಥಾನದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸುಮಯ ಪ್ರಾಪರ್ಟೀಸ್ ಮಾಲೀಕರಾದ ಸುಧೀ ಎಸ್. ಶೆಟ್ಟಿ, ವಿಶಾಖ ಸಿ. ಹೆಗಡೆ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ರೆನಿಷ್ ಮ್ಯಾಥ್ಯೂ ಆಯ್ಕೆ



ಮೈಸೂರು ಜಿಲ್ಲಾ ಬಾಸ್ಕೆಟ್ ಬಾಲ್ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕೆಬಿಸಿ ತಂಡವು ಗೆಲುವು ಸಾಧಿಸಿದೆ. ಕೆಬಿಸಿ ತಂಡದ ಆಟಗಾರ ರೆನಿಷ್ ವ್ಯಾಥ್ಯೂ ಕೆ.ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಜೂನಿಯರ್ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆ ಯಾಗಿದ್ದಾರೆ. ಈತ ಸಂತ ರೊಸೆಲ್ಲೊ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ.

ನಿಧನ

ಲಕ್ಷ್ಮಮ್ಮ



ಮೈಸೂರು: 'ಟೈಮ್ಸ್ ಆಫ್ ಇಂಡಿಯಾ' ಮುಖ್ಯ ವಿತರಕ ಹೊನ್ನಪ್ಪ ನಾಗರಾಜು) ಅವರ ತಾಯಿ, ಲೇಟ್ ಶಿವಣ್ಣ ಅವರ ಪತ್ನಿ ಶ್ರೀಮತಿ ಲಕ್ಷ್ಮಮ್ಮ ಶನಿವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುಡುವ ಸ್ಮಶಾನದಲ್ಲಿ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಪ್ರಸಾದ್



ಮೈಸೂರು ನಗರದ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ದೇವಾಲಯದ ಬೀದಿಯ ನಿವಾಸಿ ರಾಮಪ್ರಸಾದ್ (50) ಅವರು ಶುಕ್ರವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಇವರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ವರ್ಧಂತಿ ಉತ್ಸವ

ರುದ್ರಾಭಿಷೇಕ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ ಬಳಿಕ ಅಲಂಕಾರ, ಮಂಗಳಾರತಿ ನಂತರ ಬೆಳಗ್ಗೆ 8 ಗಂಟೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಅಪಾರ ಸಂಖ್ಯೆಯ ಭಕ್ತರು ದೇವಿ ದರ್ಶನ ಪಡೆದು ಪುನೀತರಾದರು.

ಚಿನ್ನದ ಪಲ್ಲಕ್ಕಿ ಮಂಟಪೋತ್ಸವ: ಬೆಳಗ್ಗೆ 9.30ಕ್ಕೆ ಮಹಾಮಂಗಳಾರತಿ ನಂತರ ಬೆಳಗ್ಗೆ 10.20ಕ್ಕೆ ಆಭರಣಗಳಿಂದ ಅಲಂಕೃತಗೊಂಡಿದ್ದ ಉತ್ಸವ ಮೂರ್ತಿಯನ್ನು ಅರಮನೆಯಿಂದ ತಂದ ಚಿನ್ನದ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. 10.35ಕ್ಕೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಿನ್ನದ ಪಲ್ಲಕ್ಕಿಯನ್ನು ಎಳೆಯುವ ಮೂಲಕ ಮಂಟಪೋತ್ಸವ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ಚಾಮುಂಡಿಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಆಡಳಿತಾಧಿಕಾರಿ ರೂಪ, ಇನ್ನಿತರರು ಕೈಜೋಡಿಸಿದರು.

ಅರಮನೆಯಿಂದ ಆಗಮಿಸಿದ್ದ ಬಿರುದು, ಬಾವಲಿ, ಛತ್ರಿ, ಚಾಮರದ ಗೌರವದೊಂದಿಗೆ ಮಂಗಳವಾದ್ಯದ ಹಿಮ್ಮೇಳ, ಪೊಲೀಸ್ ಬ್ಯಾಂಡ್ ವಾದನದೊಂದಿಗೆ ಪಲ್ಲಕ್ಕಿ ಉತ್ಸವವನ್ನು ದೇವಾಲಯದ ಸುತ್ತ ಸಾಗಿತು. ಈ ವೇಳೆ ಅಪಾರ ಸಂಖ್ಯೆಯ ಭಕ್ತರು ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು ಚಾಮುಂಡೇಶ್ವರಿ ದೇವಿಗೆ ಜೈಕಾರ ಹಾಕಿ ಭಕ್ತಿ ಮೆರೆದರು.

ಖಾಸಗಿ ವಾಹನಕ್ಕೆ ನಿರ್ಬಂಧ: ಇಂದು ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿತ್ತು. ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು, ಪ್ರವಾಸಿಗರು ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ವಾಹನ ನಿಲುಗಡೆ ಮಾಡಿ, ದೇವಾಲಯದ ಆಡಳಿತ ಮಂಡಳಿ ವತಿಯಿಂದ ಏರ್ಪಡಿಸಿದ್ದ ಉಚಿತ ಬಸ್ ಮೂಲಕ ಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದರು.

ಸಿಹಿ ಹಂಚಿ ಸಂಭ್ರಮ: ದೇವಿಯ ಅನೇಕ ಆರಾಧಕರು ಸಿಹಿ ತಂದು ಭಕ್ತರಿಗೆ ಹಂಚುವ ಮೂಲಕ ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವದಲ್ಲಿ ಸಂಭ್ರಮಪಟ್ಟರು. ಬೆಟ್ಟದ ತಪ್ಪಲು, ಮೆಟ್ಟಿಲುಗಳ ಬಳಿಯೂ ಸಿಹಿ ವಿತರಿಸುತ್ತಿದ್ದ ದೃಶ್ಯ ಕಂಡು ಬಂದಿತು.

ದರ್ಬಾರ್ ಉತ್ಸವ: ರಾತ್ರಿ 8.30ಕ್ಕೆ ದೇವಾಲಯದ ಆವರಣದಲ್ಲಿ ಚಾಮುಂಡೇಶ್ವರಿ ಉತ್ಸವ, ಫಲಪೂಜೆ ನೆರವೇರಿತು. ಅಲ್ಲದೆ, ದರ್ಬಾರ್ ಉತ್ಸವ, ಮಂಟಪೋತ್ಸವ ನೆರವೇರಿಸುವ ಮೂಲಕ ವರ್ಧಂತಿ ಮಹೋತ್ಸವಕ್ಕೆ ತೆರೆ ಬಿದ್ದಿತು. ರಾತ್ರಿ 10 ಗಂಟೆವರೆಗೂ ಅಪಾರ ಸಂಖ್ಯೆಯ ಭಕ್ತರು ದೇವಾಲಯಕ್ಕೆ ಬಂದು ತಾಯಿಯ ದರ್ಶನ ಪಡೆದರು.

ಡಿಸಿಎಂ ಡಿಕೆಶಿ ದೆಹಲಿ ಪ್ರವಾಸ

ಮತ್ತು ಜೆಡಿಎಸ್ ನಾಯಕರು ದಾರಿ ತಪ್ಪಿಸುತ್ತಿ ದ್ದಾರೆ ಎಂದು ಹಗರಣಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆ ಮತ್ತು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಮುಖಂಡರ ಗಮನಕ್ಕೆ ತರಲಿದ್ದಾರೆ. ದೆಹಲಿ ಭೇಟಿ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಲಿದ್ದಾರೆ. ಉನ್ನತ ಮೂಲಗಳ ಪ್ರಕಾರ ವರಿಷ್ಠರೇ ಉಭಯ ನಾಯಕರನ್ನು ದೆಹಲಿಗೆ ಆಹ್ವಾನಿಸಿದ್ದಾರೆ ಎನ್ನಲಾಗಿದೆ, ಆದರೆ, ಇದನ್ನು ಕೆಪಿಸಿಸಿ ಕಚೇರಿ ನಿರಾಕರಿಸಿ, ಎರಡು ವಾರಗಳ ಮುಂಚೆಯೇ ದೆಹಲಿ ಪ್ರವಾಸ ನಿರ್ಧಾರವಾಗಿತ್ತು ಎಂದಿದೆ.

ದೆಹಲಿ ಭೇಟಿ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನಿತಿನ್ ಗಡ್ಕರಿ, ಅಮಿತ್ ಷಾ, ಜಲಶಕ್ತಿ ಹಾಗೂ ಕೃಷಿ ಸಚಿವರನ್ನೂ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಭೇಟಿ ಮಾಡುವ ಸಾಧ್ಯತೆ ಇದೆ.

ನಾಡಿನ ಸಮೃದ್ಧಿಗೆ ಪ್ರಾರ್ಥಿಸಿದ್ದೇನೆ...

ನೀಡಿ ಪೂಜೆ ಸಲ್ಲಿಸಿ ಬರುತ್ತೇನೆ ಎಂದರು. ಇದೇ ವೇಳೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ವರ್ಧಂತಿ ಮಹೋತ್ಸವದಲ್ಲಿ ನಾನು ಸಂಸದನಾಗಿ ಮಾತ್ರ ಭಾಗಿಯಾಗಿಲ್ಲ. ಚಾಮುಂಡೇಶ್ವರಿ ನಮ್ಮ ಕುಲದೇವತೆ. ಸಂಪ್ರದಾಯಕ್ಕೆ ಅನುಸಾರವಾಗಿ ವರ್ಧಂತಿ ಮಹೋತ್ಸವದಲ್ಲಿ ಭಾಗಿಯಾಗಿದ್ದೇವೆ. ನಾಡಿಗೆ ಉತ್ತಮ ಮಳೆ ಬೆಳೆ ಆಗಲಿ ಎಂದು ತಾಯಿಯಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇವೆ ಎಂದು ತಿಳಿಸಿದರು.

ರಾಜ್ಯ ಚುನಾವಣಾ ಆಯುಕ್ತ

ನಡೆಯಲಿದ್ದು, ನ್ಯಾಯಾಲಯ ಅಂದು ಏನು ನಿರ್ದೇಶನ ನೀಡುತ್ತ ದೆಯೊ ಅದರಂತೆ ನಡೆಯಲಾಗುವುದು ಎಂದು ಸಂಗ್ರೇಶಿ ತಿಳಿಸಿದರು. ರಾಜ್ಯ ಚುನಾವಣಾ ಆಯುಕ್ತರಾಗಿ ನೇಮಕಗೊಂಡಿರುವ ಹಿನ್ನೆಲೆ ಮೈಸೂರು ವಕೀಲರ ಸಂಘದವರು ಇಂದು ಜಿ.ಎಸ್. ಸಂಗ್ರೇಶಿ ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಅಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್ ಹಾಜರಿದ್ದರು.

ವನ್ಯಜೀವಿ ವಿಭಾಗದ ಮುಂಚೂಣಿ ಸಿಬ್ಬಂದಿಗೆ ಹಾರ್ಡ್‌ಶಿಪ್ ಅಲೋಯನ್ಸ್ ಮಂಜೂರು

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ



ಬೆಂಗಳೂರು, ಜು.27(ಕೆಎಂಶಿ)–ವನ್ಯಜೀವಿ ವಿಭಾಗಗಳ ಮುಂಚೂಣಿ ಸಿಬ್ಬಂದಿಗೆ ಕಠಿಣ ಕೆಲಸದ ಭತ್ಯೆ (ಹಾರ್ಡ್‌ಶಿಪ್ ಅಲೋಯನ್ಸ್) ಮಂಜೂರು ಮಾಡಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ.ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಆದೇಶ ಹೊರಡಿಸಿರುವ ಅವರು, ಅರಣ್ಯ ಇಲಾಖೆ ಸಿಬ್ಬಂದಿಯ ಬಹುದಿನಗಳ ಬೇಡಿಕೆ ಈಡೇರಿಸಲಾಗಿದೆ. ವಲಯ ಅರಣ್ಯಾಧಿಕಾರಿ ಮತ್ತು ಉಪವಲಯ ಅರಣ್ಯಾಧಿಕಾರಿಗಳಿಗೆ ಮಾಸಿಕ ತಲಾ 3,500 ರೂ., ಅರಣ್ಯ ರಕ್ಷರಿಗೆ 2,700 ರೂ. ಹಾಗೂ 'ಡಿ' ದರ್ಜೆ ನೌಕರರಿಗೆ 2,000 ರೂ. ನೀಡಲು ತೀರ್ಮಾನಿಸಲಾಗಿದೆ ಎಂದಿದ್ದಾರೆ. ಚಿಕ್ಕಮಗಳೂರು, ಹಾಸನ, ಮೈಸೂರು, ಕೊಡಗು, ಚಾಮರಾಜನಗರ, ರಾಮನಗರ



ಜಿಲ್ಲೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಬಂಡೀಪುರ ವ್ಯಾಪ್ತಿಯಲ್ಲಿ ಆನೆ ಹಾವಳಿ ತಡೆಗೆ ರಚಿಸಲಾಗಿರುವ ಕಾರ್ಯಪಡೆಯಲ್ಲಿ ಕೆಲಸ ನಿರ್ವಹಿಸುವ ಹೊರಗುತ್ತಿಗೆ ನೌಕರರು ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿಗೆ ಮಾಸಿಕ ಕರ್ತವ್ಯ ನಿರ್ವಹಿಸಿದ 6 ದಿನಗಳಿಗೆ 500 ರೂ. ಆಧಾರದಲ್ಲಿ (ಷರತ್ತಿಗೆ ಒಳಪಟ್ಟು) ತಿಂಗಳಿಗೆ ಗರಿಷ್ಠ 2,000 ರೂ. ನೀಡಲು ಆದೇಶ ಹೊರಡಿಸಲಾಗಿದೆ. ನಂಜನಗೂಡು, ಎಚ್.ಡಿ.ಕೋಟೆ, ಸರಗೂರು, ಟಿ.ನರಸೀಪುರ, ಮಂಡ್ಯ, ಪಾಂಡವಪುರ, ನಾಗಮಂಗಲ ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿರತೆ ಕಾರ್ಯಪಡೆ, ವನ್ಯಜೀವಿಗಳನ್ನು ಹಿಮ್ಮೆಟ್ಟಿಸುವ ಕ್ಷಿಪ್ರ ಸ್ಪಂದನಾ ಪಡೆ ಮತ್ತು ಅರಣ್ಯದೊಳಗೆ ಕಳ್ಳಬೇಟೆ ಶಿಬಿರಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿ, ಅಲ್ಲದೆ, ಹೊರಗುತ್ತಿಗೆ ನೌಕರರಿಗೂ ಭತ್ಯೆ ಆದೇಶ ಅನ್ವಯವಾಗಲಿದೆ. ನಾಗರಹೊಳೆ ಮತ್ತು ಬಂಡೀಪುರ ಅಭಯಾರಣ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಸಿಬ್ಬಂದಿ ಮತ್ತು ಹೊರಗುತ್ತಿಗೆ ನೌಕರರು ಚಳಿ, ಮಳೆ, ಗಾಳಿ ಎನ್ನದೆ, ವನ್ಯಜೀವಿಗಳ ದಾಳಿ ಅಪಾಯದ ನಡುವೆಯೂ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ಗಮನಿಸಿ, ವಿಶೇಷ ಭತ್ಯೆ ನೀಡಲು ತೀರ್ಮಾನಿಸಿದ್ದಾಗಿ ಸಚಿವರು ತಿಳಿಸಿದ್ದಾರೆ.

ರೈತರಿಗೆ 3 ದಿನಗಳ ತರಬೇತಿ ಕಾರ್ಯಕ್ರಮ

ಮೈಸೂರು: ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆ.1ರಿಂದ 3ರವರೆಗೆ "ಬಾಳೆ ಬೆಳೆಗಳಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು, ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ" ಎಂಬ ವಿಷಯದ ಬಗ್ಗೆ ರೈತ/ ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ/ ರೈತಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಒದಗಿಸಲಾಗುತ್ತಿದ್ದು, ಆಸಕ್ತರು ರೈತ/ರೈತಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ದೂ. ಸಂ: 8277933177ಗೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಕೇವಲ ಮೈಸೂರು ಜಿಲ್ಲೆಯ 40 ರೈತ/ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಕಾರ್ಗಿಲ್ ವಿಜಯ ದಿವಸ್; ಹುತಾತ್ಮ ಯೋಧರಿಗೆ ನಮನ



ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು, ಜು. 27–ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಎನ್‌ಸಿಸಿ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಕಾಲೇಜಿನಲ್ಲಿ ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಸೌಮ್ಯ ಈರಪ್ಪ ಹಾಗೂ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಅರ್ಚನ ಸ್ವಾಮಿ ಅವರು ಕಾರ್ಗಿಲ್ ಯುದ್ಧದಲ್ಲಿ ಹೋರಾಟ ಮಾಡಿ ಹುತಾತ್ಮರಾದ ವೀರಯೋಧರಿಗೆ ಗೌರವ ಸಲ್ಲಿಸುವುದರ ಮೂಲಕ ಯೋಧರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿದರು.

ಬಳಿಕ ಮಾತನಾಡಿದ ಡಾ.ಸೌಮ್ಯ ಈರಪ್ಪ ಯೋಧರ ರಕ್ಷಣೆಯಲ್ಲಿ ನಾವೆಲ್ಲರೂ ಸುರಕ್ಷಿತವಾಗಿ ಬದುಕುತ್ತಿದ್ದೇವೆ ಎಂದರು.

ಅರ್ಚನಾ ಸ್ವಾಮಿ ಮಾತನಾಡಿ, ದೇಶದ ಗಡಿಭಾಗದಲ್ಲಿ ಯೋಧರು ಕಾಯುತ್ತಿರುವುದರಿಂದಲೇ ನಾವೆಲ್ಲರೂ ಸಹ ನೆಮ್ಮದಿಯಿಂದ ಬದುಕುತ್ತಿದ್ದೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರು, ಎನ್‌ಸಿಸಿ ಕೆಡೆಟ್‌ಗಳು ಭಾಗವಹಿಸಿದ್ದರು.

ಇಂದು ಮೈಸೂರಲ್ಲಿ 'ದಮನಿತರ ಬಂಗಾರದ ದಿನ' ಕಾರ್ಯಕ್ರಮ

ಮೈಸೂರು, ಜು.27(ಜಿಎ)–ಚಾರ್ವಾಕ ವೈಚಾರಿಕ ಮಹಾಮನೆ ಸಂಸ್ಥೆ ವತಿಯಿಂದ ಜು.28ರಂದು ಬೆಳಗ್ಗೆ 11.30ಕ್ಕೆ ಮಂಡ್ಯ ತಾಲೂಕಿನ ಕಾಗೆಮಂಟಿಯ ಬೋರೇಗುಡ್ಡದ ಚಾರ್ವಾಕ ವೈಚಾರಿಕ ಮಹಾಮನೆಯಲ್ಲಿ 'ದಮನಿತರ ಬಂಗಾರದ ದಿನ' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಖ್ಯಾತ ರಂಗಕರ್ಮಿ ಗಿರೀಶ್ ಮಾಚಳ್ಳಿ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಇದಕ್ಕೂ ಮೊದಲು ನಮ್ಮ ತಂಡದಿಂದ 'ಮನುಸ್ಮೃತಿ V/S ಭಾರತ ಸಂವಿಧಾನ' ನಾಟಕ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸದ ಸುನೀಲ್ ಬೋಸ್ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಎಂಎಲ್‌ಸಿ ಡಾ.ಯತೀಂದ್ರ ಶಾಸಕ ದರ್ಶನ್ ಪುಟ್ಟಣ್ಣಯ್ಯ ಆಗಮಿಸಲಿದ್ದಾರೆ ಎಂದರು.

ಮಧ್ಯಾಹ್ನ 2.30ಕ್ಕೆ ಕುಮಾರ್ ಮತ್ತು ತಂಡದವರಿಂದ ನೂರು ತಮಟೆ ನಗಾರಿ ಮದ್ದಳೆಗಳ ಸಂಭ್ರಮ, ಸಿಂಚನ ಚಿಕ್ಕೊಳಲೆ, ಸಿದ್ದು ಬದನವಾಳು ಅವರಿಂದ ಭಾವಾಭಿನಂದನ ಕಾರ್ಯಕ್ರಮ ಇರಲಿದೆ. ಜೊತೆಗೆ, ಅವರೆಕಾಳು ಮುದ್ದೆ ಪಾಯಸದೂಟದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಎಂ.ಶಿವಪ್ರಸಾದ್, ಪದ್ಮನಾಭ, ಸಂತೋಷ್, ಸಿದ್ಧಾರ್ಥ್, ದಿವ್ಯ ಚೇತನ, ನಿರ್ಮಲಾ ದೇವಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.07.2024 ಭಾನುವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ನೈರುತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಶ್ರೀ ಸೀತಾ ರಾಮ ಪ್ರಾರ್ಥನಾ ಮಂದಿರ, ಮಾನಂದವಾಡಿ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಶ್ರೀ ಲಕ್ಕಮ್ಮದೇವಿ ಕಲಾ ಪೋಷಕ ಸಂಘ :** ರಾಷ್ಟ್ರೀಯ ಜಾನಪದ ಲೋಕೋತ್ಸವ, ಸಾನ್ನಿಧ್ಯ: ಡಾ.ಗುರುಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ವಿ.ಗುರುಮೂರ್ತಿ ಸುನಾಮಿ, ಉಪಸ್ಥಿತರು: ಸಿದ್ರಾಮ ಎಂ.ನಿಲಜಗಿ, ಡಾ.ಟಿ.ತ್ಯಾಗರಾಜು, ಡಾ.ಸಿದ್ದಣ್ಣ ಬ್ಯಾಡಗಿ, ಜಡೇಶ ಎಮ್ಮಿಗನೂರು, ಆನಂದ್ ನಾಯಕ್ ಚಿಕ್ಕಣ್ಣ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸೈನೊಸೈಟಿಸ್, ತಲೆನೋವಿಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ ಸಂಜೆ 4ರವರೆಗೆ.

■ **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ:** ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಬೆಳಗ್ಗೆ 10 ರಿಂದ.

■ **ಕಸ್ತೂರಿ ಸಿರಿಗನ್ನಡ ವೇದಿಕೆ, ಕೀರ್ತಿ ಯುವತಿ ಮಹಿಳಾ ಮಂಡಳಿ:** ಆಷಾಢ ಕವಿಗೋಷ್ಠಿ, ಉದ್ಘಾಟನೆ: ಸಹಾಯಕ ಪ್ರಾಧ್ಯಾಪಕ ಡಾ.ಸುಮಿತ್ರ ಮಳವಳ್ಳಿ, ಅಧ್ಯಕ್ಷತೆ: ಹಿರಿಯ ಸಾಹಿತಿ ಸಿದ್ದೇಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಸಾಹಿತಿ ಆರ್.ರಂಗಸ್ವಾಮಿ, ನಾಗರತ್ನಮ್ಮ, ಮುಖ್ಯ ಅತಿಥಿಗಳು: ಆರ್.ಮುನಿರಾಜು, ಸತೀಶ್‌ರಾಜು, ಶೇಖರ್, ಶ್ರೀನಿವಾಸರಾಜು, ಮಂಜುಳಾ ರಮೇಶ್, ಸ್ಥಳ: ಕೊಲ್ಲಾಪುರದಮ್ಮನವರ ದೇವಾಲಯ, ಬೆಳಗ್ಗೆ 10ಕ್ಕೆ

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಭೂಮಿಗಿರಿ ನಾರಾಯಣಪ್ಪ ಸಾಂಸ್ಕೃತಿ ಪ್ರತಿಷ್ಠಾನ, ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ವೈದ್ಯರ ಮತ್ತು ಪತ್ರಕರ್ತರ ದಿನಾಚರಣೆ, ಉದ್ಘಾಟನೆ: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಉಪಸ್ಥಿತರು: ಡಾ.ಸದಾನಂದ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಸಾಹಿತ್ಯ ರತ್ನ ಪ್ರಶಸ್ತಿ: ಅಂಶಿ ಪ್ರಸನ್ನ ಕುಮಾರ್, ವೈದ್ಯರತ್ನ ಪ್ರಶಸ್ತಿ: ಡಾ.ಸದಾನಂದ, ಡಾ.ರಘುನಂದನ ಶೇಖರಪ್ಪ, ಮಾಧ್ಯಮ ರತ್ನ ಪ್ರಶಸ್ತಿ: ಸಿ.ಕೆ.ಮಹೇಂದ್ರ, ರಾಮು, ಸ್ಥಳ:ಶ್ರೀ ಮಹದೇಶ್ವರ ದೇವಸ್ಥಾನದ ಆವರಣ, ಪಡುವಾರಹಳ್ಳಿ, ಬೆಳಗ್ಗೆ 10 ರಿಂದ.

■ **ನಾದವಿದ್ಯಾಲಯ ಸಂಗೀತ ಮತ್ತು ನೃತ್ಯ ಅಕಾಡೆಮಿ :** 'ನಾದ ನೃತ್ಯ ಮುಕುಳ' ಪುಟ್ಟ ಮಕ್ಕಳ ಭರತ ನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ವಿದುಷಿ ಅರಣ್ಯ ನರೇನ್, ವಿದ್ವಾನ್ ವ್ಯಾಸ ತೀರ್ಥ ಆಚಾರ್ಯ ಹಾಗೂ ಭರತನಾಟ್ಯ ಕಲಾವಿದರು ಗುರು ವಿದುಷಿ ಮಿತ್ರಾನವೀನ್ ನೇತೃತ್ವದಲ್ಲಿ 75 ಪುಟಾಣಿಗಳಿಂದ ಶಾಸ್ತ್ರೀಯ ಭರತನಾಟ್ಯ, ನಿರ್ದೇಶನ ಹಾಗೂ ನಟುವಾಂಗದಲ್ಲಿ ಗುರು ವಿದುಷಿ ಮಿತ್ರಾನವೀನ್, ಹಾಡುಗಾರಿಕೆಯಲ್ಲಿ ವಿದ್ವಾನ್ ಎಂ.ಎಸ್.ನವೀನ್, ಮೃದಂಗದಲ್ಲಿ ವಿದ್ವಾನ್ ಜಿ.ಎಸ್.ನಾಗರಾಜ್, ಕೊಳಲಿನಲ್ಲಿ ವಿದ್ವಾನ್ ವಿವೇಕ ಕೃಷ್ಣ, ಸ್ಥಳ: ರಾಮಾ ಗೋವಿಂದ ರಂಗವೇದಿಕೆ, ಗಾನಭಾರತಿ, ಕುವೆಂಪುನಗರ, ಬೆಳಗ್ಗೆ 10.30 ರಿಂದ.

■ **ತರಳಬಾಳು ಸಮಾಗಮ :** ಭಾವಸಂಗಮ ಹಾಗೂ ದತ್ತಿ ಕಾರ್ಯಕ್ರಮ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ. ಎಸ್.ಎಸ್. ರಮೇಶ್ ಅವರಿಂದ ವಚನಕಾರರ ಚಿಂತನೆಗಳ ಪ್ರಸ್ತುತತೆ, ಅಧ್ಯಕ್ಷತೆ : ತರಳಬಾಳು ಸಮಾಗಮ ಅಧ್ಯಕ್ಷ ಡಾ.ಎಸ್.ಬಿ. ವಸಂತಕುಮಾರ್, ಕು. ಚೂಡಾಮಣಿ ಅವರಿಂದ ವಚನ ಗಾಯನ ಮತ್ತು ಭಾವಗೀತೆಗಳು, ಸ್ಥಳ: ತರಳವಾಳು ಕಾಲೇಜಿನ ಹೊಸ ಕಟ್ಟಡ, ತೊಣಚಿಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ಸಂವಹನ : ಪ್ರಕಾಶಕರು, ಕನ್ನಡ ಸಾಹಿತ್ಯ ಕಲಾಕೂಟ :** ಹಂಪನಾ ಲೇಖನ ಸಂಚಯ ಪರಾಮರ್ಶನ ಲೋಕಾರ್ಪಣೆ ಸಮಾರಂಭ, ಸಂಪಾದಕರು: ಡಾ.ಎಸ್.ಪಿ.ಪದ್ಮಪ್ರಸಾದ್, ಅಧ್ಯಕ್ಷತೆ: ಕುವೆಂಪು ಭಾಷಾ ಭಾರತಿ ಅಧ್ಯಕ್ಷ ಚನ್ನಪ್ಪ ಕಟ್ಟಿ, ಲೋಕಾರ್ಪಣೆ: ವಿಶ್ರಾಂತ ಕುಲಪತಿ ಪ್ರೊ.ಹೀ.ಚಿ.ಬೋರಲಿಂಗಯ್ಯ, ಸನ್ಮಾನ: ಡಾ.ಸಿ.ನಾಗಣ್ಣ, ಪ್ರೊ. ಪ್ರೀತಿ ಶುಭಚಂದ್ರ, ಉಪಸ್ಥಿತರು : ಪ್ರೊ. ಹಂಪನಾ, ಡಾ. ಎಸ್.ಪಿ. ಪದ್ಮಪ್ರಸಾದ್, ಡಾ. ಕೆ. ರಘುರಾಂ ವಾಜಪೇಯಿ, ಎಂ. ಚಂದ್ರಶೇಖರ್, ಡಿ.ಎನ್. ಲೋಕಪ್ಪ, ಸ್ಥಳ: ರೋಟರಿ ಕೇಂದ್ರ, ಪ್ರೊ. ಎ.ಸಿ. ದೇವೇಗೌಡ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕೇಂದ್ರ ಸರ್ಕಾರಿ ಪಿಂಚಣಿದಾರರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಿ.ಎಂ. ಪರಮೇಶ್ವರಯ್ಯ, ಸ್ಥಳ: ಸದ್ವಿದ್ಯಾ ಪಾಠಶಾಲೆ ಪ್ರಾಂಗಣ, ಎನ್.ಎಸ್. ರಸ್ತೆ, ಬೆಳಗ್ಗೆ 10.30ಕ್ಕೆ.

■ **ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಬಿ.ಎಸ್. ಶ್ರೀನಾಥ್, ಸ್ಥಳ: ಬ್ರಾಹ್ಮಣ ಧರ್ಮ ಸಹಾಯ ಸಭಾ ಕಲ್ಯಾಣ ಭವನ, ಬೆಳಗ್ಗೆ 11ಕ್ಕೆ.

■ **ದೇವಮಲ್ಲು ಕ್ಷತ್ರಿಯ ಚೆಟ್ಟಿ ಮತ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ಚಂದ್ರಶೇಖರ, ಸ್ಥಳ: ಸಂಘದ ಆವರಣ, ವಿವೇಕಾನಂದ ವೃತ್ತ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** 26ನೇ ವರ್ಷದ ಗಾಳಿಪಟ ಹಾರಿಸುವ ಸ್ಪರ್ಧೆ, ಮುಖ್ಯ ಅತಿಥಿಗಳು: ಎಂ.ಎಂ.ನಿಖಿಲೇಶ್, ಅಧ್ಯಕ್ಷತೆ: ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಂ.ಟಿ.ಮಲ್ಲಿಕಾರ್ಜುನ್, ಸ್ಥಳ: ಉತ್ತನಹಳ್ಳಿ ಮಾರಮ್ಮ ದೇವಸ್ಥಾನದ ಮುಂಭಾಗ, ರಿಂಗ್ ರಸ್ತೆ, ಮಧ್ಯಾಹ್ನ 2ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶತಚಂಡೀ ಯಾಗ ಪ್ರಾರಂಭ, ಅನಘಾಷ್ಟಮಿ ವ್ರತ ಮತ್ತು ದತ್ತ ಸ್ವಾಮಿಗೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ವಿಷನ್ ಟೀಂ ಆಫ್ ಮೈಸೂರು, ಮೈಸೂರು ಸಿಎಚ್‌ಆರ್‌ಓ ಫೋರಂ, ಎಡಿನ್ ಬ್ರಿಡ್ಜ್ ಫೌಂಡೇಷನ್:** ಪ್ರಗತಿ ಉಜ್ವಲ್ ಭಾರತ್ ಅಂಗವಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, ಮುಖ್ಯ ಅತಿಥಿಗಳು: ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಎಂಐಟಿ ಕಾಲೇಜು ಅಧ್ಯಕ್ಷ ಡಾ. ಮುರಳಿ, ಶ್ರೀಮತಿ ತೀರ್ಥ ಎಸ್.ಸ್ವಾಮಿ, ಬಿ.ಎಂ.ಗೌತಮ್, ಹರೀಶ್ ಶೆಣೈ, ಹೇಮಾ ನಂದೀಶ್, ಗೋಪಾಲರಾಜೇ ಅರಸ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 4.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಕದಂಬ ಕಲಾಪೀಠ, ಉದಯಗಿರಿ ಕನ್ನಡ ಸಂಘ :** ಶ್ರೀಮತಿ ಸುಜಯ ಸುರೇಶ್ ಅವರ 'ಶುಭ ಮುಹೂರ್ತಗಳು' ಪುಸ್ತಕ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಪುಸ್ತಕ ಲೋಕಾರ್ಪಣೆ: ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಕುರಿತು: ಅಂಕಣಕಾರರಾದ ಶ್ರೀಮತಿ ಹೆಚ್. ನಿವೇದಿತಾ, ಆಶಯ ನುಡಿ: ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಶ್ರೀಮತಿ ಸುಜಯ ಸುರೇಶ್, ಕದಂಬ ಕಲಾಪೀಠ ಅಧ್ಯಕ್ಷ ಬಿ.ವಿದ್ಯಾಸಾಗರ ಕದಂಬ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಸಂಜೆ 5ಕ್ಕೆ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್ತು :** ಕವಿಯ ನೋಡಿ ಕವಿತೆ ಕೇಳಿ, ಕಾವ್ಯವಾಚನ ಮತ್ತು ಗೀತ ಗಾಯನ, ಉಪಸ್ಥಿತರು : ಡಾ. ಹೆಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣ್‌ರಾವ್, ಡಾ. ಜಯಪ್ಪ ಹೊನ್ನಾಳಿ, ಉದ್ಘಾಟನೆ : ಪರಿಷತ್ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ಅಧ್ಯಕ್ಷತೆ : ಸಂಘದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ. ನಾಗರಾಜ್ ವಿ. ಭೈರಿ, ಮುಖ್ಯ ಅತಿಥಿಗಳು : ಕಾರ್ಯಾಧ್ಯಕ್ಷ ಡಾ. ಕಿಕ್ಕೇರಿ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ, ಡೇವಿಡ್ ಪ್ರತಿಭಾಂಜಲಿ, ನರಸಿಂಹಮೂರ್ತಿ, ಸ್ಥಳ: ಎಂಬಿಸಿಟಿ ಆಡಿಟೋರಿಯಂ, ವಿದ್ಯಾರಣ್ಯಪುರಂ, ಸಂಜೆ 5ಕ್ಕೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ :** ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರು ಪೂರ್ಣಿಮೆ. ಸಾಧನಾ ಸಪ್ತಾಹ ಹಾಗೂ ಆರಾಧನಾ ಕಾರ್ಯಕ್ರಮ. ಚಿನ್ಮಯ ಮಿಷನ್‌ನ ಗುರುಸರ್ವಸ್ವ ಪೂಜ್ಯ ಸ್ವಾಮಿನಿ ಕಾಶಿಕಾನಂದ ಅವರಿಂದ ಪ್ರವಚನ. ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ. ಸಂಜೆ: 6.30ರಿಂದ 7.30ರವರೆಗೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಮಂಟೇಸ್ವಾಮಿ ಕಾವ್ಯ ಪ್ರಯೋಗ, ಪ್ರಸ್ತುತಿ : ನಿರ್ದಿಗಂತ, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಾಲಾ ಆವರಣ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ರಂಗರೂಪ : ಶಿರಗಾನಹಳ್ಳಿ ಶಾಂತನಾಯಕ್, ನಿರ್ದೇಶನ : ಸಿ. ಬಸವಲಿಂಗಯ್ಯ, ಸ್ಥಳ : ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಅಮೋಘ ಜುಗಲ್‌ಬಂದಿ ಕಾರ್ಯಕ್ರಮ, ವಿದ್ವಾನ್ ಎಲ್.ವಿ.ಮುಕುಂದ್–ಕೊಳಲು, ವಿದ್ವಾನ್ ಸಮೀರ್‌ರಾವ್–ಬಾನ್ಸುರಿ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಆದರ್ಶ ಶೆಣೈ–ತಬಲ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಮಹೇಶ್ ಭಟ್ಟ್ ಉಮ್ಮಚಗಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ ವಿ.ಭಟ್, ವ್ಯಾಖ್ಯಾನ: ಪ್ರೊ.ಮ.ವರದರಾಜು, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ : ಶಿಕ್ಷಕ, ಸಾಹಸಿ, ಪ್ರಾಗೈತಿಹಾಸಿಕ ಸ್ಮಾರಕಗಳ ಸಂಶೋಧಕ, ಹಾವುಗಳ ಸಂರಕ್ಷಕ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕು, ಸಂತೆಬಾಚಳ್ಳಿಯ ರಂಗಸ್ವಾಮಿ ಎಸ್.ಅವರೊಂದಿಗೆ ಮಾತುಕತೆ, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ಬಾಯಿ ಆರೋಗ್ಯ ದಿನಾಚರಣೆಯ ಸಂಬಂಧ ವಿಶೇಷ ಕಾರ್ಯಕ್ರಮ, ಒಸಡುಗಳ ಆರೋಗ್ಯ ಮತ್ತು ಬಾಯಿಯ ಸ್ವಚ್ಛತೆ ಕುರಿತು ಮೈಸೂರಿನ ಜೆ.ಎಸ್.ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಒಸಡು ಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ. ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ: ಹಕ್ಕಿಗೂಡು, ಪ್ರಸ್ತುತಿ: ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ರವರ ಮನದ ಮಾತು

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ: ಗೊರವಾಲೆ ರುದ್ರಪ್ಪ ಮತ್ತು ಸಂಗಡಿಗರಿಂದ ತತ್ವಪದಗಳು, 1.20 ಭಾವಗೀತೆಗಳು–ಅನುರಾಧಾ ಧಾರೇಶ್ವರ್, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಕಾಸಿದ್ರೆ ಕೈಲಾಸ', 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ: ತಾಳಮದ್ದಲೆ, ಪ್ರಸಂಗ: ಸಂಧಾನ ಸಿದ್ಧತೆ, ವಿದುರಾತಿಥ್ಯ, ಪ್ರಸ್ತುತಿ: ಕಾಸರಗೋಡು ಎಡನೀರು ಮಠದ ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿ ಮತ್ತು ಬಳಗದವರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.51 ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ಶ್ರೀಲಂಕಾದ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಎರಡನೇ ಟಿ20 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ಶ್ರೀಲಂಕಾದ ಪಲ್ಲೆಕೆಲೆ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಎರಡನೇ ಟಿ20 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ನಾನು ಬದಲಿ ನಿವೇಶನ ಪಡೆದಿಲ್ಲ; ರೈತರಿಬ್ಬರಿಗೆ ಶಿಫಾರಸು ಮಾಡಿದ್ದೇನೆ ಅಷ್ಟೆ

ನನ್ನ ಮೇಲಿನ ಆರೋಪಕ್ಕೆ ಏಳು ದಿನದಲ್ಲಿ ಸಚಿವ ಭೈರತಿ ಸುರೇಶ್ ಸ್ಪಷ್ಟನೆ ನೀಡದಿದ್ದರೆ

ಮಾನಹಾನಿ ಪ್ರಕರಣ ದಾಖಲು

● ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಎಚ್ಚರಿಕೆ ● ಮುಡಾ ಅವಾಂತರಕ್ಕೆ ಭೈರತಿ ಸುರೇಶ್ ಕಾರಣ; ಅವರು ಮಾಡಿದ್ದು ಈಗ ಸಿಎಂ ತಲೆಗೆ ಬಂದಿದೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಶಾಸಕ ಜಿ.ಟಿ.ದೇವೇಗೌಡರು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜು.27(ಬಿಎಲ್‌ಯು)–ಮುಡಾದಿಂದ ನಿವೇಶನ ಪಡೆದಿರುವುದಾಗಿ ಆಧಾರರಹಿತ ಆರೋಪ ಮಾಡಿರುವ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಒಂದು ವಾರದಲ್ಲಿ ಸ್ಪಷ್ಟ ವಿವರಣೆ ನೀಡದಿದ್ದರೆ ಮಾನಹಾನಿ ಪ್ರಕರಣ ದಾಖಲಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ಎಚ್ಚರಿಸಿದ್ದಾರೆ. ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿ ಕಳೆದುಕೊಂಡ ನನ್ನ ಕ್ಷೇತ್ರದ ಇಬ್ಬರು ರೈತರಿಗೆ ಶೇ.50:50 ಅನುಪಾತದಡಿ ಪರಿಹಾರವಾಗಿ ನಿವೇಶನ ನೀಡುವ ಸಂಬಂಧ ಪ್ರಸ್ತಾವನೆಯನ್ನು ಮುಡಾ ಸಭೆಯಲ್ಲಿ ಮಂಡಿಸುವಂತೆ ಶಿಫಾರಸು ಮಾಡಿದ್ದೇನೆಯೇ ಹೊರತು, ನನಗೇ ಬದಲಿ ನಿವೇಶನ ನೀಡುವಂತೆ ಕೋರಿಲ್ಲ ಎಂದು ಸ್ಪಷ್ಟಪಡಿಸಿದರು.

ಇಬ್ಬರು ರೈತರಿಗೆ ಶಿಫಾರಸು ಮಾಡಿದ್ದೇನೆ: ಮೈಸೂರಿನ ಮಾದಗಳ್ಳಿ ಸರ್ವೆ ನಂಬರ್ 17ರಲ್ಲಿ ಭಾಗ್ಯ ಎಂಬುವರ 2 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡ ಮುಡಾ ಪರಿಹಾರ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಭಾಗ್ಯ ಸೇರಿದಂತೆ ನನ್ನ ಕ್ಷೇತ್ರದ ಇಬ್ಬರು ರೈತರಿಗೆ ಪರಿಹಾರವಾಗಿ ನಿವೇಶನ ನೀಡುವಂತೆ ಶಿಫಾರಸು ಮಾಡಿದ್ದೇನೆ. ಅದರಲ್ಲೂ ಈ ಪ್ರಸ್ತಾವನೆಯನ್ನು ಮುಡಾ ಸಭೆ ಯಲ್ಲಿ ಮಂಡಿಸಿ ಕಾನೂನು ಪ್ರಕಾರ ಕೊಡಿ ಎಂದು ಹೇಳಿದ್ದೇನೆ ಎಂದು ತಾವು ಶಿಫಾರಸು ಮಾಡಿದ್ದ ದಾಖಲಾತಿಗಳನ್ನು ಜಿ.ಟಿ. ದೇವೇಗೌಡರು ಪ್ರದರ್ಶಿಸಿದರು. ಆದರೆ ನಿನ್ನೆ ಪತ್ರಿಕಾಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಪಕ್ಕದಲ್ಲೇ ಕುಳಿತಿದ್ದ ಭೈರತಿ ಸುರೇಶ್ ನನ್ನ ವ್ಯಕ್ತಿತ್ವಕ್ಕೆ ಕಳಂಕ ತರುವಂತಹ ಆರೋಪ ಮಾಡಿದ್ದಾರೆ. ನಾನು ನಿವೇಶನ ಪಡೆದಿರುವುದಾಗಿ ಹೇಳಿದ್ದಾರೆ. ನಾನೇನಾದರೂ ನನ್ನ ಜಮೀನಿಗೆ ಪರಿಹಾರವಾಗಿ ನಿವೇಶನ ನೀಡುವಂತೆ ಕೋರಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಆದರೆ ಮುಡಾ ವಶಪಡಿಸಿಕೊಂಡ ರೈತರ ಭೂಮಿಗೆ ಪರಿಹಾರ ನೀಡುವಂತೆ ಶಿಫಾರಸು ಮಾಡಿದ್ದರೆ, ನಾನೇ ನಿವೇಶನ ಪಡೆದಿದ್ದೇನೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ ಎಂದು ಭೈರತಿ ಸುರೇಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪದೇ ಪದೇ ಇಂತಹ ಆಪಾದನೆ: ವಾಸ್ತವ ವಿಚಾರವನ್ನು ಮರೆಮಾಚಿ ಪ್ರಾಮಾಣಿಕನಾಗಿರುವ ನನ್ನ ವಿರುದ್ಧ ಪದೇ ಪದೆ ಆಪಾದನೆ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಇವತ್ತು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಜವಾಬ್ದಾರಿಯಿಂದ ಕೆಲಸ ಮಾಡಿದ್ದರೆ ಮುಡಾದಲ್ಲಿ ಇಂತಹ ಅಧ್ವಾನ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ನಂಬಿಕಸ್ಥರು ಎಂದು ಸಿದ್ದರಾಮಯ್ಯನವರು ಇಂತಹವರನ್ನು ತಮ್ಮ ಜೊತೆ ಇರಿಸಿಕೊಂಡಿದ್ದಾರೆ. ಆದರೆ ಇಂತಹವರಿಂದಲೇ ಈಗ ಸಿದ್ದರಾಮಯ್ಯ ಅವರು ಸಂಕಷ್ಟಕ್ಕೆ ಗುರಿಯಾಗುವಂತಹ ಪರಿಸ್ಥಿತಿ ಬಂದಿದೆ. ಸಚಿವರಾಗಿ ಭೈರತಿ ಸುರೇಶ್ ವಿಫಲರಾಗಿದ್ದು, ಇಷ್ಟೆಲ್ಲಾ ಅವಾಂತರಕ್ಕೆ ಅವರೇ ಕಾರಣ ಎಂದು ದೂರಿದರು.

ತಪ್ಪು ಮಾಡಿರುವುದು ಅಧಿಕಾರಿಗಳು: ಮುಡಾದಲ್ಲಿ ತಪ್ಪು ಮಾಡಿರುವುದು ಅಧಿಕಾರಿಗಳು. ಆದರೆ, ಅವರ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಅಕ್ರಮದಲ್ಲಿ ಯಾವುದೇ ಪಾತ್ರವಿಲ್ಲದ ನನ್ನ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ನಾನು ರೈತರಿಗೆ ನಿವೇಶನಕ್ಕೆ ಶಿಫಾರಸು ಮಾಡಿರುವ ದಾಖಲೆ ಸರ್ಕಾರದ ಬಳಿ ಇದೆ. ನನ್ನ ಮೇಲಿನ ಆರೋಪಕ್ಕೆ ಒಂದು ವಾರದಲ್ಲಿ ಸ್ಪಷ್ಟ ಉತ್ತರ ನೀಡಬೇಕು. ಇಲ್ಲದಿದ್ದರೆ ಮಾನಹಾನಿ ಪ್ರಕರಣ ದಾಖಲಿಸುತ್ತೇನೆ ಎಂದು ಜಿ.ಟಿ.ದೇವೇಗೌಡರು ಸಚಿವ ಭೈರತಿ ಸುರೇಶ್‌ಗೆ ಮತ್ತೊಮ್ಮೆ ಎಚ್ಚರಿಸಿದರು.

ಉಳಿದಿರುವ ಸಮಯದಲ್ಲಿ ನನ್ನ ಉಳಿಸಿ–ಬೆಳೆಸಿದ ಚಾಮುಂಡೇಶ್ವರಿ ಕ್ಷೇತ್ರದ ಜನರ ಸೇವೆ ಮಾಡುತ್ತೇನೆ....

ಮೈಸೂರು: ಜೆಡಿಎಸ್ ಪಕ್ಷದಲ್ಲಿ ಎಲ್ಲಾ ಹುದ್ದೆಗಳನ್ನೂ ಒಕ್ಕಲಿಗ ಸಮುದಾಯಕ್ಕೆ ನೀಡಿದರೆ ತಪ್ಪು ಸಂದೇಶ ನೀಡಿದಂತಾಗುತ್ತದೆ ಎಂಬ ಕಾರಣದಿಂದ ಅಹಿಂದ ವರ್ಗಕ್ಕೆ ಸೇರಿದ ಕುರುಬ ಸಮುದಾಯದ ಸುರೇಶ್ ಬಾಬು ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಟಿಡಿ ಹೇಳಿದರು.

ಸುರೇಶ್ ಬಾಬು ನೇಮಕದ ಮೂಲಕ ಸಾಮಾಜಿಕ ನ್ಯಾಯದ ಹಾದಿಯಲ್ಲಿ ನಡೆದು ಬಂದಿರುವ ಪಕ್ಷದ ಮೇಲೆ ಜನರ ವಿಶ್ವಾಸ ಮತ್ತಷ್ಟು ಹೆಚ್ಚಿದೆ. ನನಗೆ ಆ ಹುದ್ದೆ ಸಿಗಲಿಲ್ಲ ಎಂಬ ಬೇಸರವಿಲ್ಲ. ಈ ವಯಸ್ಸಲ್ಲಿ ರಾಜ್ಯ ಸುತ್ತುವ ಸಾಮರ್ಥ್ಯವೂ ಇಲ್ಲ.

70ರ ದಶಕದಿಂದಲೂ ಚಾಮುಂಡೇಶ್ವರಿ ಕ್ಷೇತ್ರದ ಜನತೆ ನನ್ನ ಮನವಿಗೆ ಓಗೊಟ್ಟು, ನಾನು ಹೇಳಿದವರನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಮತ್ತೆ, ಈಗ ನನ್ನನ್ನು ಮೂರು ಬಾರಿ ಗೆಲ್ಲಿಸಿ 'ಹ್ಯಾಟ್ರಿಕ್' ಸಾಧನೆಗೆ ಕಾರಣೀಭೂತರಾಗಿದ್ದಾರೆ. ಉಳಿದಂತಹ ಸಮಯವನ್ನು ಅವರ ಸೇವೆಗೆ ವಿನಿಯೋಗಿಸಬೇಕೆಂದಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸುತ್ತಿ ಜನರ ಕಷ್ಟ–ನಷ್ಟಗಳಲ್ಲಿ ಭಾಗಿಯಾಗಿ ಇನ್ನೂ ಹೆಚ್ಚು ಅವರ ಸೇವೆ ಮಾಡಬೇಕೆಂದಿದ್ದೇನೆ ಎಂದು ತಿಳಿಸಿದರು.

ನಿಮ್ಮಿಂದ ತನಿಖೆ ನಡೆಸಲು ಸಾಧ್ಯವೇ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸೇರಿದಂತೆ ರಾಜ್ಯದ 224 ಕ್ಷೇತ್ರದ ವಿಧಾನ ಸಭಾ ಸದಸ್ಯರ ಆಸ್ತಿ ಬಗ್ಗೆ ತನಿಖೆ ನಡೆಸಲು ನಿಮ್ಮಿಂದ ಸಾಧ್ಯವೇ? ಎಂದು ಗೌಡರು ಇದೇ ವೇಳೆ ಸರ್ಕಾರಕ್ಕೆ ಸವಾಲು ಹಾಕಿದರು. ಹಾಗೆ ಮಾಡಿದರೆ ಶಾಸಕರ ಬಳಿ ಮೊದಲು ಆಸ್ತಿ ಎಷ್ಟಿತ್ತು, ಈಗ ಎಷ್ಟು ಕೋಟಿಗೆ ಏರಿಕೆಯಾಗಿದೆ ಎಂಬುದು ಬಯಲಾಗುತ್ತದೆ ಎಂದರು.

ಈಗ ನನ್ನ ವಿರುದ್ಧ ಆರೋಪ ಮಾಡಿರುವ ಭೈರತಿ ಸುರೇಶ್ ಸೇರಿದಂತೆ ಬಹಳಷ್ಟು ಜನರು ನನ್ನ ಜೀವನ ಅರ್ಥಮಾಡಿಕೊಂಡಿಲ್ಲ. ನನ್ನಂತಹ ರಾಜಕಾರಣಿ ಈ ರಾಜ್ಯದಲ್ಲಿ ಮಾತ್ರವಲ್ಲದೆ, ದೇಶದಲ್ಲೇ ಇಲ್ಲ. ಹಾಲಿ ಶಾಸಕನಾಗಿರುವ ನಾನು ಈ ತನಕ ಸಾಲಗಾರನಾಗಿ ರಾಜಕಾರಣ ಮಾಡುತ್ತಿದ್ದೇನೆ. ನನ್ನದು ಪಾರದರ್ಶಕ ಬದುಕು ಎಂದು ಸ್ಪಷ್ಟಪಡಿಸಿದರು. ನಾನು ಪ್ರತಿನಿಧಿಸುತ್ತಿರುವ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮುಡಾದ ಶೇಕಡ 90ರಷ್ಟು ಬಡಾವಣೆಗಳು ಬರುತ್ತವೆ. ಆದರೆ ಈ ತನಕ ನನ್ನ ಹಾಗೂ ನನ್ನ ಕುಟುಂಬದ ಹೆಸರಿನಲ್ಲಿ ಒಂದೇ ಒಂದು ಕಲ್ಯಾಣ ಮಂಟಪವಾಗಲೀ ಅಥವಾ ವಾಣಿಜ್ಯ ಕಟ್ಟಡವಾಗಲೀ ಇಲ್ಲ. ಯಾರಿಂದಲೂ ಒಂದು ಬಿಡಿಗಾಸು ವಸೂಲಿ ಮಾಡಿಲ್ಲ. ಈತನಕ ಪ್ರಾಮಾಣಿಕ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಸಾಮಾನ್ಯ ರೈತ ಕುಟುಂಬದಿಂದ ಬಂದವನು. ತುಳಸಿದಾಸಪ್ಪ, ಪುಟ್ಟಸ್ವಾಮಿ, ಕೆಂಪಿರೇಗೌಡ, ರಾಜಶೇಖರ ಮೂರ್ತಿ, ಹೆಚ್.ಎಲ್.ತಿಮ್ಮೇಗೌಡರ ಕಾಲಮಾನದಲ್ಲಿ ರಾಜಕಾರಣಕ್ಕೆ ಬಂದು ಆ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದೇನೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ 1983ರಿಂದ 2006ರ ವರೆಗೆ ರಾಜಕಾರಣ ಮಾಡಿದ್ದೇನೆ. ಎಂದೂ ಕೂಡ ಅನ್ಯಾಯದ ಹಾದಿಯಲ್ಲಿ ಸಾಗಿಲ್ಲ.

ಪಾರದರ್ಶಕ ಹಾಗೂ ಪ್ರಾಮಾಣಿಕವಾಗಿ ರಾಜಕಾರಣ ಮಾಡಿಕೊಂಡು ಬಂದಿರುವ ನನ್ನ ಬಗ್ಗೆ ಹೀಗೆಲ್ಲಾ ಆಧಾರರಹಿತ ಆರೋಪ ಮಾಡುತ್ತಿರುವುದು ಸರಿಯಲ್ಲ. ಆದ ಕಾರಣ ಇದಕ್ಕೆ ಕಡಿವಾಣ ಹಾಕಲು ಈಗ ಕಾನೂನು ರೀತಿಯ ಕ್ರಮಕ್ಕೆ ಮುಂದಾಗುತ್ತೇನೆ ಎಂದು ಹೇಳಿದರು. ನಾನು ಬಾಡಿಗೆ ಮನೆಯಲ್ಲಿದ್ದ ಸಂದರ್ಭದಲ್ಲಿ ಗೋವಿಂದರಾಜು ಮುಡಾ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ನಿವೇಶನಕ್ಕಾಗಿ ಅರ್ಜಿ ಹಾಕಿದ್ದೆ. ಆ ವೇಳೆ ವಿಜಯ ನಗರದಲ್ಲಿ 50X80 ಅಳತೆಯ ನಿವೇಶನ ಲಾಟರಿ ಮೂಲಕ ನನಗೆ ಸಿಕ್ಕಿತ್ತು. ಇದು ಬಿಟ್ಟು ನಾನೇನು ಆಸ್ತಿ ಮಾಡಿಲ್ಲ ಎಂದು ಹೇಳಿದರು. ಜನ ಬೆಂಬಲ ಇರುವ ಕಾರಣ ಶಾಸಕನಾಗಿ ಆಯ್ಕೆಯಾಗುತ್ತಿದ್ದೇನೆ. ಆದರೆ ಇದನ್ನು ಸಹಿಸದೆ ಕೆಲವರು ನಿರಾಧಾರ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಶೇ.50:50 ಅನುಪಾತದಡಿ ಪರಿಹಾರ ರದ್ದು ಮಾಡಿದರೆ ಮುಡಾ ಮುಚ್ಚಬೇಕಾಗುತ್ತೆ...!

ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶೇಕಡ 50:50 ಅನುಪಾತದಡಿ ಪರಿಹಾರವಾಗಿ ಈಗಾಗಲೇ ಆಗಿರುವ ನಿವೇಶನಗಳ ಹಂಚಿಕೆಯನ್ನು ರದ್ದು ಮಾಡಿದರೆ ರೈತರಿಗೆ ಅವರ ಭೂಮಿ ವಾಪಸ್ ನೀಡಬೇಕಾಗುತ್ತದೆ. ಹಾಗೆ ಅವರಿಗೆ ನೀಡಲು ಈಗ ಎಲ್ಲಿದೆ ಭೂಮಿ? ಇಲ್ಲ ಸುಪ್ರೀಂಕೋರ್ಟ್ ನೀಡಿರುವ ಆದೇಶದಂತೆ ಅವರಿಗೆ ಪರಿಹಾರ ನೀಡಲು ಅಷ್ಟು ಹಣ ಮುಡಾ ಬಳಿ ಎಲ್ಲಿದೆ? ಕೊನೆಗೆ ಮುಡಾವನ್ನೇ ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಜಿ.ಟಿ.ದೇವೇಗೌಡರು ಎಚ್ಚರಿಸಿದರು.

ಈಗಾಗಲೇ ಮುಡಾ ರೈತರ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಬಡಾವಣೆ ನಿರ್ಮಾಣ ಮಾಡಿದೆ. ಇದರಿಂದ ರೈತರ ಜಮೀನು ವಾಪಸು ನೀಡಲು ಸಾಧ್ಯವಿಲ್ಲ. ಇನ್ನು ಸುಪ್ರೀಂಕೋರ್ಟ್ ನಿರ್ದೇಶನದಂತೆ ರೈತರಿಗೆ ಪರಿಹಾರ ನೀಡಲು ಮುಡಾ ಬಳಿ ಅಷ್ಟು ಪ್ರಮಾಣದ ಹಣವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶೇಕಡ 50:50 ಅನುಪಾತದಡಿ ನಿವೇಶನ ನೀಡುವ ನಿರ್ಣಯ ರದ್ದು ಮಾಡಿದರೆ ಮುಡಾ ನಡೆಸುವುದೇ ಕಷ್ಟವಾಗುತ್ತದೆ ಎಂದರು.

50:50 ಅನುಪಾತದಡಿ ನಿವೇಶನ ನೀಡಿಕೆಯಲ್ಲಿ ಅಕ್ರಮವಾಗಿರಬಹುದು. ಆದರೆ ತಮಗೆ ಮೋಸವಾಗಿದೆ ಎಂದು ಯಾವ ರೈತನಾದರೂ ದೂರು ಕೊಟ್ಟಿದ್ದಾನೆಯೇ ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು. ಮುಡಾದಲ್ಲಿ ಬಹಳಷ್ಟು ಅಧ್ವಾನವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಡತ ವಿಲೇವಾರಿ ಪ್ರಕ್ರಿಯೆ ವೇಳೆ ಸಿದ್ದರಾಮಯ್ಯರ ಜೊತೆ ಸಮಾಲೋಚಿಸಿ ಎಂದು ಮುಡಾ ಅಧ್ಯಕ್ಷ ಮರೀಗೌಡರಿಗೆ ನಾನು ಸಲಹೆ ನೀಡಿದ್ದೆ ಎಂದರು.

ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಗೆ 16 ಸದಸ್ಯರ ನೇಮಕ

ಬೆಂಗಳೂರು, ಜು.27–ರಾಮದುರ್ಗ ಶಾಸಕ ಅಶೋಕ್ ಎಂ. ಪಟ್ಟಣ, ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರನ್ನು ಸರ್ಕಾರೇತರ ಸಂಸ್ಥೆಗಳ ಕೋಟಾದಡಿ ವೈಲ್ಡ್‌ಲೈಫ್ ಅಸೋಸಿಯೇಷನ್ ಆಫ್ ಸೌತ್ ಇಂಡಿಯಾ ವನ್ಯಜೀವಿ ಸಂಘದಿಂದ ಸುಶೀಲ ಗೈನಚಂದ್, ಟೈಗರ್ಸ್ ಅನ್‌ಲಿಮಿಟೆಡ್ ವನ್ಯಜೀವಿ ಸಮಾಜದಿಂದ ಸೀಮಾ ಬೇಗಂ ಖಲೀಲ್, ಬೆಂಗಳೂರು ಪರಿಸರ ಟ್ರಸ್ಟ್‌ನಿಂದ ಡಾ.ಆರ್.ವಿ.ದಿನೇಶ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಂರಕ್ಷಣಾ ವಿಶೇಷ ತಜ್ಞರು, ಜೀವಿಶಾಸ್ತ್ರ ತಜ್ಞರು ಹಾಗೂ ಪರಿಸರವಾದಿಗಳ ಕೋಟಾದಿಂದ ಬೆಂಗಳೂರಿನ ರವೀಂದ್ರ ರಘುನಾಥ, ಡಾ.ರಾಜಕುಮಾರ್ ಎಸ್ ಅಲ್ಲೆ, ಅಜಿತ್ ಕರಿಗುಡ್ಡಯ್ಯ, ಧ್ರುವ ಎಂ ಪಾಟೀಲ್, ಮಲ್ಲಪ್ಪ ಎಸ್ ಅಂಗಡಿ, ವಿರಾಜಪೇಟೆಯಿಂದ ಸಂಕೇತ ಪೂವಯ್ಯ, ಧಾರವಾಡದ ವೈಶಾಲಿ ಕುಲಕರ್ಣಿ, ಬೀದರ್‌ನ ವಿನಯ್‌ಕುಮಾರ್ ಮಾಳಿಗೆ, ಮೈಸೂರಿನ ಡಾ.ಸಂತೃಪ್ತ ಅವರನ್ನು ನೇಮಕ ಮಾಡಲಾಗಿದೆ.

ಮಂಡಳಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು, ಸಂಸ್ಥೆಗಳ ಹತ್ತು ಅಧಿಕಾರಿಗಳು ಪದನಿಮಿತ್ತ ಸದಸ್ಯರು ರಾಜ್ಯದ ವನ್ಯಜೀವಿ ವಿಭಾಗದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಮೈಸೂರಿನ ಪ್ರತಿಯೊಬ್ಬರ ಕರ್ತವ್ಯ

ಕೆರೆ ಸಂರಕ್ಷಣೆ ಸಂಬಂಧಿತ ಸಭೆಯಲ್ಲಿ ಮುಖಂಡರ ಒಕ್ಕೊರಲ ನಿರ್ಣಯ

ಮೈಸೂರು, ಜು.27(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯ ಸುಪರ್ದಿಯಲ್ಲಿರುವ ಕುಕ್ಕರಹಳ್ಳಿ ಕೆರೆಗೆ ಐತಿಹಾಸಿಕ ಹಿನ್ನೆಲೆಯಿದ್ದು, ಈ ಕೆರೆಯನ್ನು ಮೂಲ ಸ್ವರೂಪದಲ್ಲಿ ಉಳಿಸಿ, ಸಂರಕ್ಷಣೆ ಮಾಡುವುದು ಸರಸ್ವತಿಪುರಂ ಸೇರಿದಂತೆ ಮೈಸೂರಿನ ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯ ಎಂದು ಸರಸ್ವತಿಪುರಂ ಬಡಾವಣೆಯ ಪ್ರಮುಖ ಮುಖಂಡರು ಹಾಗೂ ಮೈಸೂರು ಗ್ರಾಹಕ ಪರಿಷತ್ ಸದಸ್ಯರು ಒಕ್ಕೊರಲಿನಿಂದ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ನಾಲ್ಕನೇ ಮುಖ್ಯರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ನಗರಪಾಲಿಕೆ ಮಾಜಿ ಸದಸ್ಯೆ ವೇದಾವತಿ ನೇತೃತ್ವದಲ್ಲಿ ನಡೆದ 'ಕುಕ್ಕರಹಳ್ಳಿ ಕೆರೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಸಂಭವನೀಯ ಸಂಕಷ್ಟಗಳು' ವಿಷಯ ಕುರಿತು ಸಭೆ ನಡೆಯಿತು.

ಮೊದಲು ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕುಕ್ಕರಹಳ್ಳಿ ಕೆರೆ ಸಂರಕ್ಷಣೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋಟ್ಯಾಂತರ ಅನುದಾನ ಬಿಡುಗಡೆ ಮಾಡಿ, ಕೆರೆ ಏರಿ ರಿಪೇರಿ, ಸುತ್ತಲೂ ವಾಕಿಂಗ್ ಪಾತ್, ಹಸಿರೀಕರಣಕ್ಕೆ ಆದ್ಯತೆ ನೀಡಿ, ಅಭಿವೃದ್ಧಿಪಡಿಸಲಾಗಿತ್ತು. ಅಲ್ಲದೆ, ಕುಕ್ಕರಹಳ್ಳಿ ಕೆರೆಗೆ ಯುಜಿಡಿ ನೀರು ಸೇರದಂತೆ ತಡೆಯಲು ಕ್ರಮವಹಿಸಿದ್ದಾದರೂ ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ ಎಂದು ಸಭೆಗೆ ತಿಳಿಸಿದರು.

ಕುಕ್ಕರಹಳ್ಳಿ ಕೆರೆಗೆ ನೂರಾರು ವರ್ಷಗಳ ಹಿನ್ನೆಲೆಯಿದೆ. ಈ ಕೆರೆಯನ್ನು ಮೂಲ ಸ್ವರೂಪದಲ್ಲಿ ಉಳಿಸಿಕೊಳ್ಳಲು ಅನೇಕ ತಜ್ಞರು, ಪರಿಸರ ಪ್ರಿಯರು, ಸಾಮಾಜಿಕ ಹೋರಾಟಗಾರರು ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಇವರ ಪ್ರಯತ್ನಕ್ಕೆ ನಾನೂ ಕೈಜೋಡಿಸುತ್ತೇನೆ. ನೀವು ಈ ವಿಷಯದಲ್ಲಿ ಯಾವಾಗ ಕರೆದರೂ ನಿಮ್ಮ ಜೊತೆ ಕೈ ಜೋಡಿಸಲು ಸಿದ್ಧ ಎಂದು ಭರವಸೆ ನೀಡಿದರು.



ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ನಗರ ಪಾಲಿಕೆ ಮಾಜಿ ಸದಸ್ಯೆ ವೇದಾವತಿ ನೇತೃತ್ವದಲ್ಲಿ 'ಕುಕ್ಕರಹಳ್ಳಿ ಕೆರೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಸಂಭವನೀಯ ಸಂಕಷ್ಟಗಳು' ವಿಷಯ ಕುರಿತು ಸಭೆ ನಡೆಯಿತು.

ಈ ಬಾರಿ ಮಳೆ ಧಾರಾಕಾರವಾಗಿ ಸುರಿಯುತ್ತಿದ್ದರೂ ಕುಕ್ಕರಹಳ್ಳಿ ಕೆರೆಗೆ ಮಳೆ ನೀರು ಸರಾಗವಾಗಿ ಹರಿದು ಬರುತ್ತಿಲ್ಲ. ಮೈಸೂರು ಸಂಸ್ಥಾನದ ಆಡಳಿತದಲ್ಲಿ ಪೂರ್ಣಯ್ಯ ನಾಲೆ ಮೂಲಕ ಕೆರೆಗೆ ನೀರು ಹರಿಯುತ್ತಿತ್ತು. ಕಾಲ ಕ್ರಮೇಣ ಮೈಸೂರು ನಗರ ಬೆಳೆದಂತೆ ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ, ಶ್ರೀರಾಂಪುರ ಸೇರಿದಂತೆ ಇತರೆ ಬಡಾವಣೆಗಳು ತಲೆ ಎತ್ತಿವೆ. ಇದರಿಂದ ಕುಕ್ಕರಹಳ್ಳಿ ಕೆರೆ ಜಲಮೂಲ ಬಂದ್ ಆಗಿದೆ ಎಂದರು. ಈಗ ಉಳಿದಿರುವ 22 ಕಿಮೀ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಿ, ನಾಲೆ ಮೂಲಕ ನೀರು ತರಲು ಪ್ರಯತ್ನಿಸಬೇಕು ಮತ್ತು ಕೆರೆ ತುಂಬಿದ ನಂತರ ಹೆಚ್ಚುವರಿ (ಕೆರೆ ಕೋಡಿ ಜಾಗ) ನೀರು ಹರಿಯಲು ಅನುವು ಮಾಡುವ ಕಾರ್ಯಕ್ಕೆ ತುರ್ತಾಗಿ ಜಿಲ್ಲಾಡಳಿತ ಚಾಲನೆ ನೀಡಬೇಕು ಎಂದು ಒತ್ತಾಯಿಸಿದರು.

ಭವಿಷ್ಯದಲ್ಲಿ ಸರಸ್ವತಿಪುರಂಗೆ ತೊಂದರೆ: ಕುಕ್ಕರಹಳ್ಳಿ ಕೆರೆ ಏರಿ ನಿರ್ಮಾಣಗೊಂಡು ಹಲವು ವರ್ಷಗಳೇ ಕಳೆದಿವೆ. ಈ ಕೆರೆ ಏರಿ ಸಡಿಲಗೊಳ್ಳುತ್ತಿದ್ದು, ಈ ನೀರು ಹೆಚ್ಚುವರಿಯಾದರೆ, ಹೊರಹೋಗಲು ಜಾಗವಿಲ್ಲ. ಒತ್ತಡ ಹೆಚ್ಚಾದರೆ ಕೆರೆ ಏರಿ ಯಾವಾಗ ಬೇಕಾದರೂ ಒಡೆಯಬಹುದು. ಹಾಗಾಗಿ ಕೋಡಿ ಜಾಗವನ್ನು ಗುರುತಿಸಿ, ಒತ್ತುವರಿಯಾಗಿದ್ದರೆ ಕೂಡಲೇ ತೆರವುಗೊಳಿಸಬೇಕು. ಇಲ್ಲದಿದ್ದರೆ, ಈ ಭಾಗದ ಬಡಾವಣೆ ಮನೆಗಳಿಗೆ ನೀರು ನುಗ್ಗಿ ದೊಡ್ಡ ಅವಾಂತರವೇ ಸೃಷ್ಟಿಯಾಗುತ್ತದೆ ಎಂದು ಎಚ್ಚರಿಸಿದರು.

ಆಗಸ್ಟ್‌ನಲ್ಲಿ ಡಿಸಿಗೆ ಮನವಿ: ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಸಂಬಂಧ ಹಿಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಕೆರೆ ನವೀಕರಣಕ್ಕಾಗಿ ಡಿಪಿಆರ್ ತಯಾರಿಸಲು 63 ಲಕ್ಷ ಬಿಡುಗಡೆಗೆ ಕ್ರಮ ವಹಿಸಿದ್ದರು. ಅವರು ವರ್ಗಾವಣೆಗೊಂಡಿದ್ದರಿಂದ ಆ ಕೆಲಸ ಬಾಕಿ ಉಳಿದಿದೆ.ಈಗಿನ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಈ ಕಾರ್ಯ ಮುಂದುವರೆಸುವಂತೆ ಆಗ್ರಹಿಸಿ, ಆಗಸ್ಟ್ ಎರಡನೇ ವಾರದಲ್ಲಿ ನಿಯೋಗ ತೆರಳಿ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಕುಕ್ಕರಹಳ್ಳಿ ಕೆರೆ ಉಳಿವಿಗೆ ಕೈಜೋಡಿಸಿ: ಮೈಸೂರು ಗ್ರಾಹಕ ಪರಿಷತ್ ಸದಸ್ಯ ಭಾನು ಪ್ರಶಾಂತ್, ನೀಡಿ, ಎಂಜಿಪಿ ವತಿಯಿಂದ ಕುಕ್ಕರಹಳ್ಳಿ ಕೆರೆ ಉಳಿವಿಗೆ ಹಲವು ವರ್ಷಗಳಿಂದ ಹಂತಹಂತವಾಗಿ ಹೋರಾಟ ಹಮ್ಮಿಕೊಂಡಿದ್ದೇವೆ. ಈ ವಿಷಯದಲ್ಲಿ ಈ ಭಾಗದ ನಿವಾಸಿಗಳ ಸ್ಪಂದನೆ ಸಿಕ್ಕಿಲ್ಲ. ಕುಕ್ಕರಹಳ್ಳಿ ಕೆರೆ ಏರಿ ಒಡೆದರೆ, ಮೊದಲು ಸರಸ್ವತಿಪುರಂ, ಕುವೆಂಪುನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ನೀರು ನುಗ್ಗಿ ದೊಡ್ಡಮಟ್ಟದ ಅನಾಹುತ ಸಂಭವಿಸುತ್ತದೆ. ಮುಂಜಾಗ್ರತಾ ಕ್ರಮವಾಗಿ ಈ ಭಾಗದ ನಿವಾಸಿಗಳು ಎಚ್ಚೆತ್ತು ತುರ್ತಾಗಿ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಬೇಕು ಎಂದರು.

ಮೈಗ್ರಾಪ ಸದಸ್ಯರಾದ ವಿಶ್ವನಾಥ್, ನಟರಾಜ್, ಅರುಣ್‌ಕುಮಾರ್, ಪುರುಷೋತ್ತಮ್, ಶಂಕರ್ ಹಾಗೂ ಸರಸ್ವತಿಪುರಂ ಮುಖಂಡರಾದ ಸಿ.ವಿ.ಗೋಪಿನಾಥ್, ಪುರುಷೋತ್ತಮ್, ಬಾಪು ಸತ್ಯನಾರಾಯಣ, ವಾಸುದೇವ್ ರಾವ್, ಚಂದ್ರಶೇಖರ್, ಲಲಿತಾ ಸುಂದರೇಶ್, ಲಕ್ಷ್ಮೀ ಶ್ರೀನಿವಾಸನ್, ಶೈಲಜಾ ಮಂಜುನಾಥ್, ಭಾಗ್ಯಲಕ್ಷ್ಮಿ, ಉಮಾ ಸುಂದರೇಶ್, ಶಿವಕುಮಾರಸ್ವಾಮಿ, ಮಂಗಳಾ, ಆಶಾರಾಣಿ, ಸಿ.ಎಸ್.ನಾಗರತ್ನ, ರಾಜೇಶ್ವರಿ, ಶ್ರೀನಿವಾಸ ಮೂರ್ತಿ, ಶ್ರೀನಾಥ್ ಸೇರಿದಂತೆ ಇತರರಿದ್ದರು.

ಬಡತನ ಸಾಧನೆಗೆ ವರದಾನವೇ ಹೊರತು ಶಾಪವಲ್ಲ

ಸ್ಪರ್ಧಾರ್ಥಿಗಳಿಗೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಕಿವಿಮಾತು



ಜ್ಞಾನಬುತ್ತಿ ವತಿಯಿಂದ ಆಯೋಜಿಸಿದ್ದ ಪಿಡಿಓ, ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ಪರೀಕ್ಷೆಗಳಿಗೆ ನಡೆದ ಉಚಿತ ತರಬೇತಿ ಶಿಬಿರದ ಸಮಾರೋಪದಲ್ಲಿ ಮಂಡ್ಯ ಡಿಸಿ ಡಾ.ಕುಮಾರ್ ಮಾತನಾಡಿದರು.

ಮೈಸೂರು, ಜು.27(ಎಸ್‌ಪಿಎನ್)– ಸ್ಪರ್ಧಾರ್ಥಿಗಳು ಭಾವನಾತ್ಮಕ ಸಂಬಂಧ ಇಟ್ಟುಕೊಂಡರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದು ಕಷ್ಟ ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂ ಸರ್ಕಾರಿ ಪಿಯು ಕಾಲೇಜು ಆವರಣದಲ್ಲಿ ಜ್ಞಾನಬುತ್ತಿ ವತಿಯಿಂದ ಆಯೋಜಿಸಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಓ), ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ಪರೀಕ್ಷೆಗಳಿಗೆ ನಡೆದ ಉಚಿತ ತರಬೇತಿ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಆಕಾಂಕ್ಷಿಗಳು ಮನಸ್ಸಿನಲ್ಲಿ ಗೊಂದಲಗಳನ್ನಿಟ್ಟುಕೊಳ್ಳಬಾರದು. ಇದರ ನಿವಾರಣೆಗೆ ಶ್ರದ್ಧಾ ಕೇಂದ್ರಗಳ ಮೂಲಕ ಏಕಾಗ್ರತೆ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಒಬ್ಬ ವ್ಯಕ್ತಿ ಬಡತನದಲ್ಲಿ ಹುಟ್ಟುವುದು ತಪ್ಪಲ್ಲ. ಆದರೆ, ಬಡತನದಲ್ಲಿ ಸಾಯುವುದು ತಪ್ಪು. ಬಡತನ ಎಂದರೆ ಹಳ್ಳಿಯ ಶಾಲೆ, ಕನ್ನಡ ಮಾಧ್ಯಮ, ಅನಕ್ಷರಸ್ಥ ತಂದೆ–ತಾಯಿ ಎಂಬ ಋಣಾತ್ಮಕ ಅಂಶಗಳು ಸಾಧನೆಗೆ ಅಡ್ಡಿ ಬರುವುದಿಲ್ಲ. ನನ್ನ ಪ್ರಕಾರ ಬಡತನ ವರವೇ ಹೊರತು ಶಾಪವಲ್ಲ. ಸಮಸ್ಯೆಗಳ ಸುಳಿಯಿಂದಲೇ ಸಾಧನೆ ಮಾಡಲು ಸಾಧ್ಯ. ಅಲ್ಲದೆ, ಲಕ್ಷ್ಮಿ ಇದ್ದ ಕಡೆ ಸರಸ್ವತಿ ಇರಲ್ಲ ಎಂಬ ಮಾತಿನಂತೆ ಹಣದ ಮಾರ್ಗವನ್ನು ಬದಿಗೆ ಸರಿಸಿ ಸರಸ್ವತಿ ಒಲಿಸಿಕೊಳ್ಳಲು ಅಭ್ಯರ್ಥಿಗಳು ಕಷ್ಟಪಡಬೇಕು ಎಂದರು.

ಬಡತನ ಮತ್ತು ಗ್ರಾಮೀಣ ಹಿನ್ನೆಲೆಯಿಂದ ಬಂದ ನನಗೆ, ಗ್ರಾಮೀಣ ಯುವಕರು, ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಲು ಇರುವ ಅಡೆ–ತಡೆಗಳು ಗೊತ್ತು. ಹಾಗಾಗಿ ಮಂಗಳೂರು ಜಿಪಂ ಸಿಇಓ ಆಗಿದ್ದಾಗ ಅಲ್ಲಿನ ನಗರ ಮತ್ತು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ 'ಪುಸ್ತಕ ಗೂಡು' ಆರಂಭಿಸಿ, ಗ್ರಾಮೀಣ ಯುವಕರಿಗೆ ದಿನಪತ್ರಿಕೆ, ವಾರಪತ್ರಿಕೆ ಮತ್ತು ಪುಸ್ತಕಗಳನ್ನು ಇಡಲು ಪ್ರಾರಂಭಿಸಿದೆವು. ಇದಕ್ಕೆ ಯುವಕರಿಂದ ಉತ್ತಮ ಪ್ರತಿಕ್ರಿಯೆ ಬಂತು ಎಂದರು.

ಜೊತೆಗೆ ದಾನಿಗಳಿಂದ ಪುಸ್ತಕ ಪಡೆಯಲು 'ಪುಸ್ತಕ ಜೋಳಿಗೆ' ಕಾರ್ಯಕ್ರಮದ ಮೂಲಕ ಹಳೆ ಪುಸ್ತಕ ಪಡೆಯಲಾಯಿತು. ಇದಕ್ಕೆ ಮಂಗಳೂರು ನಗರಪಾಲಿಕೆ ಪೌರಕಾರ್ಮಿಕರ ಸಹಾಯ ಪಡೆದು ಕಸ ಸಂಗ್ರಹಣೆ ಜೊತೆಗೆ ಪುಸ್ತಕ ಸಂಗ್ರಹಕ್ಕೂ ಮನವಿ ಮಾಡಿದ್ದೆ. ಇದಕ್ಕೆ ಅಲ್ಲಿನ ಜನತೆ ಉತ್ತಮ ಪ್ರತಿಕ್ರಿಯೆ ನೀಡಿದರು. ಹೀಗೆ 45 ಸಾವಿರ ವಿವಿಧ ಲೇಖಕರ ಪುಸ್ತಕಗಳನ್ನು ಸಂಗ್ರಹಿಸಿದ್ದೆವು ಎಂದರು.

'ಪುಸ್ತಕ ಗೂಡು' ಗ್ರಂಥಾಲಯದಲ್ಲಿ ಪುಸ್ತಕಗಳಿದ್ದ ಬೀರುಗಳನ್ನು ಸದಾ ತೆರೆದಿಡುವಂತೆ ಅಲ್ಲಿನ ಅಧಿಕಾರಿಗಳಿಗೆ ಸೂಚಿಸಿದ್ದೆ. ಅದಕ್ಕೆ ಅಲ್ಲಿನ ಅಧಿಕಾರಿಗಳು ಮರು ಉತ್ತರ ನೀಡಿ, ಪುಸ್ತಕಗಳನ್ನು ಯಾರಾದರೂ ಕದ್ದುಕೊಂಡು ಹೋದರೆ ಏನು ಮಾಡುವುದು ಎಂದು ಮರು ಪ್ರಶ್ನೆ ಮಾಡಿದ್ದರು. ಅದಕ್ಕೆ ಪುಸ್ತಕ ಕದ್ದು ಹೋದರೂ ಹೋಗಲಿ, ಆ ನೆಪದಲ್ಲಾದರೂ ಆ ಯುವಕ ಪುಸ್ತಕ ಪ್ರೇಮಿಯಾಗಲಿ ಎಂಬುದು ನನ್ನ ಉದ್ದೇಶವಾಗಿತ್ತು ಎಂದರು.

> **"ಮಂಡ್ಯ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ಅಂಕಿ–ಅಂಶಗಳ ಪ್ರಕಾರ ಹೃದಯಾಘಾತದಿಂದ ಸಾವನ್ನಪ್ಪುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟಲು ಮಂಡ್ಯ ನಗರದ 35 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 'ಹೃದಯ ವೈಶಾಲ' ಯೋಜನೆ ಅಳವಡಿಸಲಾಗಿದೆ. ಈ ಕೇಂದ್ರಗಳಲ್ಲಿ ಹೃದಯಾಘಾತ ಲಕ್ಷಣ ಕಾಣಿಸಿಕೊಂಡ ರೋಗಿಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೃದಯಾಘಾತದ ಲಕ್ಷಣವನ್ನು ಪತ್ತೆಹಚ್ಚುವುದು ಯೋಜನೆಯ ಉದ್ದೇಶವಾಗಿದೆ.** – ಡಾ.ಕುಮಾರ್, ಜಿಲ್ಲಾಧಿಕಾರಿ, ಮಂಡ್ಯ

ನೀವು ಕಂಡ ಕನಸು ನನಸಾಗಬೇಕಾದರೆ, ಜೀವನದಲ್ಲಿ ಎಂದೂ ಎರಡು ದೋಣಿಯಲ್ಲಿ ಪ್ರಯಾಣಿಸಬೇಡಿ. ಜೀವನಕ್ಕೆ ಒಂದು ಸ್ಪಷ್ಟ ಗುರಿ ಇಟ್ಟುಕೊಂಡು ಸತತ ಪ್ರಯತ್ನದಿಂದ ಅಂದುಕೊಂಡದ್ದನ್ನು ಸಾಧಿಸಬೇಕು. ಗುರಿ ಮತ್ತು ಸಾಧನೆಯ ದಾರಿಯನ್ನು ಗಂಭೀರವಾಗಿ ತೆಗೆದುಕೊಂಡರೆ ಯಶಸ್ಸು ಕಟ್ಟಿಟ್ಟಬುತ್ತಿ ಎಂದರು.

ಮೊಬೈಲ್ ಹುಚ್ಚು ಬಿಡಿ: ಪುಸ್ತಕ ಹಿಡಿದರೆ ಸಮಾಜದಲ್ಲಿ ತಲೆ ಎತ್ತುವಂತೆ ಆಗುತ್ತದೆ. ಮೊಬೈಲ್ ಹಿಡಿದು ಫೇಸ್‌ಬುಕ್, ವಾಟ್ಸಾಪ್‌ನಲ್ಲಿ ಕಾಲ ಕಳೆದರೆ, ಮುಂದೆ ನಿಮ್ಮ ಜೀವನ ತಲೆ ತಗ್ಗಿಸುವಂತೆ ಮಾಡುತ್ತದೆ. ಸಿಕ್ಕ ಸಣ್ಣ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಅಭ್ಯರ್ಥಿಗಳಿಗೆ ಕಿವಿಮಾತು ಹೇಳಿದರು. ಈ ವೇಳೆ ವಿಶ್ರಾಂತ ಕುಲಪತಿ ಡಾ. ಸಯ್ಯದ್ ಅಖಿಲ್ ಅಹಮದ್ ಅವರು ಶಿಬಿರಾರ್ಥಿಗಳಿಗೆ ಶುಭ ಕೋರಿದರು. ವೇದಿಕೆಯಲ್ಲಿ ಜ್ಞಾನಬುತ್ತಿಯ ಜೈನಹಳ್ಳಿ ಸತ್ಯನಾರಾಯಣ ಗೌಡ, ಹೆಚ್.ಬಾಲಕೃಷ್ಣ, ಪ್ರೊ.ಕೃ.ಪ. ಗಣೇಶ, ಡಾ.ನಾಗಾಚಾರ್, ಡಾ. ಸುದರ್ಶನ್, ಎಸ್. ಗಣೇಶ್, ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ ಡಾ. ಎಸ್.ಬಿ.ಎಂ. ಪ್ರಸನ್ನ ಇದ್ದರು. ಸಂಪನ್ಮೂಲ ವ್ಯಕ್ತಿಗಳಾದ ಡಾ. ಹೊನ್ನಯ್ಯ, ರೋಹನ್ ರವಿಕುಮಾರ್, ವಿ.ಜಯಪ್ರಕಾಶ್, ಯು.ಎಂ. ಶರದ್ ರಾವ್, ರಾಜೀವ್ ಶರ್ಮ, ಡಾ. ಎಂ.ಎಚ್. ಕೃಷ್ಣ, ಡಾ. ಮೋಹನ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಮದುವೆ ನಂತರ ನೀವು ನನ್ನ ಪ್ರೀತಿ ಮಾಡ್ತಾ ಇಲ್ಲ?

ಗಂಡ : ಅಲ್ವೇ ಪರೀಕ್ಷೆ ಪಾಸ್ ಆದ ನಂತರ ಮತ್ತೆ ಯಾರ್ತಾನೆ ಓದ್ತಾರೆ!?

ಮೈಸೂರು ಮಿತ್ರ

ಭಾನುವಾರ, 28 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲರನ್ನೂ ಮೆಚ್ಚಿಸಲು ಯತ್ನಿಸುವವನು ಯಾರನ್ನೂ ಮೆಚ್ಚಿಸುವುದಿಲ್ಲ.
ಎಡವಿದ ಕಾಲಿಗಿಂತ ಎಡವಿದ ನಾಲಿಗೆ ಅಪಾಯ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರ ಹಾಕು.

ನಿಮ್ಮ ಪತ್ರಗಳು

■ ನಗಬೇಕಾಗಿದೆ 'ನುಗು ಜಲಾಶಯ' ಸಂರಕ್ಷಣೆ ಮಾಡಿ



ಮಾನ್ಯರೆ,

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಕಬಿನಿ, ತಾರಕ ಮತ್ತು ನುಗು ಹೆಸರಿನ ಮೂರು ಜಲಾಶಯಗಳನ್ನು ಹೊಂದಿರುವ ಹೆಮ್ಮೆಯ ತಾಲೂಕು, ವಿಪರ್ಯಾಸವೆಂದರೆ ತಾಲೂಕಿನಲ್ಲಿ ನೀರಾವರಿಗೆ ಒಳಪಡುವ ಜಮೀನು ತೀರಾ ಕಡಿಮೆ. ಸಮೃದ್ಧ ಮಳೆ ಆಗುತ್ತಿರುವುದರಿಂದ ಕಬಿನಿ ಮತ್ತು ನುಗು ಜಲಾಶಯಗಳು ತುಂಬಿ ಕ್ರೆಸ್ಟ್‌ಗೇಟಿನ ಮೂಲಕ ಹೆಚ್ಚುವರಿ ನೀರನ್ನು ಹೊರಬಿಡಲಾಗುತ್ತಿದೆ. ಮೈದುಂಬಿರುವ ಜಲಾಶಯಗಳ ಮನಮೋಹಕ ದೃಶ್ಯವನ್ನು ಕಣ್ತುಂಬಿಕೊಳ್ಳಲು ಶುಕ್ರವಾರ ಜುಲೈ 26ರಂದು ಗೆಳೆಯರೊಟ್ಟಿಗೆ ನುಗು ಜಲಾಶಯಕ್ಕೆ ಹೋಗಿದ್ದೆವು. 20,000 ಎಕರೆ ಜಮೀನಿಗೆ ನೀರುಣಿಸುವ ಕಟ್ಟೆಯು 5.44 ಟಿಎಂಸಿ ಶೇಖರಣಾ ಸಾಮರ್ಥ್ಯವಿದೆ, 240 ಮೀ ಉದ್ದದ ಕಲ್ಲುಕಟ್ಟಡ ಹಾಗೂ 380 ಮೀ ಉದ್ದದ ಮಣ್ಣಿನ ಏರಿಯನ್ನು ಹೊಂದಿರುವ ಅಣೆಕಟ್ಟೆಯನ್ನು ಅತ್ಯಂತ ಪ್ರಸಸ್ಥವಾದ ಸ್ಥಳವನ್ನು ಆಯ್ಕೆ ಮಾಡಿ ಎರಡು ಗುಡ್ಡಗಳಿಗೆ ಸೇರಿಸಿದ್ದಾರೆ. ಬೇಸಿಗೆಯಲ್ಲಿ ಆನೆಗಳ ಹಿಂಡು ಈ ಜಲಾಶಯದಲ್ಲಿ ಈಜುವುದನ್ನು ನೋಡುವುದೇ ಮಹಾದಾನಂದ, ಬೇಜಾರಿನ ಸಂಗತಿ ಎಂದರೆ ಸಮರ್ಪಕ ನಿರ್ವಹಣೆ ಹಾಗೂ ಪ್ರಚಾರವಿಲ್ಲದೆ ಪ್ರವಾಸಿಗರು ಇದನ್ನು ನೋಡಲು ಬರುವುದು ಕಡಿಮೆ.

ಕಲ್ಲಕಟ್ಟಡದ ಇಳಿಜಾರಿನ ಮೇಲೆ ಮರಗಳು ಬೆಳೆದು ನಿಂತಿದೆ, ಅಣೆಕಟ್ಟೆಯ ಭದ್ರತೆಯ ದೃಷ್ಟಿಯಿಂದ ಮರಗಳನ್ನು ವಾರ್ಷಿಕ ನಿರ್ವಹಣೆಯಲ್ಲಿ ತೆರವುಗೊಳಿಸಿ ಸುಸಜ್ಜಿತವಾಗಿ ಇಟ್ಟುಕೊಳ್ಳಬೇಕಾಗಿತ್ತು, ಈಗಲೇ ತೆರವುಗೊಳಿಸದಿದ್ದಲ್ಲಿ ಮುಂದೆ ಮರಗಿಡಗಳು ದೊಡ್ಡದಾಗಿ ಕಟ್ಟೆ ದುರ್ಬಲಗೊಂಡು ನೀರು ಸೋರುವ ಸಂಭವ ಬರಬಹುದು, ಹಾಗೆಯೇ ಮಣ್ಣಿನ ಏರಿಯ ರಸ್ತೆಯು ಕೆಸರುಮಯವಾಗಿದೆ, ಪ್ರವಾಸಿಗರಿರಲಿ ನಿರ್ವಹಣೆಯ ಇಂಜಿನಿಯರ್‌ಗಳು ಸಹ ಮಳೆಯ ಸಮಯದಲ್ಲಿ ನಡೆದಾಡಲು ಆಗುವುದಿಲ್ಲ. ಇದೊಂದು ವಿಶೇಷವಾದ ಹಾಗೂ ಸುಂದರವಾದ ಜಲಾಶಯ, ಸರ್ಕಾರವು ಅಗತ್ಯ ಅನುದಾನ ನೀಡಿ ಉಳಿಸಿಕೊಳ್ಳುವುದು ಒಳ್ಳೆಯದು ಇಲ್ಲದಿದ್ದಲ್ಲಿ ಕೇವಲ ರೂ. 3.11 ಕೋಟಿಗಳ ವೆಚ್ಚದಲ್ಲಿ 1958ರಲ್ಲಿ ಯೋಜನೆಯು ಪೂರ್ಣಗೊಂಡು ರೈತರ ಜೀವನಾಡಿ ಆಗಿರುವ ಅದ್ಭುತ ಜಲಾಶಯವನ್ನು ಕಡಿಮೆ ಅವಧಿಯಲ್ಲೇ ಕಳೆದುಕೊಳ್ಳಬೇಕಾಗಬಹುದು. ಈಗ ಇಂತಹ ಜಲಾಶಯವನ್ನು ನಿರ್ಮಿಸಲು ಸಾವಿರ ಕೋಟಿಯಾದರೂ ಸಾಲದು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

■ ಒಂದು ಸ್ಮರಣೀಯ ಸಮಾರಂಭ

ಮಾನ್ಯರೆ,



ಯಾವುದೇ ವ್ಯಕ್ತಿ ತನ್ನ ವೃತ್ತಿಯಲ್ಲಿ 50 ವರ್ಷ ಪೂರೈಸುವುದು ಒಂದು ಸಾಧನೆಯೇ ಸರಿ. ತೀರಾ ಸ್ಪರ್ಧಾತ್ಮಕ ಎಂದು ಹೇಳಬಹುದಾದ ವಕೀಲ ವೃತ್ತಿಯಲ್ಲಂತೂ ಇಂತಹ ಸಾಧನೆಯನ್ನು 'ಮಹತ್ಸಾಧನೆ' ಎಂದು ಕೂಡ ಕರೆಯಬಹುದು. ಮೈಸೂರಿನ ಹಿರಿಯ, ಪ್ರಖ್ಯಾತ ವಕೀಲರಾದ ಎ.ಎಸ್.ನಟರಾಜ್ ಆ ಗೌರವಕ್ಕೆ ಪಾತ್ರರಾಗಿದ್ದಾರೆ. ಇತ್ತೀಚೆಗೆ ಅವರ ಶಿಷ್ಯವೃಂದ ನಗರದ ಸಾ.ರಾ. ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಅವರ ವೃತ್ತಿ ಜೀವನದ ಸುವರ್ಣ ಸಂಭ್ರಮದ ಭವ್ಯ ಸಮಾರಂಭದಲ್ಲಿ ಅವರಿಗೆ ಪ್ರೀತಿ ಗೌರವಗಳಿಂದ 'ಗುರು ವಂದನೆ' ಸಲ್ಲಿಸಿದ ಅಪೂರ್ವ ಕ್ಷಣಗಳಲ್ಲಿ ನಾನೂ ಸಹ ಭಾಗಿಯಾಗಿದ್ದೆ. ಈ ಸಮಾರಂಭದ ಅಧ್ಯಕ್ಷತೆಯನ್ನು ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಹಿಸಿದ್ದು ವಿಶೇಷವಾಗಿತ್ತು ಮತ್ತು ಸಮಾರಂಭಕ್ಕೆ ಮೆರುಗು ತಂದಿತ್ತು. ನೂರಾರು ವಕೀಲರು, ಸ್ನೇಹಿತರು, ಹಿತೈಷಿಗಳು, ಬಂಧು ಬಾಂಧವರು ಭಾಗವಹಿಸಿದ್ದ ಈ ಸಮಾರಂಭ ಎಎಸ್‌ಎನ್‌ರವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು.

ಎ.ಎಸ್.ನಟರಾಜ್ ನಗರದ ಓರ್ವ ಪ್ರಖ್ಯಾತ ವಕೀಲರಾಗಿ, ಒಳ್ಳೆಯ ಹೆಸರು ಸಂಪಾದಿಸಿದ್ದಾರೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಅವರ ಕಕ್ಷಿದಾರರಲ್ಲಿ ಒಬ್ಬರು ಎಂದು ಸಮಾರಂಭದಲ್ಲಿ ತಿಳಿಸಲಾಯಿತು. ಜೊತೆಗೆ ನಟರಾಜ್ ಮುಖ್ಯಮಂತ್ರಿಗಳ ಆಪ್ತ ಸ್ನೇಹಿತ ಕೂಡ ಹೌದು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದು ಔಚಿತ್ಯಪೂರ್ಣವೇ ಆಗಿದೆ. ಓರ್ವ ವಕೀಲನಾಗಿ, ಮಿಗಿಲಾಗಿ ಎಎಸ್‌ಎನ್ ಅವರ ಅಭಿಮಾನಿಯಾಗಿ ಅವರಿಗೆ ಈ ಸಂಧರ್ಭದಲ್ಲಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಚಾಮುಂಡಿಬೆಟ್ಟದ ನೀರಿನ ಘಟಕ ದುರಸ್ತಿಗೊಳಿಸಿ

ಮಾನ್ಯರೆ,

ಚಾಮುಂಡಿಬೆಟ್ಟದ ದಾಸೋಹ ಭವನದ ಮುಂಭಾಗದಲ್ಲಿ ಕುಡಿಯುವ ನೀರಿನ ಘಟಕವೊಂದನ್ನು ಸ್ಥಾಪಿಸಿ ಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಿ ಕೊಡಲಾಗಿತ್ತು. ಆದರೆ, ಆ ಘಟಕ ಕೆಟ್ಟು ಬಹಳ ದಿವಸಗಳೇ ಆಗಿದೆ, ಆದರೆ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ರಿಪೇರಿ ಮಾಡಿಸಲು ಗಮನ ಹರಿಸಿಲ್ಲ. ಇದರಿಂದಾಗಿ ಭಕ್ತಾದಿಗಳಿಗೆ ಕುಡಿಯುವ ನೀರೇ ಸಿಗದಂತಾಗಿದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ, ಸದರಿ ನೀರಿನ ಘಟಕವನ್ನು ತಕ್ಷಣ ರಿಪೇರಿ ಮಾಡಿಸಬೇಕು. ಹಾಗೆಯೇ ಬೆಟ್ಟದ ಮೆಟ್ಟಿಲುಗಳ ಬೀದಿದೀಪದ ಕಂಬಗಳಿಗೆ ಅಳವಡಿಸಿರುವ ಬಲ್ಬುಗಳು ಉರಿಯುತ್ತಿಲ್ಲ. ಹಾಗಾಗಿ ಕತ್ತಲಿನಲ್ಲೇ ಬೆಟ್ಟ ಹತ್ತಿ ಅಮ್ಮನವರ ಮುಂಜಾನೆ ದರ್ಶನ ಪಡೆಯುವ ಭಕ್ತರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರು ಸ್ಥಳೀಯ ಆಡಳಿತ ಎಚ್ಚೆತ್ತು ತಕ್ಷಣ ಕಾರ್ಯೋನ್ಮುಖರಾಗಬೇಕಾಗಿ ಮನವಿ. –ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ವಿದೇಶದ ಒಂದು ಅನುಭವ

ಅಮೆರಿಕಾದಲ್ಲಿ ಅಪಘಾತಗಳು ತೀರಾ ಸಪ್ಪೆ...!?

ರಾತ್ರಿ ಹನ್ನೆರಡು ಗಂಟೆಯ ಸಮಯ. ನಿರ್ಜನವಾದ ರಸ್ತೆ. ನಿಗದಿತ ವೇಗದಲ್ಲೇ ಬರುತ್ತಿರುವ ಕಾರು; ಸಿಗ್ನಲ್‌ನಲ್ಲಿ ಕೆಂಪುದೀಪ ಕಂಡು ನಿಲ್ಲುತ್ತದೆ. ಯಾರೂ ಇಲ್ಲದ ಈ ಅವೇಳೆಯಲ್ಲಿ ಸಿಗ್ನಲ್ ದಾಟಿದರೇನಂತೆ? ಇಲ್ಲ ಅದು ಹಾಗಾಗುವುದೇ ಇಲ್ಲ. ಯಾವುದೇ ಸಮಯದಲ್ಲಾದರೂ ರಸ್ತೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಅಮೆರಿಕಾ ದೇಶ.

ಇಲ್ಲಿಯ ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯು ನನ್ನ ಮೆಚ್ಚುಗೆಯ ವಿಷಯಗಳಲ್ಲಿ ಒಂದು. ಹಳ್ಳ–ಕೊಳ್ಳಗಳಿಲ್ಲದ, ಕಸ–ಕೊಳೆ ಇಲ್ಲದ ರಸ್ತೆ ಯಾರಿಗೆ ತಾನೇ ಇಷ್ಟವಾಗುವುದಿಲ್ಲ! ಸ್ಪಷ್ಟವಾದ ಎಲೆಕ್ಟ್ರಾನಿಕ್ ಫಲಕಗಳು ನೀವು ಸಾಗಬೇಕಾದ ದಾರಿಯನ್ನು ಸುಗಮಗೊಳಿಸಿದರೆ, ಬಹಳ ಮುಂದಾಗಿಯೇ ನಿಮಗೆ ಸಿಗುವ 'ಮುಂದೆ ರಸ್ತೆ ತಡೆ ಇದೆ' ಅಥವಾ 'ಟ್ರಾಫಿಕ್ ಜಾಮ್ ಆಗಿದೆ' ಫಲಕಗಳು ನೀವು ಬೇರೆ ದಾರಿಯನ್ನು ಆಯ್ಕೆ ಮಾಡಿ, ಸಾಗಲು ನೆರವಾಗುತ್ತವೆ. ವಿಶಾಲವಾದ ರಸ್ತೆಗಳ ಮೇಲೆ ನಿದರ್ಶನಕ್ಕಾದರೂ ಒಂದು ಹಳ್ಳಕೊಳ್ಳ ಬೇಡವೇ? ಸಾಮಾನ್ಯವಾಗಿ ಊರೊಳಗಿನ ರಸ್ತೆಗಳಲ್ಲಿ ಎರಡು ಲೇನ್‌ಗಳಲ್ಲದೆ ಸೈಕಲ್ ಸವಾರರಿಗಾಗಿಯೇ ಒಂದು ಪ್ರತ್ಯೇಕ ಪಥ ಇರುತ್ತದೆ. (ಜಾಗಿಂಗ್ ಮಾಡುವವರಿಗೂ ಒಂದು ಲೇನ್ ಕೆಲವೆಡೆ ಇದೆ). ದೊಡ್ಡ ರಸ್ತೆಗಳಲ್ಲಿ ಈ ಸವಾರರಿಗೆ ಸ್ಥಳ ಇಲ್ಲದಿದ್ದರೂ ಕಾರಿನ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಎರಡು ಲೇನ್‌ಗಳು ಇರುತ್ತವೆ. ಇಬ್ಬರು ಅಥವಾ ಹೆಚ್ಚು ಮಂದಿಗಾಗಿಯೇ ಇರುವ ಲೇನಿನಲ್ಲಿ ಕಡಿಮೆ ಟ್ರಾಫಿಕ್‌ನಿಂದಾಗಿ ಅದೇ ಗರಿಷ್ಠ ವೇಗದಲ್ಲಿ ನಿಮ್ಮ ಗಮ್ಯವನ್ನು ಕ್ಷಿಪ್ರವಾಗಿ ತಲುಪಬಹುದು. ಇಂಧನ ಉಳಿತಾಯ, ಪರಿಸರ ರಕ್ಷಣೆಗೂ ಅನುಕೂಲಕಾರಿ ಇದು. ಆದರೆ ಒಂಟಿಯಾಗಿ ಪ್ರಯಾಣಿಸುವವರೇ ಹೆಚ್ಚಾಗಿರುವುದು ಇಲ್ಲಿ ಸಾಮಾನ್ಯ ದೃಶ್ಯ. ಸಿಗ್ನಲ್ ಇರುವ ರಸ್ತೆಯ ತಿರುವುಗಳಲ್ಲಿ ಒಂದು ಹೆಚ್ಚಿನ ಲೇನನ್ನು ಗಮನಿಸಬಹುದು. ಇಲ್ಲಿಯ ಜನರು ಕಡ್ಡಾಯವಾಗಿ ಲೇನ್ ಶಿಸ್ತನ್ನು ಪಾಲಿಸುವುದನ್ನು ನೋಡಲು ಚೆಂದ. ಹೆಚ್ಚಿನ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಕ್ಯಾಮೆರಾಗಳು ಅಳವಡಿಸಲ್ಪಟ್ಟಿರುವುದರಿಂದಲೋ ಏನೋ ಯಾರೂ ನಿಯಮವನ್ನು ಉಲ್ಲಂಘಿಸುವುದಿಲ್ಲ. ಪೋಲಿಸರೆಂದರೆ ಸಾಮಾನ್ಯವಾಗಿ ಎಲ್ಲರಿಗೂ ಭಯ! ಲಂಚದ ಪ್ರಶ್ನೆಯೇ ಇಲ್ಲಿಲ್ಲ!.

ಅಂದು ನಾವು ಪ್ರೀ ಸ್ಕೂಲಿನಲ್ಲಿ ಓದುವ ಮೊಮ್ಮಗನನ್ನು ಶಾಲೆಗೆ ಬಿಟ್ಟು, ಹೊರಟಿದ್ದೆವು. ಸಾಗುತ್ತಿದ್ದಾಗ ಹಸಿರು ದೀಪವಿದ್ದಾಗಲೇ ನಮ್ಮ ಕಾರು ಸಿಗ್ನಲ್ ದಾಟಲು ಮುಂದಾಯಿತು. ಥಟ್ಟನೆ ನಮ್ಮ ಎಡ ಭಾಗದ ಎದುರಿನಿಂದ ಬಂದ ಒಂದು ದೊಡ್ಡ ಕಾರು ವೇಗವಾಗಿ ಹೊರಳಿ, ನಮ್ಮೆಡೆಗೇ ಬರುತ್ತಿದ್ದುದನ್ನು ಕಂಡೆವು. ಮಗಳು ಅದೆಷ್ಟು ಬಲಕ್ಕೆ ಹೊರಳಿದರೂ ಅದು ನಮ್ಮ ಎಡ ಭಾಗಕ್ಕೆ ಜೋರಾಗಿ ಗುದ್ದುವ ಸಾಧ್ಯತೆ ಮತ್ತು ಅನಿವಾರ್ಯತೆ ನಮ್ಮ ಅರಿವಿಗೆ ಬರುತ್ತಿದ್ದಂತೆಯೇ ಅದು ಗುದ್ದಿದ ರಭಸಕ್ಕೆ ನನ್ನ ತಲೆ ನಾಲ್ಕೈದು ಬಾರಿ ತಲೆ ಒರಗಿಗೆ ಮತ್ತೆ ಮತ್ತೆ ಪುಟಿವ ಚೆಂಡಿನಂತೆ ಬಡಿಯಿತು. ಸೀಟ್ ಬೆಲ್ಟ್ ಹಾಕಿದ್ದರಿಂದ ಮುಂದೆ ವಾಲುತ್ತಿದ್ದ ದೇಹವನ್ನು ಅದು ಬಲವಾಗಿ ತಡೆಯಲು ಸಾಧ್ಯವಾಯಿತು. ಕಿರುಚಿದ ನಮ್ಮಿಬ್ಬರಿಗೆ ಏನಾಯಿತೆಂದು ತಿಳಿಯಲು ಕೆಲವು ಕ್ಷಣಗಳೇ ಬೇಕಾದವು. ಅಯ್ಯೋ ಅಯ್ಯೋ ಎನ್ನುತ್ತಿದ್ದ ನಾನು ಹಾಗೆಯೇ ಹೊರಗೆ ಕಣ್ಣಾಡಿಸಿದಾಗ, ಒಂದು ಕ್ಷಣ ನಮ್ಮನ್ನು ಗಮನಿಸಿದ ಕಾರುಗಳೆಲ್ಲ ತಮ್ಮಷ್ಟಕ್ಕೆ ತಾವು ಹೊರಡುವುದು ಕಂಡಿತು. ಏನೋ ವಿಚಿತ್ರವಾಗಿದೆಯಲ್ಲ ಎಂದು ಅಂದುಕೊಂಡು ನಮಗೆ ಹೊಡೆದವರ್‍ಯಾರೆಂಬುದನ್ನು ನೋಡಿದಾಗ ಸುಮಾರು 65–68ರ ನಡುವಿನ ಮಹಿಳೆ ಕಂಡಳು. ಅವಳಾಗಲೀ ನನ್ನ ಮಗಳಾಗಲೀ ಉಸಿರೆತ್ತದೆ, ತಮ್ಮಿಂದ ಇತರರಿಗೆ ತೊಂದರೆ ಆಗಬಾರದೆಂಬ ಉದ್ದೇಶದಿಂದ ಪಕ್ಕದ ಕಟ್ಟಡದೊಳಕ್ಕೆ ಬರಲು ಸೂಚಿಸುವುದನ್ನು ಕಂಡೆ. ನನಗೆ ಆದ ಆಘಾತದ ನಡುವೆಯೂ ಇದೆಲ್ಲವನ್ನೂ ನನ್ನ ಕಣ್ಣುಗಳು ಗಮನಿಸುತ್ತಲೇ ಇತ್ತು.

ನಿಧಾನವಾಗಿ ನನ್ನ ಮಗಳು ಅಲ್ಲಿದ್ದ ಪಾರ್ಕಿಂಗ್‌ನಲ್ಲಿ ತನ್ನ ಕಾರನ್ನು ನಿಲ್ಲಿಸಿ, ಕೆಳಗಿಳಿದಳು. ಆ ಇನ್ನೊಬ್ಬಾಕೆಯೂ ಬಂದು ನಮ್ಮ ಪಕ್ಕದಲ್ಲಿಯೇ ತನ್ನ ಕಾರನ್ನು ನಿಲ್ಲಿಸಿ, ತನ್ನ ಫೋನಿನಲ್ಲಿ ಮಾತನಾಡುವುದು ಕಂಡಿತು. ನಮ್ಮ ಕಾರು ಮುಂದಿನ ಎಡಭಾಗದಲ್ಲಿ ತೀವ್ರ ಸ್ವರೂಪದಲ್ಲೇ ಜಖಂ ಆಗಿತ್ತು. ಅವಳು ಬಂದು, 'ಕ್ಷಮಿಸಿ, ನಾನು ನೋಡಲಿಲ್ಲ,




ಪೋಲೀಸರಿಗೆ ಫೋನ್ ಮಾಡಿದ್ದೇನೆ' ಎಂದಾಗ ಆ ನೋವಿನಲ್ಲೂ ನನಗೆ ಅಚ್ಚರಿ. ಡಿಕ್ಕಿ ಹೊಡೆದು ಪರಾರಿಯಾಗುವ ಯೋಚನೆಯೂ ಇಲ್ಲದೆ, ತಾನೇ ಪೋಲೀಸರನ್ನು ಕರೆಸುವ ಈ ಮನೋಧರ್ಮ ಭಾರತೀಯಳಾದ ನನಗೆ ತೀರಾ ಹೊಸದು. ಅದಕ್ಕಿಂತ ಹೆಚ್ಚಿನ ಅಚ್ಚರಿ ಎಂದರೆ, ಅಪಘಾತ ನಡೆದ ಸ್ಥಳ ಒಂದು ಕ್ಷಣದಲ್ಲಿಯೇ ಮಾಮೂಲಿನಂತೆ ಆದುದ್ದು. ಅಪಘಾತದ ಶಬ್ದ ಬಂದೊಡನೆಯೇ ಗುಂಪುಗೂಡುವ ಮಂದಿ ಇಲ್ಲ, ಲೊಚ್ ಲೊಚ್ ಎಂದು ಕರುಣಾಪೂರಿತ ದೃಷ್ಟಿಯಿಂದ ನೋಡುವ ನೋಟಕ ರಿಲ್ಲ, ತಪ್ಪು ನಿನ್ನದೇ ಎಂದು ಪರಸ್ಪರ ಬೈಗುಳ–ಹೊಡೆದಾಟಕ್ಕಿಳಿವ ಚಾಲಕರಂತೂ ಇಲ್ಲವೇ ಇಲ್ಲ. ಕೂಡಲೇ ಅಪಘಾತವನ್ನು, ನಂತರದ ಬೈದಾಟವನ್ನು ಚಿತ್ರೀಕರಿಸಿ ಫೇಸ್‌ಬುಕ್ಕಿಗೆ ಹಾಕುವ ಚಟುವಟಿಕೆಯ ಮಂದಿ ಇಲ್ಲವೇ ಇಲ್ಲ. ರಾಜೀಗೆ ಹಪಾಹಪಿಸುವ ಸಂದರ್ಭವೇ ಒದಗಿ ಬರಲಿಲ್ಲ. ಅದೇಕೋ ಅಮೆರಿಕದಲ್ಲಿ ನಡೆವ ಅಪಘಾತಗಳು ಈ ಯಾವ ಮಸಾಲೆಗಳಿಲ್ಲದೆ ತೀರಾ ಸಪ್ಪೆ ಎಂದೆನಿಸಿ ಬಿಟ್ಟಿತು ನನಗೆ. ಅಷ್ಟರಲ್ಲಿ ಮಗಳು ಬಂದು ನನ್ನ ಸ್ಥಿತಿಯನ್ನು ವಿಚಾರಿಸಿ, ಕುಡಿಯಲು ನೀರಿತ್ತು ಉಪಚರಿಸುತ್ತಿದ್ದಳು. ನನ್ನ ತಲೆಯ ಹಿಂದೆ ಬಲಭಾಗದಲ್ಲಿ ಊದಲಾರಂಭಿಸಿ ಅದು ನಿಂಬೆ ಗಾತ್ರದ ಬೋರೆಗೆ ಎಡೆ ಮಾಡಿಕೊಟ್ಟಿದ್ದುದು ಅವಳಲ್ಲಿ ಅಸಾಧ್ಯ ಭಯವನ್ನುಂಟು ಮಾಡಿತ್ತು ತಲೆ ಬುರುಡೆಗೆ ಮತ್ತು ಮಿದುಳಿಗೆ ಎಲ್ಲಿ ತೊಂದರೆ ಆಗಿದೆಯೋ ಎಂಬ ಚಿಂತೆ ಅವಳಿಗೆ. ನಮಗೆ ಹೊಡೆದಾಕೆಯೂ ಬಂದು ನನಗೆ ಆದ ಆಘಾತಕ್ಕಾಗಿ ಕ್ಷಮೆ ಕೇಳಿದಳು. ಅಷ್ಟರಲ್ಲಿ ವಿಷಯ ತಿಳಿದ ನನ್ನ ಅಳಿಯನೂ ಅವನ ಕಾರಿನಲ್ಲಿ ಅಲ್ಲಿಗೆ ಬಂದ. ಇಷ್ಟೆಲ್ಲ ಆದ ಐದು–ಹತ್ತು ನಿಮಿಷಗಳಲ್ಲಿ ಕಪ್ಪುವಸ್ತ್ರಧಾರಿಯಾದ ಪೋಲೀಸನ ಆಗಮನವಾಯಿತು. ಅವನು ಇಬ್ಬರ ಹೇಳಿಕೆಯನ್ನೂ ತೆಗೆದುಕೊಂಡ. ಇಬ್ಬರೂ 'ತಪ್ಪು ತಮ್ಮದಲ್ಲ' ಎಂದರು. ನಮ್ಮೆದುರು 'ನಾನು ನೋಡಲಿಲ್ಲ' ಎಂದಾಕೆ, ಪೊಲೀಸಪ್ಪನ ಎದುರು 'ನಾನು ಹಸಿರು ಬಂದ ಮೇಲೆಯೇ ಹೊರಟಿದ್ದು' ಅಂದುಬಿಟ್ಟಳು. ಇದು ಬಗೆಹರಿಯುವುದು ಹೇಗೆ? ಎಂಬುದು ನನ್ನ ಒಳಮನದ ಕುತೂಹಲ. ಅವನು ನನ್ನೆಡೆಗೆ ಬಂದು, ಕುಲ–ಗೋತ್ರ ವಿಚಾರಿಸಿ, ನಾನು ಸೀಟ್ ಬೆಲ್ಟ್ ಹಾಕಿರುವುದನ್ನು ಕೇಳಿ ಖಚಿತಪಡಿಸಿಕೊಂಡ. ನಂತರ ಕ್ಯಾಮರಾದಲ್ಲಿ ರೆಕಾರ್ಡ್ ಆಗಿರುವ ದೃಶ್ಯವನ್ನು ತನ್ನ ಕಾರಿನಲ್ಲಿರುವ ಯಂತ್ರದಲ್ಲಿ ನೋಡಿದ ನಂತರವೇ ತಪ್ಪು ಯಾರದೆಂದು ಹೇಳುವುದಾಗಿ ಹೇಳಿ ಹೊರಟ. ಅವನು ಬರಲು ಹತ್ತು ನಿಮಿಷಗಳಾಗಿರಬಹುದು. ನಮ್ಮೆಲ್ಲರ ಮನದಲ್ಲಿ ಹೊಯ್ದಾಟ. ಆತ ಬಂದು ಯಾರನ್ನು ತಪ್ಪಿತಸ್ಥರನ್ನಾಗಿ ಮಾಡುತ್ತಾನೋ ಎಂದು. ಏಕೆಂದರೆ ಆಯಮ್ಮನೂ ತನ್ನದು ತಪ್ಪಿಲ್ಲ ಎಂದೇ ಹೇಳಿಕೆ ಕೊಟ್ಟಿದ್ದಳು. ತನ್ನಷ್ಟಕ್ಕೆ ತಾನು ಚ್ಯೂಯಿಂಗಂ ಜಗಿಯುತ್ತಾ ಆರಾಮವಾಗಿ ಕಾರಿನಲ್ಲಿ ಕುಳಿತು ಒಂದೇ ಸಮನೆ ಫೋನ್ ಮಾಡುತ್ತಿದ್ದವಳನ್ನು ಕಂಡು ನನಗೆ ಆಶ್ಚರ್ಯ. ನಿಜಕ್ಕೂ ಈಕೆ ಇದೀಗ ಅಪಘಾತ ಮಾಡಿದವಳೇ? ಎಂದು. ಅಂತೂ ಪೊಲೀಸಪ್ಪನ ಆಗಮನದೊಂದಿಗೆ ನಮ್ಮೆಲ್ಲರ ಊಹೆಗೆ ಕಡಿವಾಣ ಬಿತ್ತು. ಆತ ಬಂದು ಇಬ್ಬರು ವಾಹನ ಚಾಲಕಿಯರನ್ನು ಎದುರಿಗೆ ನಿಲ್ಲಿಸಿಕೊಂಡು ಹೇಳಿದ 'ನೀವು (ಆಕೆ)ಸಿಗ್ನಲ್ ಹಳದಿ ತೋರುತ್ತಿದ್ದಾಗಲೇ ಕಾರನ್ನು ತಿರುಗಿಸಿ ಬಂದು ಹೊಡೆದಿದ್ದೀರಾ. ಆದ್ದರಿಂದ ತಪ್ಪು ನಿಮ್ಮದೇ. ಅದಕ್ಕಾಗಿ ನಿಮಗೆ ದಂಡವೂ ಬೀಳುತ್ತದೆ' ಎಂದು. (ಇಲ್ಲಿಯ ಸಿಗ್ನಲಿನಲ್ಲಿ ಹಳದಿ ಮಿಣಮಿಣನೆ ಆರಂಭವಾಗ ತೊಡಗಿದರೆ, ಯಾರೂ ಇಲ್ಲದಿದ್ದಲ್ಲಿ ನೀವು ತಿರುಗಬಹುದು. ಆದರೆ ಹಳದಿ ಗಟ್ಟಿಯಾದರೆ ಕ್ಷಣದಲ್ಲಿ ಬರಲಿರುವ ಕೆಂಪಿನ ಆಗಮನವನ್ನು ಅದು ಸೂಚಿಸುತ್ತದೆ.) ಗಮ್ ಜಗಿಯುತ್ತಲೇ ಆಕೆ 'ಎಷ್ಟು ದಂಡ ಬೀಳಬಹುದು?' ಎಂದಳು. 'ಸುಮಾರು 180–200 ಡಾಲರಿನಷ್ಟು, ನಿಮಗೆ ಮೇಲ್ ಮುಖಾಂತರ ಅದನ್ನು ತಿಳಿಸಲಾಗುತ್ತದೆ' ಎಂದ ಅವನು. ಇಬ್ಬರಿಗೂ ಅಪಘಾತದ ವಿವರಗಳನ್ನುಳ್ಳ ಪತ್ರಗಳನ್ನು–ನೋಟಿಸನ್ನು ನೀಡಿದ. ನಮ್ಮ ಕಾರನ್ನು 'ಟೋ' ಮಾಡುವವರನ್ನು ಸಂಪರ್ಕಿಸಲು ನೆರವಾದ. ಮತ್ತೊಮ್ಮೆ ನನ್ನ ಯೋಗಕ್ಷೇಮವನ್ನು ವಿಚಾರಿಸಿ, ತೆರಳಿದರೂ ನನ್ನ ಮನಸ್ಸು ಈ ಎಲ್ಲದರ ಬಗ್ಗೆಯೇ ಯೋಚಿಸುತ್ತಿತ್ತು. ಹತ್ತು ಹದಿನೈದು ನಿಮಿಷಗಳಲ್ಲಿ 'ಟೋ' ಮಾಡುವವರ ಗಾಡಿ ಬಂದು ನಮ್ಮ ಕಾರನ್ನು ತಲೆಗೇರಿಸಿಕೊಂಡು ಹೊರಟೇ ಹೋಯಿತು. ಇದೆಲ್ಲವೂ ಅದೆಷ್ಟು ಸರಳವಾಗಿ ಮುಗಿದು ಹೋಯಿತಲ್ಲ! ಕಾನೂನೆಂಬುದು ಸಾರ್ವಜನಿಕರಿಗೆ ಒಂದು 'ತೊಡಕು' ಎಂದೆನಿಸಲೇ ಇಲ್ಲವಲ್ಲ! ಅದು ಹೇಗೆ ವ್ಯವಸ್ಥೆಯು ಇಷ್ಟು ಪ್ರಜಾಪ್ರೇಮಿ ಆಯಿತು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಲೇ ನನ್ನ ಅಳಿಯನ ಕಾರಿನಲ್ಲಿ ಹೊರಟೆವು. ಆಕೆ ಗಮ್ ಅಗಿಯುತ್ತಾ ಇನ್ನೂ ಫೋನಿನಲ್ಲಿ ಮಾತಾಡುತ್ತಲೇ ಇದ್ದಳು. ಬಹುಶಃ ಶ್ರೀಮಂತಿಕೆ ನೀಡಿರುವ ತಾಕತ್ತು ಅದು ಎಂದಂದುಕೊಂಡೆ.

ಎರಡು ಮೂರು ದಿನಗಳಲ್ಲಿ 'ಅವರ ಕಡೆ'ಯ ಇನ್ಷೂರೆನ್ಸಿನವರಿಂದ ಫೋನ್. 'ಅಪಘಾತ ಹೇಗಾಯಿತು? ಏನೇನಾಯಿತು? ಸೀಟ್ ಬೆಲ್ಟ್ ಹಾಕಿದ್ದರೋ ಇಲ್ಲವೋ?' ಇತ್ಯಾದಿಗಳ ಕೂಲಂಕುಷ ವಿಚಾರಣೆಯ ನಂತರ ನನ್ನ ನೋವಿನ ಬಗ್ಗೆ ವಿಚಾರಿಸಿ, ಅಪಘಾತದ ನನ್ನ ಹೇಳಿಕೆಯನ್ನೂ ರೆಕಾರ್ಡ್ ಮಾಡಿಕೊಂಡರು. ನಮ್ಮ ಕಡೆಯ ಇನ್ಷೂರೆನ್ಸಿನವರಿಂದಲೂ ಫೋನಿನಲ್ಲಿ ವಿಚಾರಣೆ. ಏಕೆಂದರೆ ಒಂದು ವೇಳೆ ಆ ಕಡೆಯವರು ತಮ್ಮದು ತಪ್ಪಿಲ್ಲ ಎಂಬುದನ್ನು ಸಾಬೀತುಪಡಿಸಿದರೆ, ಇವರು ಆಗ ವಿಮೆಯ ಮೊಬಲಗನ್ನು ನೀಡಬೇಕಾಗುತ್ತದೆ. ಮುಂದಿನ ಮೂರು ನಾಲ್ಕು ದಿನಗಳಲ್ಲಿ ಈ ಕುಶಲೋಪರಿಯ ಸಂಪ್ರದಾಯ ಮತ್ತೆರಡು ಸಲ ನಡೆಯಿತು. ನಮ್ಮ ಕಾರು ರಿಪೇರಿ ಆಗದ ಸ್ಥಿತಿಯಲ್ಲಿತ್ತೆಂದು ತಿಳಿದುಬಂದಿತು. ಅದಕ್ಕೆ ಆಗಿರುವ ವಯಸ್ಸಿಗೆ ಅನುಗುಣವಾಗಿ ಅದರ ಬೆಲೆಯನ್ನು ನಿರ್ಧರಿಸಿ ನಮಗೆ ಕೊಡುತ್ತಾರೆಂಬುದನ್ನೂ ತಿಳಿಸಿದರು. ಅಲ್ಲಿಯವರೆಗೆ ಅಂದರೆ ಒಂದು ವಾರದವರೆಗೆ ನಮ್ಮ ಬಳಕೆಗಾಗಿ ಒಂದು ಬಾಡಿಗೆ ಕಾರು ನೀಡುವ ಔದಾರ್ಯವನ್ನೂ ಅವರು ತೋರಿದ್ದರು. ಕಾರಿನಲ್ಲಿಟ್ಟಿದ್ದ ಎಲ್ಲ ಸಾಮಾನುಗಳನ್ನೂ ಅಪಘಾತದ ಗಡಿಬಿಡಿಯಲ್ಲಿ ನಾವು ತಂದಿರಲಿಲ್ಲ. ಅದನ್ನು ತರಲೆಂದು ಗ್ಯಾರೇಜಿಗೆ ಫೋನ್ ಮಾಡಿದಾಗ ಯಾವಾಗ ಬೇಕಾದರೂ ನಾವು ಬರಬಹುದೆಂದರು. ಅಲ್ಲಿಗೆ ಹೋದಾಗ ಅವರು ಕಾರನ್ನು ರಿಪೇರಿ ಮಾಡಲು ಆಗುತ್ತದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿದರ ಗುರುತಂತೂ ಬೇಕಾದಷ್ಟು ಇತ್ತು. ಆದರೆ ನಮ್ಮ ಒಂದೇ ಒಂದು ಚಿಕ್ಕ ಸಾಮಾನನ್ನೂ ಅವರು ಮುಟ್ಟಿರಲಿಲ್ಲ ಎಂಬುದು ಅವರ ಪ್ರಾಮಾಣಿಕತೆಗೆ–ಒಳ್ಳೆಯ ನಡವಳಿಕೆಗೆ ಸಾಕ್ಷಿ ಆಗಿತ್ತು. ಇವುಗಳೆಲ್ಲವೂ ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿ, 'ಸುಸಂಸ್ಕೃತರು ಯಾರು?' ಎಂಬ ಪ್ರಶ್ನೆಯನ್ನು ಅದು ಪದೇ ಪದೇ ಕೇಳುತ್ತಿತ್ತು. ನಮ್ಮ ಇನ್ಷೂರೆನ್ಸಿನವರೊಡನೆ, ಅವರ ಕಡೆಯವರೊಡನೆ ಮಾತುಕತೆಯಲ್ಲಿ ಒಂದು ವಾರ ಅಥವಾ ಹತ್ತು ದಿನಗಳಾಗಿರಬೇಕು. ಅವರ ವಿಮೆಯವರು ತಮ್ಮ ತಪ್ಪನ್ನು ಪೂರ್ಣವಾಗಿ ಒಪ್ಪಿದಂತೆ ಅನಿಸಿರಲಿಲ್ಲ. ಅವರಿಂದ ನಮಗೆ ಮತ್ತೆ ಫೋನ್ ಬಂದಿತು. 'ನಿಮ್ಮ ತಾಯಿಯವರು ಮನೆಗೆ ಮರಳಿದರೇ?' ಎಂದು. 'ಹೌದು' ಎಂದ ನನ್ನ ಮಗಳಿಗೆ 'ಓ ಅವರು ಭಾರತಕ್ಕೆ ಹೋಗಾಯಿತಾ?' ಎಂದಾಗ ಅವಳು 'ಮನೆ ಎಂದರೆ ಇಲ್ಲಿಯದು ಎಂದು ನಾನು ತಿಳಿದಿದ್ದೆ. ಇಲ್ಲ ಅವರು ಇನ್ನೂ ಇಲ್ಲಿಯೇ ಇದ್ದಾರೆ' ಎಂದಳು. 'ಅಹುದೇ? ಅವರ ಮನಸ್ಸಿಗೆ ಆಗಿರುವ ಆಘಾತಕ್ಕೆ ನಮ್ಮ ವಿಷಾದವಿದೆ. ಅದಕ್ಕಾಗಿ ಒಂದು ಸಾವಿರ ಡಾಲರ್ ಪರಿಹಾರ ನೀಡಲು ನಿರ್ಧರಿಸಿದ್ದೇವೆ' ಎಂದಾಗ ನನಗೆ ನಂಬಿಕೆಯೇ ಬಾರದು– 'ಹೀಗೂ ಉಂಟೆ?'ಎಂದು! ನಾವು ಎಲ್ಲಿ ತಪ್ಪುತ್ತಿದ್ದೇವೆ? ನಮ್ಮ ಆರ್ಷೇಯ ಸಂಸ್ಕೃತಿಯ ಬಗ್ಗೆ ಅಪಾರ ಹೆಮ್ಮೆಯಿಂದ ಮಾತನಾಡುವ ನಾವು, ಶ್ರೀರಾಮ, ಸತ್ಯ ಹರಿಶ್ಚಂದ್ರ, ವಿವೇಕಾನಂದರ ಬಗ್ಗೆ ಹೆಮ್ಮೆಪಡುವ ನಾವು ಮಕ್ಕಳಲ್ಲಿ ಪ್ರಾಮಾಣಿಕತೆಯ, ಸಹನೆಯ, ಸಹಿಷ್ಣುತೆಯ, ಸತ್ಯದ ಬೀಜ ಬಿತ್ತುತ್ತಿದ್ದೇವೆಯೇ ಎಂದು ಯೋಚಿಸುತ್ತಾ ಕುಳಿತೆ.


ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



29. ಎಂ.ಜಿ. ಕೃಷ್ಣಸಾಮಿರಾವ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರಿನ ಹಲವು ಹಳೆಯ ಕುಟುಂಬಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದ ಅರಮನೆಯಲ್ಲಿ ಅಥವಾ ಮಹಾರಾಜರ ಸರ್ಕಾರದಲ್ಲಿ ಸೇವೆ ಮಾಡಿಕೊಂಡು ಬಂದಿದ್ದರು. ಸ್ಥಳೀಯರೇ ಆಗಿ ಇಲ್ಲಿಯ ಸಮಸ್ಯೆಗಳನ್ನು ಕಣ್ಣಾರೆ ಕಂಡು ಅವರ ಅಧಿಕಾರದಲ್ಲಿದ್ದಾಗ ಮೈಸೂರಿನ ಅಭಿವೃದ್ಧಿಗೆ ದುಡಿದರು.

ಅಂತಹ ಕುಟುಂಬಕ್ಕೆ ಸೇರಿದ್ದರು ಎಂ.ಜಿ.ಕೃಷ್ಣಸಾಮಿರಾವ್. ಕೃಷ್ಣಸಾಮಿರಾವ್ ಅವರ ತಂದೆ ಮೈಸೂರು ಸರ್ಕಾರದ ಅರಮನೆಯ ಸೇವೆಯಲ್ಲಿ ಮುಸಾಹಿಬ್ ಆಗಿದ್ದ ಗಂಗಾಧರರಾವ್. 18ನೆಯ ಶತಮಾನದ ಪೂರ್ವಾರ್ಧದಿಂದ ಅವರ ಕುಟುಂಬ ಮೈಸೂರಿನ ಸರ್ಕಾರದ ಸೇವೆಯಲ್ಲಿ ತೊಡಗಿತ್ತು. ಒಂದಲ್ಲ ಒಂದು ಪ್ರಮುಖ ಸ್ಥಾನದಲ್ಲಿ ಅವರ ಕುಟುಂಬದವರು ಮಹಾರಾಜರ ಮತ್ತು ಜನರ ಸೇವೆ ಮಾಡಿಕೊಂಡು ಬಂದಿದ್ದರು. ಅವರ ಪೂರ್ವಿಕರ ಪೈಕಿ ಒಬ್ಬರಾದ ಬೂಚೆರಾವ್ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಿಗೆ ಮುಂಚಿನ ಎರಡನೇ ಸ್ಥಾನದಲ್ಲಿದ್ದರು. ಮಹಾರಾಜರಿಗೆ ಅಧಿಕಾರವನ್ನು ಹಿಂತಿರುಗಿಸಿದಾಗ ಜನರಲ್ ಹ್ಯಾರಿಸ್ ಕೃಷ್ಣಸಾಮಿ ರಾವ್ ಅವರಿಗೆ ಮೈಸೂರಿನ ರಾಜಕೀಯ ಮತ್ತು ಆರ್ಥಿಕ ಇಲಾಖೆಗಳ ಜವಾಬ್ದಾರಿ ವಹಿಸಿದ್ದ. ಕೃಷ್ಣಸಾಮಿ ರಾವ್ ರಾಜ್ಯಕ್ಕೆ ಸಲ್ಲಿಸಿದ ನಿಷ್ಠಾವಂತ ಸೇವೆಯನ್ನು ಬುಕನನ್ ಮತ್ತು ವಿಲ್ಕ್ಸ್ ಇಬ್ಬರೂ ಪ್ರಸ್ತಾಪಿಸಿದ್ದಾರೆ.

ಹ್ಯಾರಿಸ್ 1797ರಲ್ಲಿ ಮದ್ರಾಸ್ ಸೈನ್ಯದ ಮುಖ್ಯಸ್ಥನಾಗಿದ್ದ. 1800ರವರೆಗೆ ಇವನು ಮದ್ರಾಸ್ ಪ್ರೆಸಿಡೆನ್ಸಿಯ ಸೈನ್ಯದ ಕಮಾಂಡರ್–ಇನ್–ಚೀಫ್ ಆಗಿ ನೇತೃತ್ವ ವಹಿಸಿದ್ದ. 1798ರ ಡಿಸೆಂಬರ್ ತಿಂಗಳಲ್ಲಿ ಗೌರ್ನರ್ ಜನರಲ್ ಲಾರ್ಡ್ ಮಾರ್ನಿಂಗ್ಟನ್ ಟೀಪು ಸುಲ್ತಾನನ್ನು ಎದುರಿಸಲು ಹ್ಯಾರಿಸ್‌ನನ್ನು ಸೈನ್ಯ ಸಮೇತ ಕಳುಹಿಸಿದ್ದ. ಅವನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ 1799ರ ಮೇ ತಿಂಗಳಲ್ಲಿ ಟೀಪು ಸುಲ್ತಾನನ್ನು ಯುದ್ಧದಲ್ಲಿ ಸೋಲಿಸಿದ. ಟೀಪು ಯುದ್ಧದಲ್ಲಿ ಬಲಿಯಾದ. ಟೀಪುವಿನ ಮರಣಾನಂತರ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಇಂಗ್ಲಿಷರು ಮಹಾರಾಜರನ್ನಾಗಿ ನೇಮಿಸಿ, ಮೈಸೂರು ರಾಜ್ಯವನ್ನು ಮೈಸೂರು ರಾಜರಿಗೆ ಹಿಂತಿರುಗಿಸಿದರು. ಆ ಸಂದರ್ಭ ಬೂಚೆರಾವ್ ಅವರನ್ನು ಈ ಪ್ರಮುಖ ಸ್ಥಾನಕ್ಕೆ ನೇಮಿಸಲಾಗಿತ್ತು.

ಕೃಷ್ಣಸಾಮಿರಾವ್ ಆಗಸ್ಟ್ 11, 1870ರಂದು ಮೈಸೂರಿನಲ್ಲಿ ಜನಿಸಿದರು. ಇಲ್ಲಿನ ಮಹಾರಾಜ ಕಾಲೇಜಿನಲ್ಲಿ ಓದಿ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ ಬಿ.ಎ. ಪದವಿಯನ್ನು 1890ರಲ್ಲಿ ಪಡೆದರು. ನಂತರ ಮದ್ರಾಸಿನ ಪ್ರೆಸಿಡೆನ್ಸಿ ಲಾ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಿ ಆರು ವರ್ಷಗಳ ನಂತರ ರೆವಿನ್ಯೂ ಪ್ರೊಬೇಷನರ್ ಆಗಿ ಮೈಸೂರಿನ ಸಿವಿಲ್ ಸರ್ವೀಸ್ ಸೇರಿದರು. ಎರಡು ವರ್ಷಗಳ ನಂತರ ಎಡತೊರೆಯ, ಅಂದರೆ ಈಗಿನ ಕೃಷ್ಣರಾಜನಗರದಲ್ಲಿ, ಡೆಪ್ಯೂಟಿ ಅಮಲ್ದಾರ್ ಆಗಿ ನೇಮಕಗೊಂಡರು. ತರುವಾಯ ನಾಲ್ಕನೇ ದರ್ಜೆಯ ಅಮಲ್ದಾರ್ ಆಗಿ ಹಲವಾರು ಕೇಂದ್ರಗಳಲ್ಲಿ ಸೇವೆ ಮಾಡಿದರು. 1901ರಲ್ಲಿ ಪೂರ್ಣ ಪ್ರಮಾಣದ ಅಮಲ್ದಾರ್ ಆದರು.

ಈ ಹುದ್ದೆಯಲ್ಲಿ ಐದು ವರ್ಷಗಳು ಕೆಲಸ ಮಾಡಿದ ನಂತರ ಕೃಷ್ಣಸಾಮಿ ರಾವ್ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ಬಡ್ತಿ ಹೊಂದಿ ಬೆಂಗಳೂರು ನಗರಸಭೆಯ ಉಪಾಧ್ಯಕ್ಷರಾಗಿ ನೇಮಕಗೊಂಡರು. ಈ ಸ್ಥಾನದಲ್ಲಿದ್ದು ಅವರು ಹೊಸ ಬಡಾವಣೆ ಸಮಿತಿಯ ಅಧಿಕಾರೇತರ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. 1908ರಲ್ಲಿ ಅವರಿಗೆ ವರ್ಗಾವಣೆಯಾಗಿ ಮೈಸೂರು ನಗರಸಭೆಯ ಉಪಾಧ್ಯಕ್ಷರಾದರು. ಜೊತೆಗೆ ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧಿಕಾರೇತರ ಸದಸ್ಯರಾಗಿಯೂ ಕೆಲಸ ಮಾಡಿದರು. ರಾಜಸೇವಾ ಧುರೀಣ ಸರ್ ಎಂ.ಕಾಂತರಾಜ ಅರಸ್ ಅವರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿದ್ದಾಗ ಕೃಷ್ಣಸಾಮಿ ರಾವ್ ನಗರಾಭಿವೃದ್ಧಿ ಸಮಿತಿಯ ಸದಸ್ಯರಾಗಿ ಸೇವೆ ಮಾಡಿದರು. ಸರ್ ಎಂ.ಕಾಂತರಾಜ ಅರಸ್ ಅವರು 1907ರಿಂದ 1910ರವರೆಗೆ ಸಮಿತಿಯ ಎರಡನೇ ಅಧ್ಯಕ್ಷರಾಗಿದ್ದರು. ನಗರಾಭಿವೃದ್ಧಿ ಸಮಿತಿ 1904ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಾಂಗ್ರೆಸ್ ದುರಾಡಳಿತದ ವಿರುದ್ಧ ಬಿಜೆಪಿ-ಜೆಡಿಎಸ್ ನಡೆಸಲಿರುವ

ಬೆಂಗಳೂರು-ಮೈಸೂರು ಪಾದಯಾತ್ರೆ ಯಶಸ್ವಿಗೊಳಿಸಿ

● ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮನವಿ ● ಬಿಜೆಪಿ ಭ್ರಷ್ಟಾಚಾರ ನಡೆಸಿದೆ ಎಂದು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನದು ಅಭಿವೃದ್ಧಿ ಶೂನ್ಯ ಆಡಳಿತ

ಮೈಸೂರು, ಜು.27(ಎಂಕೆ)- ಹಗರಣಗಳಲ್ಲಿಯೇ ಮುಳುಗಿ, ಕೇವಲ 16-17 ತಿಂಗಳಲ್ಲೇ ಸಂಪೂರ್ಣವಾಗಿ ವಿಫಲವಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಜೆಡಿಎಸ್ ಮತ್ತು ಬಿಜೆಪಿ ವತಿಯಿಂದ ಬೆಂಗಳೂರಿನಿಂದ ಮೈಸೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಜೆಡಿಎಸ್‌ನ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವಂತೆ ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕರೆ ನೀಡಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಜಾತ್ಯಾತೀತ ಜನತಾದಳ ಮೈಸೂರು ನಗರ ಮತ್ತು ಜಿಲ್ಲೆ ವತಿಯಿಂದ ಆಯೋಜಿಸಿದ್ದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಪಾದಯಾತ್ರೆಯ ರೂಪುರೇಷೆಗಳನ್ನು ಇನ್ನೆರಡು ದಿನಗಳಲ್ಲಿ ತಿಳಿಸಲಾಗುವುದು ಎಂದರು.

ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಇಟ್ಟಿದ್ದ 187 ಕೋಟಿ ರೂ. ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಸದನದಲ್ಲಿ ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದು, ಅಧಿಕಾರಿಗಳಿಂದಾಗಿದೆ ಎಂದೇಳುವ ಮೂಲಕ ಸಲಿಸಾಗಿ ನುಸುಳಿಕೊಳ್ಳಲು ಯತ್ನಿಸುತ್ತಿದ್ದಾರೆ. ಎಸ್‌ಇಪಿ/ಟಿಎಸ್‌ಪಿ ಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದಾರೆ. ಕಳೆದ 9 ತಿಂಗಳಿಂದ ಹಾಲು ಉತ್ಪಾದಕ ರೈತರಿಗೆ ಪ್ರೋತ್ಸಾಹ ಧನ ನೀಡದೆ ವಂಚಿಸಲಾಗಿದೆ. ಹಿಂದಿದ್ದ ಬಿಜೆಪಿ ಸರ್ಕಾರವನ್ನು 40 ಪರ್ಸೆಂಟ್ ಎಂದೇಳುತ್ತಾ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮಾಡುತ್ತಿರುವುದಾದರೂ ಏನು. ಶಾಸಕರಿಗೆ ಅನುದಾನ ನೀಡದೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇಷ್ಟೆಲ್ಲಾ ವಿಷಯಗಳನ್ನಿಟ್ಟುಕೊಂಡು ಸರ್ಕಾರದ ವಿರುದ್ಧ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಪಕ್ಷದ ಪ್ರತಿ ಯೊಬ್ಬರು ಭಾಗವಹಿಸಬೇಕು ಎಂದು ಸೂಚಿಸಿದರಲ್ಲದೆ ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆ ದೃಷ್ಟಿಯಿಂದ ರಾಜ್ಯದಾದ್ಯಂತ ಪ್ರವಾಸ ಕೈಗೊಳ್ಳುವುದಾಗಿ ತಿಳಿಸಿದರು.

ಸರ್ಕಾರಕ್ಕೆ ಫ್ರೀಯಾಗಿ ಬರೆದುಕೊಡುವೆ...!

ವಿರೋಧ ಪಕ್ಷದವರು, ವಿಶ್ವನಾಥ್ ಅವರು ಮುಡಾದಲ್ಲಿ ನಾನು ಸೈಟ್ ತೆಗೆದುಕೊಂಡಿದ್ದೇನೆಂದು ನಾಲ್ಕು ನಂಬರ್(ಸೈಟ್ ನಂಬರ್‌ಗಳು)ಗಳನ್ನು ಹೇಳಿದ್ದಾರೆ. ಅವರು ಹೇಳಿರುವಂತೆ ನನ್ನ ಹೆಸರಿನಲ್ಲಿ ಆ ನಾಲ್ಕು ನಂಬರ್ ಇದ್ದರೆ... ನಾಳೆಯೇ ಸರ್ಕಾರಕ್ಕೆ ಫ್ರೀಯಾಗಿ ಬರೆದುಕೊಡುತ್ತೇನೆ. ಬೇರೆಯವರ ಹೆಸರಿನಲ್ಲಿದ್ದರೆ ಅವರು ಫ್ರೀಯಾಗಿ ಬರೆದುಕೊಡಲಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸವಾಲು ಹಾಕಿದರು.

50:50 ಯೋಜನೆಯಡಿ ಒಂದು ಅಡಿ ಜಾಗವನ್ನು ಮುಡಾದಿಂದ ತೆಗೆದುಕೊಂಡಿಲ್ಲ. ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನೇದಾರೂ ತೆಗೆದುಕೊಂಡಿದ್ದರೆ ಅದನ್ನು ಫ್ರೀಯಾಗಿಯೇ ಕೊಡುತ್ತೇನೆ. ಕೋ-ಆಪರೇಟಿವ್ ರಾಜಣ್ಣ ಅವರು ಯಾವಾಗಲೂ ಉಪ ಮುಖ್ಯಮಂತ್ರಿಗಳು ಐದು ಜನರಾಗಬೇಕು ಎನ್ನುತ್ತಿದ್ದರು. ಆದ್ರೆ ಯಾವಾಗ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ 2000 ಕೋಟಿ ಹಗರಣ ಬೆಳಕಿಗೆ ಬರಲು ಶುರುವಾಯಿತೋ ಉಪ ಮುಖ್ಯಮಂತ್ರಿ ಮಾತನ್ನೆ ಬಿಟ್ಟುಬಿಟ್ಟರು ಎಂದು ವ್ಯಂಗ್ಯವಾಡಿದರು.



ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅರವನ್ನು ಅಭಿನಂದಿಸಲಾಯಿತು. ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಶಾಸಕ ಜಿ.ಡಿ.ಹರೀಶ್‌ಗೌಡ ಮಾಜಿ ಶಾಸಕರಾದ ಕೆ.ಮಹಾದೇವ್, ಸುರೇಶ್‌ಗೌಡ, ಡಾ. ಅನ್ನದಾನಿ, ಅಶ್ವಿನ್‌ಕುಮಾರ್ ಮತ್ತಿತರರಿದ್ದರು.

ಕುಮಾರಸ್ವಾಮಿ ನೇತೃತ್ವದಲ್ಲಿ ಪಾದಯಾತ್ರೆ: ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಕೇಳಿದ್ದಕ್ಕೆ.. ನೀವ್ ಮಾಡಿಲ್ವಾ... ನಾವ್ ಮಾಡಿದ್ದಿವೋ ಬಿಟ್ಟಿದ್ದೇವೋ... ನಮ್ಮನ್ನಿಲ್ಲಿ ಕೂರಿಸಿದ್ದಾರೆ. ನಿಮಗೆ 135 ಸೀಟ್ ಕೊಟ್ಟಿದ್ದಾರಲ್ಲಾ ನೀವ್ ಏನ್ ಮಾಡ್ತಾ ಇದ್ದೀರಿ... ಪರಿಶಿಷ್ಟ ಪಂಗಡದ ಹೆಸರೇಳಿಕೊಂಡು ಹಗರಣ ಆಗಿದೆ. ಆದ್ರೆ 187 ಕೋಟಿ ಆಗಿಲ್ಲ. ಆದರೆ, ದುರುಪಯೋಗವಾಗಿದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಈ ವಿಚಾರವನ್ನಿಟ್ಟುಕೊಂಡು ರಾಷ್ಟ್ರ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸಿಎಂ ರಾಜೀನಾಮೆಯೇ ಮುಖ್ಯ ಉದ್ದೇಶ: ಮಾಜಿ ಶಾಸಕ ಕೆ.ಮಹದೇವ್ ಮಾತನಾಡಿ, ಮುಡಾ(ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಹಗರಣದಲ್ಲಿ ಸರ್ಕಾರ ಪಾಲುದಾರಿಕೆ ಇದೆ. ರಾಜ್ಯ ಸರ್ಕಾರದ ಹಗರಣಗಳನ್ನು ಜನತೆಯ ಮುಂದೆ ಬಯಲಿಗೆಳೆಯಲು ಜೆಡಿಎಸ್-ಬಿಜೆಪಿ ಪಾದಯಾತ್ರೆ ಹಮ್ಮಿಕೊಂಡಿದೆ. ಹತಾಶೆಯಿಂದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಇನ್ನಿತರರ ಹೆಸರೇಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡಲೇಬೇಕು ಎಂಬುದು ಪಾದಯಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಬಹುಶಃ ಕಡೇ ಅವಧಿ: ಮಾಜಿ ಶಾಸಕ ಸುರೇಶ್‌ಗೌಡ ಮಾತನಾಡಿ, ಕಾಂಪಿಟೇಷನ್ ರೀತಿಯಲ್ಲಿ ಭ್ರಷ್ಟಾಚಾರ ನಡೆಸುತ್ತಿರುವ ಕಾಂಗ್ರೆಸ್‌ನದ್ದು ಬಹುಶಃ ಇದೇ ಕಡೆ ಅವಧಿ. ದುಡ್ಡು ಮಾಡಲು ಸಚಿವರು ಪರಸ್ಪರ ಪೈಪೋಟಿ ನಡೆಸುತ್ತಿದ್ದಾರೆ. ಇಂತಹ ಕೆಟ್ಟ ಸರ್ಕಾರವನ್ನು ಹಿಂದೆದೂ ರಾಜ್ಯದ ಜನತೆ ನೋಡಿರಲಿಲ್ಲ. ಬಹಳ ಸರಳವಾಗಿ ಭ್ರಷ್ಟಾಚಾರ ಮಾಡುತ್ತಿರುವ ರಾಜ್ಯ ಸರ್ಕಾರ ಜನತೆಯ ಹಣವನ್ನು ಚುನಾವಣೆಗೆ ಬಳಸಿಕೊಂಡಿದೆ. ದಲಿತರ ಪರ ಎಂದೇಳುತ್ತಾ ದಲಿತರಿಗೆ ಅನ್ಯಾಯ ಮಾಡಿದ್ದೇ ಕಾಂಗ್ರೆಸ್ ಎಂದು ವಾಗ್ದಾಳಿ ನಡೆಸಿದರು.

ಹೆಸರಿಗಷ್ಟೇ ಶಾಸಕರಾಗಿದ್ದೇವೆ: ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಒಂದೇ ಒಂದು ರೂಪಾಯಿ ಅನುದಾನ ನೀಡಿಲ್ಲ. ಹೆಸರಿಗಷ್ಟೇ ಶಾಸಕರಾಗಿದ್ದಾರೆ. ನೀಡುವ 2 ಕೋಟಿ ಅನುದಾನವನ್ನು ಎಲ್ಲೆಲ್ಲಿಗೆ ಹಂತ ಹಂಚಿಕೆ ಮಾಡುವುದು ಎಂದು ತೀವ್ರ ಬೇಸರ ವ್ಯಕ್ತಪಡಿಸಿದ ಅವರು, ಮುಡಾ ಹಗರಣ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡದೆ ಇರುವುದರಿಂದ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಿದ್ದು, ಪಕ್ಷದ ಪ್ರತಿಯೊಬ್ಬರು ಬೆಂಬಲ ನೀಡಬೇಕು ಎಂದು ತಿಳಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಅನ್ನದಾನಿ, ಜೆಡಿಎಸ್ ನಗರಾಧ್ಯಕ್ಷ ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಮೇಯರ್‌ಗಳಾದ ಲಿಂಗಪ್ಪ, ರವಿಕುಮಾರ್, ಭಾಗ್ಯ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಕೆ.ವಿ.ಶ್ರೀಧರ್, ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಜಿಲ್ಲಾ ಮಹಿಳಾಧ್ಯಕ್ಷೆ ದಾಕ್ಷಾಯಿಣಿ ಮತ್ತಿತರರಿದ್ದರು.

ನಿಖಿಲ್ ನೇತೃತ್ವದಲ್ಲಿ ಮೈಸೂರು ಜಿಲ್ಲೆಯಲ್ಲಿ ಸಂಘಟನೆಯ ಜವಾಬ್ದಾರಿ ನಾನೇ ವಹಿಸಿಕೊಳ್ಳುತ್ತೇನೆ: ಸಾರಾ

ಪಾದಯಾತ್ರೆ ಮುಗಿದ ಬಳಿಕ ನಿಖಿಲ್, ಸ್ಥಳೀಯ ಹಾಲಿ ಮತ್ತು ಮಾಜಿ ಶಾಸಕರು, ಮುಖಂಡರ ನೇತೃತ್ವದಲ್ಲಿ ಮೈಸೂರು ಜಿಲ್ಲೆಯ ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿಯೂ ಕಡ್ಡಾಯವಾಗಿ 25 ಸಾವಿರ ಕಾರ್ಯಕರ್ತರನ್ನು ಮಾಡುವ ಸಂಘಟನೆಯ ಜವಾಬ್ದಾರಿಯನ್ನು ನಾನೇ ವಹಿಸಿಕೊಳ್ಳುತ್ತೇನೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು. ಜೆಡಿಎಸ್‌ನ ಬಹಳಷ್ಟು ಹಿರಿಯ ಕಾರ್ಯಕರ್ತರು ಜನತಾದಳ ಅಧಿಕಾರ ಬಂದರೂ ನಮ್ಮನ್ನು ಬೋರ್ಡ್ ಅಧ್ಯಕ್ಷರನ್ನಾಗಿ ಮಾಡಲಿಲ್ಲ. ಯಾವುದಕ್ಕೂ ನೇಮಕಾತಿ ಮಾಡಲಿಲ್ಲ ಎಂದು ಹೇಳುತ್ತಲೇ ಇರುತ್ತೀರಿ. 2016ರಲ್ಲಿ 20 ತಿಂಗಳು, ಕಳೆದ ಬಾರಿ 14 ತಿಂಗಳು ಮಾತ್ರವೇ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದರು. ಇಷ್ಟು ಬಿಟ್ಟರೆ ನಾವ್ ಯಾವತ್ತು ಕೂಡ ಅಧಿಕಾರದಲ್ಲಿಲ್ಲ. ಆದರೆ ನಮ್ಮ ಮಿತ್ರ ಪಕ್ಷ ಬಿಜೆಪಿ, ಈ ಬಾರಿಯೂ ಸೇರಿ ಕೇಂದ್ರದಲ್ಲಿ 11ನೇ ವರ್ಷ ಮೈತ್ರಿ ಮಾಡಿಕೊಂಡಿದೆ. ಎಷ್ಟು ಜನ ನೇಮಕಾತಿ ಯಾಗಿದ್ದಾರೆ, ಯಾರ್‍ಯಾರು ಏನೇನಾಗಿದ್ದಾರೆ ಎಂಬುದನ್ನು ನೋಡಿದ್ದೇವೆ. ಅಧಿಕಾರ ತಾನಾಗಿಯೇ ಹುಡುಕಿಕೊಂಡು ಬರಲಿದ್ದು ಕಾಯಬೇಕು ಎಂದು ವಿಶ್ವಾಸ ಮೂಡಿಸಿದರು.

ನಗರಪಾಲಿಕೆ, ಜಿಪಂ, ತಾಪಂ ಚುನಾವಣೆಗಳು ಹತ್ತಿರದಲ್ಲಿವೆ. ಪಕ್ಷ ನಿಷ್ಠೆ ನೋಡಿ ಕುಮಾರಸ್ವಾಮಿ ಅವರು ಜವಾಬ್ದಾರಿಯನ್ನು ನೀಡುತ್ತಾರೆ. ಮುಂದಿನ ದಿನಗಳಲ್ಲಿ ಯಾರು ಅಧಿಕಾರದಲ್ಲಿರುತ್ತೀರಿ ಅವರು ತಮ್ಮ ಜೊತೆಗೆ 25-30 ಮಂದಿ ಕಾರ್ಯಕರ್ತರನ್ನು ಕರೆದುಕೊಂಡು ಬರಬೇಕು. ನಿಷ್ಪಕ್ಷಪಾತವಾಗಿ ಕೆಲಸ ಮಾಡುವವರಿಗೆ ಜವಾಬ್ದಾರಿ ನೀಡಲಿದ್ದೇವೆ. ಹಾಗಾಗಿ ಎಲ್ಲರೂ ಸೇರಿ ಒಟ್ಟಾಗಿ ಪಕ್ಷ ಕಟ್ಟುವ ಕೆಲಸ ಮಾಡೋಣ ಎಂದು ಕಿವಿಮಾತು ಹೇಳಿದರು.

ಕೆಆರ್‌ಎಸ್ ಜಲಾಶಯದಿಂದ 1.31 ಲಕ್ಷಕ್ಕೂ ಅಧಿಕ ನೀರು ಬಿಡುಗಡೆ

ನದಿಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ; ಆತಂಕ



ಮಂಡ್ಯ,ಜು.27- ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದ್ದು, ಜಲಾಶಯದಿಂದ ಶನಿವಾರ 1,31,234 ಕ್ಯೂಸೆಕ್ ಭಾರೀ ಪ್ರಮಾಣದಲ್ಲಿ ನೀರನ್ನು ಹೊರ ಬಿಡಲಾಗುತ್ತಿದೆ.

ಮಳೆ ಆರ್ಭಟ ಜೋರಾಗಿರುವ ಹಿನ್ನೆಲೆಯಲ್ಲಿ ಹಾರಂಗಿ ಮತ್ತು ಹೇಮಾವತಿ ಜಲಾಶಯದಿಂದ ಭಾರೀ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಪರಿಣಾಮ ಕ್ಷಣ ಕ್ಷಣಕ್ಕೂ ಕೆಆರ್‌ಎಸ್ ಒಳ ಹರಿವು ಹಾಗೂ ಹೊರ ಹರಿವಿನಲ್ಲಿ ಹೆಚ್ಚಳವಾಗುತ್ತಿದೆ. ಹೀಗಾಗಿ ನದಿ ಪಾತ್ರ ಜನತೆ ತಮ್ಮ ಜಾನುವಾರು ಹಾಗೂ ಸಾಮಗ್ರಿಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಮಂಡ್ಯ ಜಿಲ್ಲಾಡಳಿತ ಈಗಾಗಲೇ ಸೂಚನೆ ನೀಡಿದೆ.

ಜಲಾಶಯದಿಂದ ಕಾವೇರಿ ನದಿಗೆ ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಹರಿಸುತ್ತಿರುವ ಕಾರಣ ಶ್ರೀರಂಗಪಟ್ಟಣ ಸುತ್ತಮುತ್ತ ನದಿ ತೀರದಲ್ಲಿ ದೇವಾಲಯ ಹಾಗೂ ರಸ್ತೆಗಳು ಜಲಾವೃತವಾಗಿವೆ ಶ್ರೀರಂಗಪಟ್ಟಣದ ಗಂಜಾಂನ ಪ್ರಸಿದ್ಧ ನಿಮಿಷಾಂಬ ದೇವಾಲಯದ ಮೆಟ್ಟಿಲುಗಳೂ ಮುಳುಗಡೆಯಾಗಿವೆ. ದೇವಾಲಯದ ಮುಂದಿನ ರಸ್ತೆ ಕೂಡ ಜಲಾವೃತವಾಗಿವೆ.

ಪಟ್ಟಣದಿಂದ ಪಾಲಹಳ್ಳಿ ಮಾರ್ಗವಾಗಿ ಮೈಸೂರು, ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮಕ್ಕೆ ಸಂಪರ್ಕ ಕಲ್ಪಿಸುವ ಪಶ್ಚಿಮ ವಾಹಿನಿ ಬಳಿಯ ರೈಲ್ವೆ ಸೇತುವೆಯ ಕೆಳಗಿನ ರಸ್ತೆಯಲ್ಲಿ ಎರಡು ಅಡಿಗಳಷ್ಟು ನೀರು ಆವರಿಸಿದೆ. ಪಟ್ಟಣ ಸಮೀಪದ ದೊಡ್ಡ ಗೋಸಾಯಿಘಾಟ್ ಬಳಿ ಕಾಶಿ ವಿಶ್ವನಾಥ, ಪಾಂಡುರಂಗ, ಆಂಜನೇಯ ಸ್ವಾಮಿ ದೇವಾಲಯಗಳು ಭಾಗಶಃ ಮುಳುಗಿವೆ ಚಿಕ್ಕ ಗೋಸಾಯಿಘಾಟ್ ಬಳಿಯ ವಿಶ್ವನಾಥ ದೇವಾಲಯದ ಗರ್ಭಗುಡಿಯಲ್ಲಿ ಮೂರು ಅಡಿಯಷ್ಟು ನೀರು ನಿಂತಿದೆ.


ಇನ್ನು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಗಗನಚುಕ್ಕಿ ಹಾಗೂ ಚಾಮರಾಜನಗರ ಜಿಲ್ಲೆಯ ಭರಚುಕ್ಕಿ ಜಲಪಾತಗಳು ಧುಮ್ಮಿಕ್ಕಿ ಹರಿಯುತ್ತಿವೆ. ಜು.27ರ ಶನಿವಾರ ರಾತ್ರಿ 8ರ ವೇಳೆಗೆ 1,22,021 ಕ್ಯೂಸೆಕ್ ನೀರು ಕೆಆರ್‌ಎಸ್‌ಗೆ ಒಳಹರಿವು ಇದ್ದು, 1,31,234 ಕ್ಯೂಸೆಕ್ ನೀರನ್ನು ಬಿಡಲಾಗಿದೆ

ಸಿಲಿಕಾನ್ ವ್ಯಾಲಿ ಬಡಾವಣೆಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ಮೈಸೂರಿನ ಬೆಳವಾಡಿ ಗ್ರಾಮದ ಸಿಲಿಕಾನ್ ವ್ಯಾಲಿ ಬಡಾವಣೆಯಲ್ಲಿ ಮಾಜಿ ಕಮಾಂಡೋ ಸಿ.ಎಂ.ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಮೈಸೂರು ಸೈನಿಕ ಅಕಾಡೆಮಿ ಸಂಸ್ಥೆಯು 25ನೇ ವರ್ಷದ ಕಾರ್ಗಿಲ್ ವಿಜಯದ ಸಂಭ್ರಮವನ್ನು ಮೈಸೂರಿನ ಹೂಟಗಳ್ಳಿ ಪ್ರದೇಶಗಳಲ್ಲಿ ಆಚರಿಸಿತು.

ಸಂತ ಅನ್ನಮ್ಮನ ಹುಟ್ಟುಹಬ್ಬ



ಮೈಸೂರಿನ ಗಾಂಧಿನಗರದಲ್ಲಿರುವ ಸಂತ ಅನ್ನಮ್ಮನ ದೇವಾಲಯದಲ್ಲಿ ಸಂತ ಅನ್ನಮ್ಮನ ಹುಟ್ಟುಹಬ್ಬವನ್ನು ಗಾಯನ, ಬಲಿಪೂಜೆ ಮೂಲಕ ಆಚರಿಸಲಾಯಿತು. ಈ ವೇಳೆ ಸಂತ ಜೋಸೆಫರ ಧರ್ಮ ಕೇಂದ್ರದ ಪ್ರಧಾನ ಗುರುಗಳಾದ ಸ್ಟ್ಯಾನಿ ಡಿ.ಆಲ್ಮೇಡಾ, ಫಾದರ್ ನವೀನ್‌ಕುಮಾರ್, ಫಾದರ್ ಪೀಟರ್, ಫಾದರ್ ಫ್ರಾನ್ಸಿಸ್ ಜೇವಿಯರ್, ಸಂತ ಅನ್ನಮ್ಮ ದೇವಾಲಯದ ಅಧ್ಯಕ್ಷ ಸುಸೈರಾಜ್, ಕಾರ್ಯದರ್ಶಿ ಆರೋಗ್ಯದಾಸ್ (ಸಂಪತ್), ಅಂ.ವಿಲ್ಫ್ರೆಡ್, ಸಂದೀಪ್, ಸ್ಟೀವನ್, ನವೀನ್, ಅಂಬ್ರೋಸ್, ಪ್ರವೀಣ್, ದಾಸ್, ಸಂದೇಶ್, ಜೆರಾಲ್ಡ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಟೈಮ್ ಕಿರುಚಿತ್ರ ಪ್ರದರ್ಶನ

ಮೈಸೂರು, ಜು.27(ಜಿಎ)-ವೈಲ್ಡ್ ವಂಡರ್ಸ್ ಮೀಡಿಯಾ ವತಿಯಿಂದ ನಿರ್ಮಿಸಿರುವ 'ಟೈಮ್' ಕಿರು ಚಿತ್ರದ ಪ್ರದರ್ಶನವನ್ನು ಜು.29ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ನೃಪತುಂಗ ಶಾಲೆ ಆವರಣದ ರಮಾ ಗೋವಿಂದ ರಂಗಮಂದಿರದಲ್ಲಿ ಆಯೋ ಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ವಿನಯ್ ಈ ವಿಷಯ ತಿಳಿಸಿ, ವನ್ಯಜೀವಿ ಗಳ ಮಾಂಸ ಕಾಮೋತ್ತೇಜಕ ವಸ್ತು ಎಂಬ ಮೋಹಕ್ಕೆ ಸಿಲುಕುವ ಮನುಷ್ಯ ಸೃಷ್ಟಿಯ ಅಪೂರ್ವ ಜೀವಿಗಳ ನಾಶಕ್ಕೆ ಹೇಗೆ ಕಾರಣನಾಗುತ್ತಾನೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದ್ದು, ಮೂಢ ನಂಬಿಕೆ ಬಗ್ಗೆಯೂ ಜಾಗೃತಿ ಮೂಡಿ ಸಲು ಚಿತ್ರ ಮಾಡಲಾಗಿದೆ ಎಂದರು.

ಪ್ರದರ್ಶನದ ನಂತರ ಚಿತ್ರತಂಡದ ಕಲಾವಿದರು, ತಂತ್ರಜ್ಞರೊಂದಿಗೆ ಸಂವಾದ ಇರಲಿದ್ದು, ಈ ವೇಳೆ ನಟ ರಾಘವೇಂದ್ರ ಬೂದನೂರ್, ವನ್ಯಜೀವಿ ತಜ್ಞ ಸೋಮಶೇಖರ್, ರಂಗವಲ್ಲಿ ಸಂಸ್ಥೆಯ ಕಾರ್ಯ ದರ್ಶಿ ಚಿತ್ರನಟ ರಾಜೇಶ್, ರವಿಪ್ರಸಾದ್, ಆರ್ಕೆಸ್ಟ್ರಾ ಸಿನಿಮಾ ಖ್ಯಾತಿಯ ಮಹೇಶ್ ಕುಮಾರ್ ಹಾಜರಿರುವರು. ಇದು ಉಚಿತ ಪ್ರದರ್ಶನವಾಗಿದ್ದು, ವನ್ಯಜೀವಿ ಆಸಕ್ತರು ಆಗಮಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಪ್ರಯಾಗ್, ರಾಜೇಶ್, ಮಧು ಸುಗತ ಮತ್ತಿತರರು ಉಪಸ್ಥಿತರಿದ್ದರು.

ಇಂದು 'ಕವಿಯ ನೋಡಿ ಕವಿತೆ ಹೇಳಿ' ಕಾರ್ಯಕ್ರಮ

ಮೈಸೂರು, ಜು.27(ಜಿಎ)-ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಜು.28 ರಂದು ಸಂಜೆ 5ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ 'ಕವಿಯ ನೋಡಿ ಕವಿತೆ ಹೇಳಿ' ಎಂಬ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಘಟಕದ ಅಧ್ಯಕ್ಷ ನಾಗರಾಜ್ ವಿ.ಬೈರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಸಾಹಿತಿಗಳಾದ ಡಾ.ಎಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣ್‌ರಾವ್, ಜಯಪ್ಪ ಹೊನ್ನಾಳಿ ಅವರ ಸಮ್ಮುಖದಲ್ಲಿ ಕಾವ್ಯ ವಾಚನ ಮತ್ತು ಗೀತ ಗಾಯನ ನಡೆಯಲಿದೆ. ಪರಿಷತ್ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.


ತಮ್ಮ ಘಟಕ ಇದುವರೆಗೆ ಹಮ್ಮಿಕೊಂಡಿದ್ದ ಈ ರೀತಿಯ ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಬಾರಿಯ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದ್ದರೂ ಸ್ಥಳದಲ್ಲೇ ಪಾಸ್ ವಿತರಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಿರಿಬಾಲು, ಡೇವಿಡ್, ವೆಂಕಟೇಗೌಡ, ಡೇವಿಡ್ ಪ್ರತಿಭಾಂಜಲಿ ಉಪಸ್ಥಿತರಿದ್ದರು.

ಆಷಾಢ ಮಾಸದ ಪೂಜಾ ಮಹೋತ್ಸವ



ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಿಯ ಆಷಾಢ ಮಾಸದ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ವಾರ್ಡ್ ನಂ.61ರ ವಿದ್ಯಾರಣ್ಯಪುರಂ ಮಿಲ್ಕ್ ಸೆಂಟರ್ ರಸ್ತೆಯಲ್ಲಿ ಎಂ.ಕೆ.ಸೋಮಶೇಖರ್ ಅಭಿಮಾನಿಗಳ ಬಳಗದ ವತಿಯಿಂದ ಅನ್ನದಾನದ ಜೊತೆಗೆ ಮಹಿಳೆಯರಿಗೆ ಸೀರೆಗಳನ್ನು ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಪಾಲಿಕೆ ಸದಸ್ಯ ಎಂ.ಸುನೀಲ್, ವಾರ್ಡ್ ಅಧ್ಯಕ್ಷ ಶಂಕರ್, ಸಮಾಜ ಸೇವಕರಾದ ಜೋಗಿ ಮಹೇಶ್, ಜೈರಾಜ್, ದಿಲೀಪ್, ಪುಟ್ಟಣ್ಣ, ಶಶಿಕಾಂತ್, ನಾಗು, ದೀಪು, ಗುಂಡ, ಮಧುರಾಜ್, ಮಹ್ಮದ್ ಫಾರೂಖ್ ಮತ್ತಿತರರಿದ್ದರು.

ಮೈಸೂರು ಜಿಲ್ಲಾಧಿಕಾರಿಗೆ ಅಭಿನಂದನೆ



ಮೈಸೂರು ಜಿಲ್ಲಾಧಿಕಾರಿ ಡಾ.ಲಕ್ಷ್ಮೀಕಾಂತ ರೆಡ್ಡಿ ಅವರನ್ನು ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಅಭಿನಂದಿಸಿದರು. ಈ ವೇಳೆ ನಂಜುಂಡಿ, ಪಡುವಾರಹಳ್ಳಿ ಕೃಷ್ಣ ಇದ್ದರು.

ಹೆಚ್.ಡಿ.ಕುಮಾರಸ್ವಾಮಿ 1984ರಲ್ಲಿ ತಮಗೆ ಮಂಜೂರಾದ ನಿವೇಶನವನ್ನಷ್ಟೇ ಕೇಳುತ್ತಿದ್ದಾರೆ

ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಸಮರ್ಥನೆ

ಮೈಸೂರು, ಜು.27(ಜಿಎ)-ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮಂಜೂರು ಮಾಡಿರುವ ನಿವೇಶನ ಕೇಳುತ್ತಿದ್ದಾರೇ ಹೊರತು 50:50 ಅನುಪಾತದಡಿ ನಿವೇಶನ ಕೇಳಿಲ್ಲ ಎಂದು ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ಬೆಳಗ್ಗೆ ಎದ್ದ ತಕ್ಷಣ ಹಗರಣಗಳನ್ನು ನೋಡುವಂತಾಗಿದ್ದು, ವಾಲ್ಮೀಕಿ ಹಗರಣದ ಮೂಲಕ ಎಸ್‌ಸಿ, ಎಸ್‌ಟಿ ಜನರ ಏಳಿಗೆಗೆ ಬಳಸಬೇಕಾದ ಹಣ ಹೈದರಾಬಾದ್‌ಗೆ ಹೋಗಿದೆ. ಇದನ್ನು ಎಸ್‌ಸಿ, ಎಸ್‌ಟಿ ಸಮುದಾಯ ಪ್ರಶ್ನಿಸಬೇಕು ಎಂದರು.

ಮತ್ತೊಂದೆಡೆ ಮುಡಾ ಹಗರಣದಲ್ಲಿ ಎಂ.ಲಕ್ಷ್ಮಣ್ ಮತ್ತು ಭೈರತಿ ಸುರೇಶ್ ಅವರು ಹೆಚ್.ಡಿ.ಕುಮಾರಸ್ವಾಮಿ ಅವರ ಹೆಸರನ್ನು ಇಟ್ಟುಕೊಂಡು ಆರೋಪ ಮಾಡುತ್ತಿದ್ದಾರೆ. ಆದರೆ, 1983ರಲ್ಲಿ ಕುಮಾರಸ್ವಾಮಿ ಅವರು ಕೈಗಾರಿಕೆ ಸ್ಥಾಪಿಸಲು ನಿವೇಶನಕ್ಕೆ ಕೋರಿ ಮುಡಾಗೆ ಅರ್ಜಿ ಸಲ್ಲಿಸಿದರು. 1984ರಲ್ಲಿ ಮೈಸೂರಿನ ಜೆ.ಪಿ.ನಗರದಲ್ಲಿ 280X75 ಅಳತೆಯ ನಿವೇಶನವನ್ನು ಮುಡಾ ಮಂಜೂರು ಮಾಡಿತು. ಈ ನಿವೇಶನಕ್ಕೆ 37,334 ರೂ.ಗಳನ್ನು ಕಟ್ಟಿದ್ದಾರೆ. ಆದರೆ, ಅವರು ಹಕ್ಕುಪತ್ರ ಕೇಳುವ ಸಂದರ್ಭದಲ್ಲಿ ಈ ನಿವೇಶನದ ಅರ್ಧ ಭಾಗವನ್ನು ಬೇರೆ ಅವರಿಗೆ ಮಂಜೂರು ಮಾಡಿರುವ ಬಗ್ಗೆ ತಿಳಿದು 2017ರಲ್ಲಿ ಮುಡಾ ಆಯುಕ್ತರಿಗೆ ಪತ್ರ ಬರೆದು ಸದರಿ ನಿವೇಶನದ ಹಕ್ಕುಪತ್ರ ನೀಡಬೇಕೆಂದು ಅಥವಾ ಬದಲಿ ನಿವೇಶನದ ಹಕ್ಕು ಪತ್ರವನ್ನಾದರೂ ನೀಡುವಂತೆ ಮನವಿ ಮಾಡಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮಾತನಾಡಿದರು.

ಪತ್ರಕ್ಕೆ ಪ್ರತಿಕ್ರಿಯಿಸಿದ ಮುಡಾ ಆಯುಕ್ತರು ಬದಲಿ ನಿವೇಶನ ನೀಡಲು ಸಮ್ಮತಿಸಿದ್ದರು. ಆದರೆ, ಈವರೆಗೂ ಅವರಿಗೆ ಯಾವುದೇ ನಿವೇಶನ ನೀಡಿಲ್ಲ. ಇದನ್ನು ಅವರು ಕೇಳುತ್ತಿದ್ದಾರೆ ಹೊರತು ಅವರು 50:50 ಅನುಪಾತದಲ್ಲಿ ನಿವೇಶನ ಕೇಳಿಲ್ಲ. ಅವರಿಗೆ ನಿವೇಶನ ಮಂಜೂರು ಆದಾಗ ಭೈರತಿ ಸುರೇಶ್ ಇನ್ನೂ ಚಿಕ್ಕ ಹುಡುಗ. ಅವರಿಗೇನು ಗೊತ್ತು ಎಂದು ಎಂ.ಕೆ.ರವಿಕುಮಾರ್ ವಾಗ್ದಾಳಿ ನಡೆಸಿದರು.

ಮಾಜಿ ಮೇಯರ್ ಆರ್.ಲಿಂಗಪ್ಪ ಮಾತನಾಡಿ, ಮುಡಾ ಹಗರಣವನ್ನು ಸಿಬಿಐ ತನಿಖೆಗೆ ನೀಡಬೇಕು. ಅಧಿಕಾರಿಗಳು ಸೈಟುಗಳನ್ನು ಮಾರಾಟ ಮಾಡಿ ನಿಮ್ಮ ಪಕ್ಷಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದು ತಿಳಿಯುತ್ತದೆ. ಎರಡು ಕೈ ಸೇರಿದರೆ, ಹೇಗೆ ಚಪ್ಪಾಳೆಯಾಗುತ್ತದೆ ಹಾಗೇ ಈ ಹಗರಣದಲ್ಲಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಪಾತ್ರವೇನು ಎಂಬುದು ತಿಳಿಯುತ್ತದೆ ಎಂದರು.

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಅನ್ಯಾಯ ಮಾಡಲಾಗಿದೆ ಎಂಬ ಕಾಂಗ್ರೆಸ್ ಆರೋಪ ಸರಿಯಲ್ಲ. ವಾಸ್ತವವಾಗಿ ಈಗಾಗಲೇ ಕೇಂದ್ರ ಸರ್ಕಾರ ರೈಲ್ವೆ ವಲಯಕ್ಕೆ 7,559 ಕೋಟಿ ನೀಡಿದೆ. ಇದೇ ವೇಳೆ ಗೃಹಲಕ್ಷ್ಮಿ ಯೋಜನೆಯಿಂದ ರಾಜ್ಯ ಸರ್ಕಾರ ಪಾಪರ್ ಆಗಿದೆ ಎಂದು ಜೆಡಿಎಸ್ ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ ಟೀಕಿಸಿದರು.

ಹೊಸದಾಗಿ ರಚನೆ ಆಗಿರುವ ಕಾರಣ ಆಂಧ್ರ, ತೆಲಂಗಾಣ ಮೊದಲಾದ ರಾಜ್ಯಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ನೀಡಲಾಗಿದೆ. ಇದನ್ನು ಟೀಕಿಸುವುದು ಸರಿಯಲ್ಲ. ಕೇಂದ್ರ ಸರ್ಕಾರ 2013, 2018ರ ಅವಧಿಯಲ್ಲಿ 8,480 ಕೋಟಿ ಖರ್ಚು ಮಾಡಿ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ ಮಾಡಿದೆ. ಈ ರೀತಿ ಕೇಂದ್ರ ಸರ್ಕಾರ ಇಲ್ಲಿನ ಅಭಿವೃದ್ಧಿಗೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಹಣ ನೀಡಿದೆ. ಇದನ್ನು ಗಮನಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಕೆ.ಟಿ.ಚಲುವೇಗೌಡ, ಪಿ.ಮಂಜುನಾಥ್, ರಾಮು, ಬೋರೇಗೌಡ, ಮುದ್ದುರಾಜ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.27-ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘವು 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.90 ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳಿಂದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮುಂದಿನ ತಿಂಗಳು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲಾಗುವುದು. ಆಸಕ್ತರು ಜು.31ರೊಳಗೆ ತಮ್ಮ ಅಂಕಪಟ್ಟಿ ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ, ಇತ್ತೀಚಿನ ಎರಡು ಭಾವಚಿತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9886818178 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಜು.27(ಎಂಕೆ)- ಮೈಸೂರಿನ ಕೆ.ಆರ್.ಮೊಹಲ್ಲಾದಲ್ಲಿರುವ ಬ್ರಾಹ್ಮಣ ಸಹಾಯ ಸಭಾ ಕಲ್ಯಾಣ ಭವನದಲ್ಲಿ ಜು.28ರಂದು ಬೆಳಗ್ಗೆ 11 ಗಂಟೆಗೆ ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.ನ 15ನೇ ವಾರ್ಷಿಕ ಮಹಾಸಭೆಯು ಸೊಸೈಟಿ ಅಧ್ಯಕ್ಷ ಬಿ.ಎಸ್.ಶ್ರೀನಾಥ್ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಮೈಸೂರು ಮಿತ್ರ ಭಾನುವಾರ 28 ಜುಲೈ 2024

ಕಾವೇರಿ, ಹೇಮಾವತಿ ನದಿ ವ್ಯಾಪ್ತಿಯಲ್ಲಿ ಪ್ರವಾಹ ಭೀತಿ

ವೆಲ್ಲೆಸ್ಲಿ ಸೇತುವೆ, ತಡೆಗೋಡೆ ಕುಸಿದ ಮಂದಗೆರೆಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಭೇಟಿ, ಪರಿಶೀಲನೆ



ಕಾವೇರಿ ನದಿ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸುತ್ತಿರುವ ಸಚಿವ ಕೃಷ್ಣ ಭೈರೇಗೌಡ



ಕೆ.ಆರ್.ಪೇಟೆ ತಾಲೂಕು ಕಿಕ್ಕೇರಿ ಸಮೀಪದ ಮಂದಗೆರೆಯಲ್ಲಿ ರಕ್ಷಣಾ ಗೋಡೆ ಕುಸಿತಗೊಂಡಿರುವುದು.



ತಡೆಗೋಡೆ ಕುಸಿದ ಮಂದಗೆರೆಗೆ ಸಚಿವರ ಭೇಟಿ.

ಮಂಡ್ಯ,ಜು.27(ಮೋಹನ್‌ರಾಜ್)– ಭಾರೀ ಮಳೆಯ ಪರಿಣಾಮ ಕಾವೇರಿ ಹಾಗೂ ಹೇಮಾವತಿ ನದಿಗಳು ಉಕ್ಕಿ ಹರಿಯುತ್ತಿರುವುದರಿಂದ ಈ ಎರಡು ನದಿ ನೀರು ಹರಿಯುವ ವ್ಯಾಪ್ತಿಯ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಹಾಗೂ ಕೆಆರ್.ಪೇಟೆಯ ಮಂದಗೆರೆಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಭೇಟಿ ನೀಡಿ ಶನಿವಾರ ಪರಿಶೀಲನೆ ನಡೆಸಿದರು.

ಶ್ರೀರಂಗಪಟ್ಟಣ ವೆಲ್ಲೆಸ್ಲಿ ಸೇತುವೆ ಬಳಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 25 ಜಿಲ್ಲೆಗಳಲ್ಲಿ ಈ ಬಾರಿ ವಾಡಿಕೆಗಿಂತ ಶೇಕಡಾ 28 ರಷ್ಟು ಹೆಚ್ಚು ಮಳೆಯಾಗಿದ್ದು, ಬೆಂಗಳೂರು ಗ್ರಾಮಾಂತರ, ಕೋಲಾರ. ಚಿಕ್ಕಬಳ್ಳಾಪುರ ಸೇರಿದಂತೆ 5 ಜಿಲ್ಲೆಗಳಲ್ಲಿ ಕಡಿಮೆ ಮಳೆಯಾಗಿದೆ. ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಕೆಆರ್‌ಎಸ್ ಜಲಾಶಯದಿಂದ ಒಟ್ಟು 1 ಲಕ್ಷಕ್ಕೂ ಹೆಚ್ಚು ನೀರನ್ನು ಹೊರಬಿಡಲಾಗುತ್ತಿದ್ದು, 1 ಲಕ್ಷ 60 ಸಾವಿರ ಕ್ಯೂಸೆಕ್ ನೀರು ತಮಿಳುನಾಡಿಗೆ ಹರಿಬಿಡಲಾಗುತ್ತಿದೆ ಎಂದರು. ಕೃಷ್ಣ ನದಿಯಲ್ಲೂ ಕೂಡ 2.5 ಲಕ್ಷ ಕ್ಯೂಸೆಕ್ ನೀರನ್ನು ಅಣೆಕಟ್ಟೆಯಿಂದ ನದಿಗೆ ಬಿಡಲಾಗುತ್ತಿದೆ. ಪ್ರವಾಹದ ಮಟ್ಟಕ್ಕಿಂತ ನೀರಿನ ಹರಿವಿನ ಪ್ರಮಾಣ ಕಡಿಮೆ ಇದೆ. ಮಳೆ ಬಿಡುವು ಕೊಟ್ಟಿರುವುದರಿಂದ ಪ್ರವಾಹ ಪರಿಸ್ಥಿತಿ ಸುಧಾರಿಸುವ ಹಂತದಲ್ಲಿದೆ. ಹೇಮಾವತಿ ಹಾಗೂ ಕಾವೇರಿ ನದಿ ಪಾತ್ರದಲ್ಲಿರುವ ಹಾಸನ, ಕೆ.ಆರ್.ಪೇಟೆ, ಟಿ.ನರಸೀಪುರ, ಶ್ರೀರಂಗಪಟ್ಟಣ ತಾಲೂಕುಗಳ ತಗ್ಗು ಪ್ರದೇಶದಲ್ಲಿರುವ ಗ್ರಾಮಗಳಿಗೆ ಭೇಟಿ ನೀಡಿ ಜಿಲ್ಲಾಡಳಿತವನ್ನು ಚುರುಕು ಮೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದು ಹೇಳಿದರು.

ಕೆ.ಆರ್.ಪೇಟೆಯ ಮಂದಗೆರೆಗೆ ಭೇಟಿ ನೀಡಿ ಈ ಪ್ರದೇಶದಲ್ಲಿ ತಡೆಗೋಡೆ ಒಡೆದು ಮಣ್ಣು ಕೊರಕಲು ಉಂಟಾಗುತ್ತಿದೆ. ಈ ಭಾಗದಲ್ಲಿ ಕೇವಲ ಮಣ್ಣಿನ ಬ್ಯಾಗ್ ಬದಲು ಸೈಜು ಕಲ್ಲನ್ನು ಸಹ ಬಳಕೆ ಮಾಡಲು ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ.ಇದರಿಂದ ಮಣ್ಣು ಕುಸಿತದ ಪ್ರಮಾಣ ಕಡಿಮೆಯಾಗಲಿದೆ. ನೆರೆ ಪ್ರದೇಶದಲ್ಲಿರುವ ಜನರ ಸ್ಥಳಾಂತರವನ್ನು ಅವರ ಮನವೊಲಿಸಿ ಮಾಡಬೇಕು. ಅವರು ವಾಸಿಸುವ ಸ್ಥಳ ಅವರಿಗೆ ಭಾವನಾತ್ಮಕ ಸೆಳೆತ ಹಾಗೂ ವ್ಯವಸಾಯಕ್ಕೆ ಹತ್ತಿರ ಸ್ಥಳವಾಗಿರುತ್ತದೆ ಎಂದರು.

ನೆರೆಯಿಂದ ಕೃಷಿ ಹಾಗೂ ತೋಟಗಾರಿಕೆ ಬೆಳೆ ಸ್ವಲ್ಪ ಪ್ರಮಾಣದಲ್ಲಿ ಹಾನಿಯಾಗಿದ್ದು, ಒಂದು ವಾರದ ನಂತರ ನಿಖರ ಮಾಹಿತಿ ದೊರೆಯಲಿದೆ. ನದಿಯ ಬದಿಗಳಲ್ಲಿ ಹಾಗೂ ಜಲಾಶಯದ ಹಿನ್ನೀರು ಬದಿಯಲ್ಲಿ ನೆರೆ ಇಲ್ಲದ ಸಂದರ್ಭದಲ್ಲಿ ರೈತರು ಬೆಳೆಯನ್ನು ಬೆಳೆಯುವುದು ಹಾಗೂ ನೆರೆ ಬಂದ ಸಂದರ್ಭದಲ್ಲಿ ಹಿಂದಕ್ಕೆ ಸರಿಯುವುದು ವಾಡಿಕೆಯಾಗಿದೆ. ಇದು ಕಾನೂನಾತ್ಮಕವಾಗಿ ತಪ್ಪು ನೆರೆ ಬಂದ ಸಂದರ್ಭದಲ್ಲಿ ಪ್ರಾಣ ಹಾನಿಯಾಗಬಹುದು ಹಾಗೂ ಇಲ್ಲಿ ಬೆಳೆಯುವ ಬೆಳೆಗಳಿಗೆ ಬೆಳೆ ಹಾನಿ ಪರಿಹಾರ ಒದಗಿಸುವುದು ಸಾಧ್ಯವಿಲ್ಲ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಗೂ ಸಹ 20 ಕೋಟಿ ಹಣ ನೀಡಲಾಗಿದೆ. ಎಲ್ಲಾ ತಾಲೂಕುಗಳಿಗೆ ತಲಾ 25 ಲಕ್ಷ ರೂ ನೀಡಲಾಗಿದೆ ಎಂದರು. ಸಣ್ಣಪುಟ್ಟ ತೊಂದರೆಯಾದಾಗ ರಾಜ್ಯ ಸರ್ಕಾರ ನಿಭಾಯಿಸುತ್ತದೆ. ರಾಜ್ಯದಲ್ಲಿ ದೊಡ್ಡ ಮಟ್ಟದಲ್ಲಿ ಹಾನಿ ಆದಾಗ ಮಾತ್ರ ಎನ್‌ಡಿ ಆರ್‌ಎಫ್ ತಂಡಕ್ಕೆ ಆಹ್ವಾನ ನೀಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಉಪವಿಭಾಗಾಧಿಕಾರಿ ನಂದೀಶ್, ತಹಸೀಲ್ದಾರ್ ನಿಸರ್ಗಪ್ರಿಯಾ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ರಕ್ಷಣಾ ಗೋಡೆ ಕುಸಿತ, ಅಧಿಕಾರಿಗಳಿಗೆ ತರಾಟೆ

ಕೆ.ಆರ್.ಪೇಟೆ: ತಾಲೂಕಿನ ಕಿಕ್ಕೇರಿ ಸಮೀಪದ ಮಂದಗೆರೆಯಲ್ಲಿ ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಎಡದಂಡೆ ನಾಲೆಯ ರಕ್ಷಣಾ ಗೋಡೆ ಕುಸಿದು ಅಪಾರ ಪ್ರಮಾಣದ ನೀರು ಹರಿಯುತ್ತಿದ್ದು, ಕಂದಾಯ ಸಚಿವ ಕೃಷ್ಣ ಭೈರೇಗೌಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಮಾತನಾಡಿದ ಸಚಿವರು ಕಾಲಕಾಲಕ್ಕೆ ಅಧಿಕಾರಿಗಳು ಕೆರೆ, ಕಟ್ಟೆ, ನಾಲೆಗಳ ದುರಸ್ಥಿಗೆ ಗಮನ ಹರಿಸಿದ್ದರೆ ಇಂತಹ ಪ್ರಮಾದಗಳು ಸಂಭವಿಸುತ್ತಿರಲಿಲ್ಲ. ಇಷ್ಟೊಂದು ದೊಡ್ಡದಾಗಿ ನಾಲೆ ಗೋಡೆ ಕುಸಿದಿದೆ ಎಂದರೆ ಏನರ್ಥ. ಸಣ್ಣದಾಗಿ ಬಿರುಕು ಕಂಡಾಗಲೇ ದುರಸ್ತಿಗೆ ಮುಂದಾಗಬೇಕಿತ್ತು ಅಣೆಕಟ್ಟೆಗೆ ಸಮಸ್ಯೆಯಾದರೆ ಏನು ಗತಿ. ಮೊದಲು ರಕ್ಷಣಾಗೋಡೆ ದುರಸ್ತಿ ಮಾಡಿಸಿ ಎಂದು ತರಾಟೆಗೆ ತೆಗೆದುಕೊಂಡರು.


ಕಳೆದ ವರ್ಷ ಬರಗಾಲದಿಂದ ರೈತರು ಬೆಳೆ ಇಲ್ಲದೆ ಪರಿತಪಿಸಿದ್ದಾರೆ. ನದಿಯಲ್ಲಿ ನೀರು ಇಲ್ಲದಿರುವಾಗ ಇದನ್ನು ದುರಸ್ತಿ ಮಾಡಿದ್ದರೆ ಈ ಸಮಸ್ಯೆ ಉಲ್ಬಣಿಸುತ್ತಿರಲಿಲ್ಲ. ಯಾವುದೇ ಸಮಸ್ಯೆಯಾಗದಂತೆ ಮೊದಲು ಅಣೆಕಟ್ಟು ನಾಲೆ ರಕ್ಷಣೆಗೆ ಮುಂದಾಗಬೇಕು. ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಅಣೆಕಟ್ಟೆಗಳು ತುಂಬಿ ಹರಿಯುತ್ತಿವೆ. ಅಣೆಕಟ್ಟಿನ ಎರಡು ಕಡೆ ಎಡ ಹಾಗೂ ಬಲದಂಡೆ ನಾಲೆಗಳಿವೆ. ಈ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿ ಸಾವಿರಾರು ಎಕರೆಯಲ್ಲಿ ರೈತರ ಕೃಷಿ ಭೂಮಿ ಇದೆ. ಮೊದಲು ನಾಲೆ, ರಕ್ಷಣಾಗೋಡೆ ದುರಸ್ತಿಗೆ ಅವಶ್ಯವಿರುವ ಭದ್ರತಾ ಕಾಮಗಾರಿ ಮಾಡಿ. ರೈತರಿಗೆ ತೊಂದರೆಯಾಗದಂತೆ ನಾಲೆಯಲ್ಲಿ ನೀರು ಹರಿಸಿ ಎಂದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ತಾಲೂಕಿನ ಜೀವನಾಡಿ ಹೇಮಾವತಿ. ಮೈಸೂರು ಮಹಾರಾಜರ ಕಾಲದಲ್ಲಿ ಬಂಡೆಯ ಮೇಲೆ ಅಣೆಕಟ್ಟು ನಿರ್ಮಿಸಲಾಗಿದೆ. ರಕ್ಷಣಾ ಗೋಡೆ ಬಿರುಕು ಬೇಜವಾಬ್ದಾರಿಯಿಂದ ಆಗಿದೆ. ಕಳೆದ ವರ್ಷ ನಾಲೆಯಲ್ಲಿ ನೀರಿಲ್ಲವಾಗಿತ್ತು. ಈ ಬಾರಿ ನಾಲೆಯಲ್ಲಿ ನೀರು ಹರಿಸಿ, ನಾಲೆ ಲೈನಿಂಗ್ ಅಲ್ಲಲ್ಲಿ ಕಿತ್ತು ಬಂದಿದೆ. ಅಧಿಕಾರಿಗಳಿಗೆ ಕಾಣುವುದು ಮಳೆಗಾಲದಲ್ಲಿ ಮಾತ್ರ ನಾಲೆಯನ್ನು ಬೇಸಿಗೆಯಲ್ಲಿ ದುರಸ್ತಿ ಮಾಡಿಸದೆ ಮೌನವಹಿಸಿದ್ದರು. ನಾಲೆಯ ಕೊನೆಯ ಭಾಗದ ರೈತರಿಗೆ ನೀರು ಸಿಗುವಂತಾಗಬೇಕು. ಎಡದಂಡೆ ನಾಲೆಯಲ್ಲಿ ಸುಮಾರು 6 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದೆ. ತ್ವರಿತವಾಗಿ ದುರಸ್ತಿಮಾಡಿಸುವಂತೆ ಸಚಿವರಲ್ಲಿ ಮನವಿ ಮಾಡಿದರು.

ಭಾರೀ ಪ್ರಮಾಣದಲ್ಲಿ ನೀರು ಪೋಲು: ಕಳೆದೆರಡು ವರ್ಷಗಳ ಹಿಂದೆಯೇ ಅಣೆಕಟ್ಟು ಹಾಗೂ ನಾಲೆಗೆ ಹೊಂದಿಕೊಂಡಿರುವ ರಕ್ಷಣಾ ಗೋಡೆ ಬಳಿ ಮಣ್ಣು ಕುಸಿದಿತ್ತು. ತಾತ್ಕಾಲಿಕವಾಗಿ ನೀರಾವರಿ ಇಲಾಖೆ ಅಧಿಕಾರಿ ಗಳು ಮಣ್ಣು ಮುಚ್ಚುವ ಶಾಸ್ತ್ರ ಮಾಡಿದ್ದರು. ಬೇಸಿಗೆಯಲ್ಲಿ ದುರಸ್ತಿ ಮಾಡಿಸಿದ್ದರೆ ಸುಮಾರು 12ಮೀ. ನಾಲೆಯ ರಕ್ಷಣಾ ಗೋಡೆ ಕಲ್ಲಿನ ಸಮೇತ ಕುಸಿಯುತ್ತಿರಲಿಲ್ಲ. ನಾಲೆಗೆ ಅಪಾಯವಾಗುವಂತಾಗಿ ಬಾರಿ ಪ್ರಮಾಣ ದಲ್ಲಿ ನೀರು ಪೋಲಾಗುವಂತಾಗಿದೆ ನೀರಾವರಿ ಇಲಾಖೆ ಅಧಿಕಾರಿಗಳ ಬೇಜಾ ವಾಬ್ದಾರಿಯೇ ಇದಕ್ಕೆ ಕಾರಣ, ಲಕ್ಷಾಂತರ ರೂ. ಸರ್ಕಾರದ ಹಣ ನಷ್ಟವಾಗುವಂತಾಗಿದೆ ಎಂದು ರೈತರು ಸಂಕಷ್ಟ ತೋಡಿಕೊಂಡರು.

ತಾತ್ಕಾಲಿಕವಾಗಿ ಮರಳು ಮೂಟೆ, ಕಲ್ಲುಗಳನ್ನು ಹಾಕಿ ಸುರಕ್ಷತೆಗೆ ಕ್ರಮವಹಿಸಲಾಗುವುದು. ನೀರಿನ ಒಳ ಹರಿವು ಕಡಿಮೆಯಾದಾಗ ತ್ವರಿತವಾಗಿ ದುರಸ್ತಿ ಮಾಡಿ, ರೈತರಿಗೆ ತೊಂದರೆಯಾಗದಂತೆ ನೀರು ಕೊಡುವುದಾಗಿ ನೀರಾವರಿ ಇಲಾಖೆ ಅಧಿಕಾರಿಗಳು ಸಚಿವರಲ್ಲಿ ತಿಳಿಸಿದರು.

ಮೀಸೆ ಪುಟ್ಟೇಗೌಡರು ನಿಧನ



ಶ್ರೀರಂಗಪಟ್ಟಣ, ಜು.27–ತಾಲೂಕಿನ ಹುಲಿಕೆರೆ ಗ್ರಾಪಂ ಸದಸ್ಯ ಬಂಗಾರಪ್ಪನವರ ತಂದೆ ಮೀಸೆ ಪುಟ್ಟೇಗೌಡರು ಶನಿವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಮೃತರು ಪತ್ನಿ ಹಾಗೂ ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಹೊಂಗಹಳ್ಳಿಯಲ್ಲಿ ಭಾನುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ

ಸಮ್ಮೇಳನದ ಯಶಸ್ಸಿಗೆ ಸೌಹಾರ್ದತೆ, ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ

ಮಂಡ್ಯ,ಜು.27– ಸರ್ಕಾರ, ಜಿಲ್ಲಾಡಳಿತ, ಕೇಂದ್ರ ಮತ್ತು ಜಿಲ್ಲಾ ಸಾಹಿತ್ಯ ಪರಿಷತ್ತು ಪರಸ್ಪರ ಸಹಾಯ, ಸಹಕಾರ, ಸಹಭಾಗಿತ್ವ, ಸೌಹಾರ್ದತೆ, ಸಮನ್ವಯತೆಯಿಂದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸುವ ಜವಾಬ್ದಾರಿಯಿದೆ. ಈ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ ನೀಡಿದರು.

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಿದ್ಧತೆ ಕುರಿತು ನಗರದ ಹರಿಪ್ರಿಯ ಹೋಟೆಲ್‌ನ ಚಾಣಕ್ಯ ಸಭಾಂಗಣದಲ್ಲಿ ಸಾಹಿತ್ಯ ಪರಿಷತ್ತಿನ ಹೋಬಳಿ, ತಾಲೂಕು ಮತ್ತು ಜಿಲ್ಲಾ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಬಳಿ ಮತ್ತು ತಾಲೂಕು ಘಟಕದ ಪದಾಧಿಕಾರಿಗಳು ಅಡಿಪಾಯವಿದ್ದಂತೆ. ನಿಮ್ಮ ಶ್ರಮ ಸಮ್ಮೇಳನ ಯಶಸ್ಸಿಗೆ ಕಾರಣವಾಗುತ್ತದೆ. ನೀವು ಕನ್ನಡ ಸೇವೆಗೋಸ್ಕರ ಬಂದಿರುವವರು, ತಾಯಿ ಭುವನೇಶ್ವರಿಯ ಸೇವೆಗೆ, ಕನ್ನಡದ ಮೇಲಿನ ಅಭಿಮಾನದಿಂದ ಬಂದಿದ್ದೀರಿ. ನಿಮಗೆ ಕರ್ತವ್ಯ ಭಾರದ ಹಾರ ಹಾಕಿದ್ದೇವೆ. ಅದು ಗೌರವ ಮನ್ನಣೆಯ ಸಂಕೇತ. ಗೌರವದ ಹಿಂದೆ ಜವಾಬ್ದಾರಿಯೂ ಇದೆ ಎಂಬ ಮನೋಭಾವದಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಯಾವುದೇ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಸಂವಿಧಾನದ ಅಡಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಅದರಂತೆ ಕನ್ನಡ ಸಾಹಿತ್ಯ ಪರಿಷತ್ತಿಗೂ ಒಂದು ನೀತಿ, ನಿಯಮ, ಸಂವಿಧಾನ ಇದೆ. ಅದರಂತೆ ಪದಾಧಿಕಾರಿಗಳ ನೇಮಕವಾಗುತ್ತಿದೆ. ಈಗ ತಿದ್ದುಪಡಿಯೊಂದಿಗೆ ಹಲವು ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಅದರಂತೆ ನೇಮಕವಾದ ನೀವು ಶ್ರದ್ಧೆಯಿಂದ ಕೆಲಸ ನಿರ್ವಹಿಸಿ. ಕನ್ನಡ ಸಾಹಿತ್ಯ ಪರಿಷತ್ತು ಒಂದು ಸ್ವಾಯತ್ತ ಸಂಸ್ಥೆಯಾದರೂ ಸಹ ಸರ್ಕಾರದ ಬೆಂಬಲಬೇಕು ಎಂದು ಹೇಳಿದರು.

ಸಮ್ಮೇಳನಕ್ಕೆ ಬರುವ ಲಕ್ಷಾಂತರ ಜನರಿಗೆ ರಕ್ಷಣೆ, ಆರೋಗ್ಯ, ಊಟ–ವಸತಿ, ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಬೇಕು. ಸಾಹಿತ್ಯ ಪರಿಷತ್ತು ಒಂದೇ ಏಕಾಂಗಿಯಾಗಿ ಮಾಡಲು ಸಾಧ್ಯವಿಲ್ಲ ಎಂದರು.

ಶೂಟಿಂಗ್; ಫೈನಲ್‌ಗೆ ಮನು ಭಾಕರ್



ಪ್ಯಾರಿಸ್: ಭಾರತದ ಸ್ಟಾರ್ ಶೂಟರ್ ಮನು ಭಾಕರ್ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಶೂಟಿಂಗ್ ವಿಭಾಗದಲ್ಲಿ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.

ಶನಿವಾರ ನಡೆದ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಮನು ಭಾಕರ್ ಅವರು 27 ಬಾರಿ ಇನ್ನರ್ ಟೆನ್‌ಗೆ ಶೂಟ್ ಮಾಡಿದ್ದರು. ನಂತರ ಅದೇ ಸ್ಥಿರ ಪ್ರದರ್ಶನ ಉಳಿಸಿಕೊಂಡಿದ್ದರು. ಮೊದಲ ಸೀರಿಸ್‌ನ 10 ಶಾಟ್ಸ್‌ನಲ್ಲಿ 100ಕ್ಕೆ 97 ಅಂಕ ಕಲೆ ಹಾಕಿದ್ದರು. ಇದನ್ನು ಪೂರ್ಣಗೊಳಿಸಲು ಅವರು 10 ಶಾಟ್ಸ್‌ನಲ್ಲಿ 7 ಇನ್ನರ್ ಶಾಟ್ ಆಗಿದ್ದವು. ಅವರು ಎರಡನೇ ಸೀರಿಸ್‌ನಲ್ಲಿ ಇದೇ ಲಯ ಮುಂದುವರಿಸಿದ್ದರು. ಈ ಸೀರಿಸ್‌ನಲ್ಲಿ ಅವರು 97 ಅಂಕಗಳನ್ನು ಕಲೆ ಹಾಕಿದರು. ಅರ್ಹತಾ ಸ್ಪರ್ಧೆ ಮೊದಲಾರ್ಧದಲ್ಲಿ ಮನು ಭಾಕರ್ 300ಕ್ಕೆ 292 ಅಂಕಗಳನ್ನು ಸೇರಿಸಿದ್ದರು. ಆ ಮೂಲಕ ಫೈನಲ್‌ಗೆ ಬಹುತೇಕ ಅರ್ಹತೆ ಗಿಟ್ಟಿಸಿದರು.

ಟೇಬಲ್ ಟೆನಿಸ್‌ನಲ್ಲಿ ಹರ್ಮೀತ್ ದೇಸಾಯಿಗೆ ಗೆಲುವು



ಪ್ಯಾರಿಸ್: ಭಾರತದ ಪ್ಯಾಡ್ಲರ್ ಹರ್ಮೀತ್ ದೇಸಾಯಿ ಪ್ಯಾರಿಸ್ ಒಲಿಂಪಿಕ್ಸ್ ಟೇಬಲ್ ಟೆನಿಸ್ ಸಿಂಗಲ್ಸ್ ಸ್ಪರ್ಧೆಯಲ್ಲಿ ಶನಿವಾರ ಮೊದಲ ಗೆಲುವು ಸಾಧಿಸಿದ್ದಾರೆ.

ಮೊದಲ ಪಂದ್ಯದಲ್ಲಿ ಜೋರ್ಡಾನ್‌ನ ಅಬೋ ಯಮನ್ ಝ್ಯೆದ್ ವಿರುದ್ಧ 4–0 ಅಂತರದಲ್ಲಿ ಆರಾಮದಾಯಕ ಜಯಸಾಧಿಸಿದರು. ಝ್ಯೆದ್ ವಿರುದ್ಧ 11–7, 11–9, 11–5, ಮತ್ತು 11–5 ಅಂಕಗಳನ್ನು ದಾಖಲಿಸುವ ಮೂಲಕ ತಮ್ಮ ಎದುರಾಳಿಯನ್ನು ಸೋಲಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳಲಿಲ್ಲ. 30 ನಿಮಿಷಗಳ ಕಾಲ ನಡೆದ ಏಕಪಕ್ಷೀಯ ಮೊದಲ ಸುತ್ತಿನ ಪಂದ್ಯದಲ್ಲಿ ವಿಶ್ವದ 538ನೇ ಶ್ರೇಯಾಂಕಿತ ಎದುರಾಳಿಯನ್ನು ದೇಸಾಯಿ ಯಾವುದೇ ಆಯಾಸವಿಲ್ಲದೇ ಸೋಲಿಸಿದರು.

ಪ್ಯಾರಿಸ್ ಒಲಿಂಪಿಕ್‌ಗೆ ವರ್ಣರಂಜಿತ ಚಾಲನೆ

ಪಥ ಸಂಚಲನದಲ್ಲಿ ಭಾರತವನ್ನು ಮುನ್ನಡೆಸಿದ ಪಿ.ವಿ.ಸಿಂಧು

ಪ್ಯಾರಿಸ್, ಜು.27– ಮಳೆ ನಡುವೆಯೂ ಫ್ರಾನ್ಸ್ ರಾಜಧಾನಿ ಪ್ಯಾರೀಸ್‌ನಲ್ಲಿ ಬಹುನಿರೀಕ್ಷಿತ 33ನೇ ಒಲಿಂಪಿಕ್ ಕ್ರೀಡಾಕೂಟಕ್ಕೆ ಭಾರತೀಯ ಕಾಲಮಾನ ಶುಕ್ರವಾರ ರಾತ್ರಿ 11 ಗಂಟೆಗೆ ವರ್ಣರಂಜಿತ ಚಾಲನೆ ದೊರೆಯಿತು.

ಸೀನ್ ನದಿಯಲ್ಲಿ ಮೇಲೆ ನಡೆದ ಉದ್ಘಾಟನಾ ಸಮಾರಂಭ ಆಸ್ಟರ್‌ಲಿಟ್ಜ್ ಬ್ರಿಡ್ಜ್‌ನ ಬಳಿ ಫ್ರಾನ್ಸ್ ರಾಷ್ಟ್ರಧ್ವಜದಲ್ಲಿರುವ ನೀಲಿ, ಬಿಳಿ ಹಾಗೂ ಕೆಂಪು ಬಣ್ಣಗಳ ಬೃಹತ್ ವಾಟರ್ ಸ್ಪ್ಲ್ಯಾಶ್‌ನೊಂದಿಗೆ ಆರಂಭವಾಯಿತು. ಫ್ರೆಂಚ್ ಫುಟ್ಬಾಲ್ ದಂತಕಥೆ ಜಿನೆಡಿನ್ ಜಿಡಾನೆ ಅವರು ಒಲಿಂಪಿಕ್ ಜ್ವಾಲೆಯೊಂದಿಗೆ ಪ್ಯಾರಿಸ್ ಬೀದಿಗಳಲ್ಲಿ ಸ್ಪ್ರಿಂಟ್ ಮಾಡುತ್ತಾ ಸಾಗುವಾಗ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಮುಖ್ಯಸ್ಥ ಥಾಮಸ್ ಬಾಚ್ ಕಣ್ತುಂಬಿಕೊಂಡರು.

6 ಕಿಲೋಮೀಟರ್ ದೂರದ ಪರೇಡ್ ಆಸ್ಟರ್ಲಿಟ್ಜ್ ಸೇತುವೆಯಿಂದ ಪ್ರಾರಂಭವಾಯಿತು. 85 ದೋಣಿಗಳು 205 ರಾಷ್ಟ್ರಗಳ 6,800ಕ್ಕೂ ಹೆಚ್ಚು ಕ್ರೀಡಾಪಟುಗಳು ಮತ್ತು ಒಂದು ನಿರಾಶ್ರಿತರ ಒಲಿಂಪಿಕ್ ತಂಡವನ್ನು ಹೊತ್ತೊಯ್ದವು. ಉದ್ಘಾಟನಾ ಸಮಾರಂಭದ ಆರಂಭದಿಂದಲೇ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿರುವ ರಾಷ್ಟ್ರಗಳ ಪಥ ಸಂಚಲನ ಶುರುವಾಯಿತು. ಮೊದಲಿಗೆ ಗ್ರೀಸ್ ತಂಡ ಆಗಮಿಸಿತು. ಬಳಿಕ ಫ್ರೆಂಚ್ ಅಕ್ಷರ ಮಾಲೆಯ ಪ್ರಕಾರ ತಂಡಗಳು ಬಂದವು.



ಪಥ ಸಂಚಲನದಲ್ಲಿ ಭಾಗವಹಿಸಿದ್ದ ಭಾರತದ ಕ್ರೀಡಾಪಟುಗಳು.

ಕೆಲ ತಂಡಗಳಿಗೆ ಪ್ರತ್ಯೇಕ ಬೋಟ್ ಸಿಕ್ಕರೆ, 3–4 ತಂಡಗಳನ್ನು ಒಟ್ಟಿಗೆ ಸೇರಿಸಿ ಒಂದು ದೊಡ್ಡ ದೋಣಿಯಲ್ಲಿ ಕರೆ ತರಲಾಯಿತು. ಭಾರತ 14ನೇ ತಂಡವಾಗಿ ಉದ್ಘಾಟನಾ ಸಮಾರಂಭದಲ್ಲಿ ಕಾಣಿಸಿಕೊಂಡಿತು. ಭಾರತ, ಇಂಡೋನೇಷ್ಯಾ ಹಾಗೂ ಇರಾನ್ ತಂಡಗಳು ಒಂದೇ ಬೋಟ್‌ನಲ್ಲಿ ಒಟ್ಟಿಗೆ ಆಗಮಿಸಿದವು. ಆತಿಥ್ಯ ರಾಷ್ಟ್ರ ಫ್ರಾನ್ಸ್ ಕೊನೆಯ ತಂಡವಾಗಿ ಬಂದರೆ, 2028ರ ಒಲಿಂಪಿಕ್ಸ್‌ಗೆ ಆತಿಥ್ಯ ನೀಡಲಿರುವ ಅಮೆರಿಕ ಕೊನೆಯಿಂದ 2ನೇ ತಂಡವಾಗಿ ಕಾಣಿಸಿಕೊಂಡಿತು. ಎಲ್ಲಾ ತಂಡಗಳಿಗೂ ವಾಟರ್ ಸಲ್ಯೂಟ್ ನೀಡಲಾಯಿತು. ಅಂತಿಮವಾಗಿ ಪಥಸಂಚಲನ ಐಫಲ್ ಟವರ್ ಬಳಿ ಮುಕ್ತಾಯಗೊಂಡಿತು.

ಉದ್ಘಾಟನಾ ಸಮಾರಂಭದ ಪಥಸಂಚಲನದಲ್ಲಿ ಭಾರತದ ಒಟ್ಟು 78 ಮಂದಿ ಕ್ರೀಡಾಪಟುಗಳು ಭಾಗಿಯಾಗಿದ್ದರು. 2 ಒಲಿಂಪಿಕ್ಸ್ ಪದಕ ಗೆದ್ದ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಮತ್ತು ಟೇಬಲ್ ಟೆನಿಸ್ ಪಟು ಶರತ್ ಕಮಾಲ್ ಅವರು ಭಾರತದ ಧ್ವಜಧಾರಿಗಳಾಗಿ ಪಥ ಸಂಚಲನವನ್ನು ಮುನ್ನಡೆಸಿದರು.

ಕಾರ್ಯಕ್ರಮದಲ್ಲಿ ಫ್ರಾನ್ಸ್‌ನಲ್ಲಿ ನಡೆದ ಕ್ರಾಂತಿಕಾರಿ ಬೆಳವಣಿಗೆಗಳು, ಮಿಲಿಟರಿ ಕ್ಷೇತ್ರದಲ್ಲಿ ಸಾಧನೆ ತೋರಿಸಲಾಯಿತು. ಫ್ರೆಂಚ್ ಸಿನಿಮಾದ 10 ದಿಗ್ಗಜ ನಾಯಕಿಯರ ಪ್ರತಿಮೆಗಳನ್ನು ಪ್ರದರ್ಶಿಸಿ ಗೌರವಿಸಲಾಯಿತು. ಪ್ಯಾರಿಸ್ 'ಫ್ಯಾಷನ್ ನಗರಿ' ಎಂದೇ ಕರೆಸಿಕೊಳ್ಳುವ ಕಾರಣ, ಫ್ಯಾಷನ್ ಶೋ ಸಹ ಆಯೋಜಿಸಲಾಗಿತ್ತು.

ಪ್ರಧಾನಿ ಮೋದಿ ಶುಭಾಶಯ



ಪ್ರಧಾನಿ ನರೇಂದ್ರ ಮೋದಿ ಅವರು, ಪ್ಯಾರಿಸ್ ಒಲಿಂಪಿಕ್ ಆರಂಭವಾಗಿದೆ. ಭಾರತೀಯ ತಂಡಕ್ಕೆ ನನ್ನ ಶುಭಾಶಯಗಳು. ಪ್ರತಿಯೊಬ್ಬ ಕ್ರೀಡಾಪಟು ಭಾರತದ ಹೆಮ್ಮೆ. ಅವರೆಲ್ಲರೂ ಮಿಂಚಲಿ ಮತ್ತು ನಿಜವಾದ ಕ್ರೀಡಾ ಮನೋಭಾವವನ್ನು ಅಳವಡಿಸಿಕೊಳ್ಳಲಿ. ಅವರ ಅಸಾಮಾನ್ಯ ಪ್ರದರ್ಶನಗಳಿಂದ ನಮಗೆ ಸ್ಫೂರ್ತಿ ನೀಡಲಿ ಎಂದು ಎಕ್ಸ್‌ನಲ್ಲಿ ಹೇಳಿದರು.

ಮೊದಲ ಟಿ20: ಲಂಕಾ ವಿರುದ್ಧ ಭಾರತಕ್ಕೆ ಭರ್ಜರಿ ಜಯ




ಕೊಲಂಬೊ, ಜು.27– ಸೂರ್ಯಕುಮಾರ್ ಯಾದವ್ ಅವರ ಅರ್ಧ ಶತಕದ ನೆರವಿನಿಂದ ಭಾರತ, ಶ್ರೀಲಂಕಾ ವಿರುದ್ಧ ಮೊದಲ ಟಿ20 ಪಂದ್ಯದಲ್ಲಿ 43 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ ಮೂರು ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದ ಮುನ್ನಡೆ ಕಾಯ್ದುಕೊಂಡಿದೆ.

ಇಲ್ಲಿನ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ನೀಡಿದ 214 ರನ್‌ಗಳ ಕಠಿಣ ಗುರಿ ಹಿಂಬಾಲಿಸಿದ ಶ್ರೀಲಂಕಾ, ಕುಸಾಲ್ ಮೆಂಡಿಸ್ ಹಾಗೂ ಪಥುಮ್ ನಿಸಾಂಕ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ 19.2 ಓವರ್‌ಗಳಿಗೆ 170 ರನ್‌ಗಳಿಗೆ ಆಲೌಟ್ ಆಯಿತು. ಆ ಮೂಲಕ ಸೋಲು ಅನುಭವಿಸಿತು. ಶ್ರೀಲಂಕಾ ಪರ ಪಥುಮ್ ನಿಸಾಂಕ 79, ಕುಸಾಲ್ ಮೆಂಡಿಸ್ 45, ಕುಸಾಲ್ ಪೆರೇರಾ 20, ಕಾಮಿಂದು ಮೆಂಡೀಸ್ 12ರನ್ ಗಳಿಸಿದರು. ಭಾರತದ ಪರ ರಿಯಾನ್ ಪರಾಗ್ 3, ಅರ್ಶದೀಪ್ ಸಿಂಗ್, ಅಕ್ಷರ್ ಪಟೇಲ್ ತಲಾ 2 ಮೊಹಮ್ಮದ್ ಸಿರಾಜ್, ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 213 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಪಂದ್ಯದಲ್ಲಿ ಅಬ್ಬರಿಸಿದ ಸೂರ್ಯ ಕುಮಾರ್ ಯಾದವ್ 58 ರನ್ ಗಳಿಸಿದರೇ, ಯಶಸ್ವಿ ಜೈಸ್ವಾಲ್ 40, ಶುಭ್‌ಮನ್‌ಗಿಲ್ 34, ರಿಷಬ್ ಪಂತ್ 49 ರನ್ ಗಳಿಸಿದರು. ಶ್ರೀಲಂಕಾ ಪರ ಮತೀಶ ಪತಿರಾನ 4, ವಾನಿಂದು ಹಸರಂಗ, ದಿಲ್ಷನ್ ಮಧುಶಂಕ, ಅಸಿತ ಫರ್ನಾಂಡೋ ತಲಾ ಒಂದೊಂದು ವಿಕೆಟ್ ಪಡೆದರು. ಸೂರ್ಯ ಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಬ್ಯಾಡ್ಮಿಂಟನ್ ಸಿಂಗಲ್ಸ್, ಡಬಲ್ಸ್‌ನಲ್ಲಿ ಭಾರತಕ್ಕೆ ಗೆಲುವು



ಲಕ್ಷ್ಯ ಸೇನ್



ಸಾತ್ವಿಕ್ ಹಾಗೂ ಚಿರಾಗ್

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯಸೇನ್, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಗೆಲುವು ಸಾಧಿಸಿದ್ದಾರೆ.

ಲಕ್ಷ್ಯಸೇನ್ ಅವರು ಗ್ವಾಟೆಮಾಲಾದ ಕೆವಿನ್ ಕಾರ್ಡನ್ ಅವರನ್ನು 21–8 ಮತ್ತು 22–20 ಅಂತರದಿಂದ ಸೋಲಿಸಿದರೆ, ಸ್ಟಾರ್ ಜೋಡಿ ಸಾತ್ವಿಕ್ ಮತ್ತು ಚಿರಾಗ್ ಫ್ರೆಂಚ್ ಜೋಡಿ ಕಾರ್ವಿ ಮತ್ತು ಲಾಬರ್ ಅವರನ್ನು 21–17 ಮತ್ತು 21–14 ಅಂತರದಿಂದ ಸೋಲಿಸಿದರು.

46 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಭಾರತ ಫ್ರಾನ್ಸ್‌ಗೆ ಕಠಿಣ ಪೈಪೋಟಿ ನೀಡಿತು. ಹಾಲಿ ಏಷ್ಯನ್ ಗೇಮ್ಸ್ ಚಾಂಪಿಯನ್‌ಗಳಾದ ಸಾತ್ವಿಕ್ – ಚಿರಾಗ್ ಆತಿಥೇಯರ ಗೆಲುವಿಗೆ ಬ್ರೇಕ್ ಹಾಕಿ ನಿರಾಸೆಗೊಳಿಸಿದರು.

ಇದಕ್ಕೂ ಮುನ್ನ ನಡೆದ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್‌ನ ಗುಂಪು ಹಂತದ ಪಂದ್ಯದಲ್ಲಿ ಭಾರತದ ಸ್ಟಾರ್ ಷಟ್ಲರ್ ಲಕ್ಷ್ಯ ಸೇನ್ ಅವರು ಗ್ವಾಟೆಮಾಲಾದ ಆಟಗಾರ ಕಾರ್ಡನ್ ಕೆವಿನ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿದರು. ಮೊದಲ ಸೆಟ್ ಅನ್ನು 21–8 ರಿಂದ ಸುಲಭವಾಗಿ ಗೆದ್ದುಕೊಂಡ ಸೇನ್ ಎರಡನೇ ಸೆಟ್?ನಲ್ಲಿ ಕಠಿಣ ಹೋರಾಟ ಎದುರಿಸಿದರು. ಆದರೂ ಎರಡನೇ ಸೆಟ್ ಅನ್ನು 22–20 ರಿಂದ ಗೆದ್ದು ಪಂದ್ಯವನ್ನು ಗೆದ್ದುಕೊಂಡರು.

ಪುರುಷರ ಹಾಕಿ: ಭಾರತ ಶುಭಾರಂಭ



ಪ್ಯಾರಿಸ್: ಭಾರತದ ಪುರುಷರ ಹಾಕಿ ತಂಡ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಅದ್ಭುತ ಗೆಲುವಿನೊಂದಿಗೆ ಶುಭಾರಂಭ ಮಾಡಿದೆ.

ಶನಿವಾರ ನಡೆದ ನ್ಯೂಜಿಲೆಂಡ್ ವಿರುದ್ಧ 'ಬಿ' ಗುಂಪಿನ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತ ತಂಡ 3–2 ಅಂತರದ ಭರ್ಜರಿ ಗೆಲುವು ದಾಖಲಿಸಿತು. ಭಾರತದ ಪರ ಮನದೀಪ್ ಸಿಂಗ್ (23ನೇ ನಿಮಿಷ) ಮತ್ತು ವಿವೇಕ್ ಸಾಗರ್ ಪ್ರಸಾದ್ (34ನೇ ನಿಮಿಷ) ಗೋಲು ಗಳಿಸಿದರು. ನ್ಯೂಜಿಲೆಂಡ್ ಪರ ಲೇನ್ ಸ್ಯಾಮ್ (8ನೇ ನಿಮಿಷ) ಮತ್ತು ಸೈಮನ್ ಚೈಲ್ಡ್ (53ನೇ ನಿಮಿಷ) ಗೋಲು ಬಾರಿಸಿದರು.

ಪಂದ್ಯದ ಆರಂಭದಿಂದಲೇ ಆಕ್ರಮಕಾರಿ ಆಟಕ್ಕಿಳಿದ ನ್ಯೂಜಿಲೆಂಡ್ ಪರ ಲೇನ್ ಸ್ಯಾಮ್ 8ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸುವ ಮೂಲಕ ಮೂಲಕ ತಂಡಕ್ಕೆ 1–0 ಮುನ್ನಡೆ ತಂದುಕೊಟ್ಟರು. ಮೊದಲಾರ್ಧದಲ್ಲಿ ಭಾರತಕ್ಕೆ ಹಲವು ಅವಕಾಶಗಳು ಸಿಕ್ಕರೂ ಗೋಲು ಗಳಿಸಲು ವಿಫಲವಾಯಿತು.

2ನೇ ಸುತ್ತಿನಲ್ಲಿ ಪುಟಿದೆದ್ದ ಭಾರತ ನ್ಯೂಜಿಲೆಂಡ್ ಮೇಲೆ ಒತ್ತಡ ಹೇರಲು ಪ್ರಾರಂಭಿಸಿತು. 23ನೇ ನಿಮಿಷದಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಸಿಕ್ಕಿತು. ಹರ್ಮನ್‌ಪ್ರೀತ್ ಸಿಂಗ್ ಹೊಡೆತವನ್ನು ನ್ಯೂಜಿಲೆಂಡ್ ಗೋಲ್‌ಕೀಪರ್ ತಡೆದರೂ, ಬಳಿಕ ಮಂದೀಪ್ ರೀಬೌಂಡ್‌ನಲ್ಲಿ ಗೋಲು ಗಳಿಸಿದರು. ವಿರಾಮದ ವೇಳೆಗೆ ಸ್ಕೋರ್ 1–1 ಅಂತರದಿಂದ ಸಮಬಲ ಸಾಧಿಸಿತು.

3ನೇ ಕ್ವಾರ್ಟರ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಮತ್ತೊಂದು ಗೋಲುಗಳಿಸುವ ಮೂಲಕ ಭಾರತ ಮುನ್ನಡೆ ಸಾಧಿಸಿತು. ಭಾರತದ ಪರ ವಿವೇಕ್ ಸಾಗರ್ ಪ್ರಸಾದ್ 34ನೇ ನಿಮಿಷದಲ್ಲಿ ಅದ್ಭುತ ಫೀಲ್ಡ್ ಗೋಲು ಬಾರಿಸಿ ಭಾರತವನ್ನು 2–1 ಅಂತರದಿಂದ ಮುನ್ನಡೆಸಿದರು. ಕ್ವಾರ್ಟರ್‌ನಲ್ಲಿ ನ್ಯೂಜಿಲೆಂಡ್ 2 ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದುಕೊಂಡಿತು. ಇದನ್ನು ಭಾರತದ ಅನುಭವಿ ಗೋಲ್ ಕೀಪರ್ ಪಿಆರ್ ಶ್ರೀಜೇಶ್ ಅದ್ಭುತವಾಗಿ ರಕ್ಷಿಸಿದರು.

ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಗೆದ್ದ ಭಾರತ: ಅಂತಿಮವಾಗಿ 58ನೇ ನಿಮಿಷದಲ್ಲಿ ಭಾರತದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಸಿಕ್ಕ ಪೆನಾಲ್ಟಿ ಸ್ಟ್ರೋಕ್‌ನ ಅವಕಾಶ ಸದುಪಯೋಗ ಪಡೆಸಿಕೊಂಡು ಗೋಲ್ ದಾಖಲಿಸುವ ಮೂಲಕ 3–2 ಅಂತರದಿಂದ ತಂಡವನ್ನು ಗೆಲುವಿನ ದಡ ಸೇರಿಸಿದರು.

ಮೈಸೂರು ಮಿತ್ರ ಭಾನುವಾರ 28 ಜುಲೈ 2024

ದೇಶ - ವಿದೇಶ

ಚಂದ್ರನ ಮಣ್ಣಿನಲ್ಲಿ ನೀರಿನ ಕಣ ಪತ್ತೆ ಹಚ್ಚಿದ ಚೀನಾ

ಬೀಜಿಂಗ್: ಚಂದ್ರನ ಕುರಿತಾದ ಸಂಶೋಧನೆಗಳು ಪ್ರತಿನಿತ್ಯ ನಡೆಯುತ್ತಲೇ ಇದೆ. ಅದರಲ್ಲೂ ಈ ವಿಚಾರದಲ್ಲಿ ಚೀನಾ ಎಲ್ಲಾ ಇತರೆ ದೇಶಕ್ಕಿಂತ ಒಂದು ಹೆಜ್ಜೆ ಮುಂದಿದೆ. ಪ್ರಸ್ತುತ ಚೀನಾದ ವಿಜ್ಞಾನಿಗಳು ಚಂದ್ರನ ಮಣ್ಣಿನಲ್ಲಿ ನೀರಿನ ಅಣುಗಳಿವೆ ಎಂಬ ಅದ್ಭುತ ಆವಿಷ್ಕಾರವನ್ನು ಮಾಡಿದೆ. 2020ರಲ್ಲಿ ಚೀನಾದ ಚಾಂಗ್ ಇ-5 ಮಿಷನ್‌ನಿಂದ ಮರಳಿ ತಂದ ಚಂದ್ರನ ಮಣ್ಣಿನ ಮಾದರಿಗಳ ಮೇಲೆ ನಡೆಸಿದ ಅಧ್ಯಯನಗಳನ್ನು ಇದು ಆಧರಿಸಿದ್ದು, ಚಂದ್ರನ ಮೇಲ್ಮೈ ಸಂಪೂರ್ಣ ಒಣಗಿದೆ ಮತ್ತು ನೀರು ಮಂಜುಗಡ್ಡೆಯ ರೂಪದಲ್ಲಿ ಮಾತ್ರ ಇದೆ ಎಂಬ ಪರಿಕಲ್ಪನೆಗೆ ಸವಾಲೆಸೆಗಿದೆ.



ಚಾಂಗ್‌ಇ-5 ಮಿಷನ್ ತಂದ ಚಂದ್ರನ ಮಣ್ಣಿನ ಮಾದರಿಗಳನ್ನು ಅಧ್ಯಯನ ಮಾಡುತ್ತಿರುವ ಚೀನಾದ ವಿಜ್ಞಾನಿಗಳು ಚಂದ್ರನ ಮಣ್ಣಿನಲ್ಲಿ ನೀರಿನ ಅಣುಗಳನ್ನು ಕಂಡುಕೊಂಡಿದ್ದಾರೆ ಎಂದು ಚೈನೀಸ್ ಅಕಾಡೆಮಿ ಆಫ್ ಸೈನ್ಸಸ್ (ಸಿಎಎಸ್) ತಿಳಿಸಿದೆ. ಬೀಜಿಂಗ್ ನ್ಯಾಷನಲ್ ಲ್ಯಾಬೊರೇಟರಿ ಫಾರ್ ಕಂಡೆನ್ಸ್ಡ್ ಮ್ಯಾಟರ್ ಫಿಸಿಕ್ಸ್ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಫಿಸಿಕ್ಸ್ ಆಫ್ ಸಿಎಎಸ್ ಮತ್ತು ಇತರ ದೇಶೀಯ ಸಂಶೋಧನಾ ಸಂಸ್ಥೆಗಳ ಸಂಶೋಧಕರು ಜಂಟಿಯಾಗಿ ನಡೆಸಿದ ಸಂಶೋಧನೆಯನ್ನು ಇತ್ತೀಚೆಗೆ ಹಾಂಗ್‌ಕಾಂಗ್ ಮೂಲದ ಸೌತ್‌ನ ಪೀರ್-ರಿವ್ಯೂಡ್ ಜರ್ನಲ್ ನೇಚರ್ ಆಸ್ಟ್ರಾನಮಿಯಲ್ಲಿ ಪ್ರಕಟಿಸಲಾಗಿದೆ.

ಅಯೋಧ್ಯೆ ಬಾಲರಾಮನಿರುವ ವಿಶ್ವದ ಮೊದಲ ಅಂಚೆಚೀಟಿ ಬಿಡುಗಡೆ

ನವದೆಹಲಿ: ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರ ಭೇಟಿಯ ಸಮಯದಲ್ಲಿ ಲಾವೊ ಪಿಡಿಆರ್ (ಲಾವೊ ಪೀಪಲ್ಸ್ ಡೆಮಾಕ್ರಟಿಕ್ ರಿಪಬ್ಲಿಕ್) ಅಯೋಧ್ಯೆಯ ಶ್ರೀರಾಮಲಲ್ಲಾ ಅವರನ್ನು ಒಳಗೊಂಡ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದೆ. ಲಾವೊ, ದೇವರ ಚಿತ್ರವಿರುವ ಅಂಚೆಚೀಟಿಯನ್ನು ಬಿಡುಗಡೆ ಮಾಡಿದ ವಿಶ್ವದ ಮೊದಲ ದೇಶವಾಗಿದೆ.



ಈ ಸ್ಟಾಂಪ್ ಸೆಟ್ ಎರಡು ವಿಭಿನ್ನ ಅಂಚೆಚೀಟಿಗಳನ್ನು ಒಳಗೊಂಡಿದೆ. ಒಂದು ಲಾವೋಸ್‌ನ ಪ್ರಾಚೀನ ರಾಜಧಾನಿ ಲುವಾಂಗ್ ಪ್ರಬಾಂಗ್‌ನಿಂದ ಭಗವಾನ್ ಬುದ್ಧನನ್ನು ಚಿತ್ರಿಸುತ್ತದೆ ಮತ್ತು ಇನ್ನೊಂದು ಭಾರತದ ಅಯೋಧ್ಯೆಯಿಂದ ಭಗವಾನ್ ಬಾಲರಾಮನನ್ನು ಪ್ರದರ್ಶಿಸುತ್ತದೆ. ಈ ಅಂಚೆ ಚೀಟಿ ಬಿಡುಗಡೆಯು ವಿಶಿಷ್ಟವಾದ ಸಾಂಸ್ಕೃತಿಕ ಸಂಪರ್ಕವನ್ನು ಸಂಕೇತಿಸುವ ಬಾಲರಾಮನಿರುವ ವಿಶ್ವದ ಮೊದಲ ಅಂಚೆಚೀಟಿಯಾಗಿದೆ. ಸಚಿವ ಎಸ್ ಜೈಶಂಕರ್ ಮತ್ತು ಲಾವೋಸ್ ವಿದೇಶಾಂಗ ಸಚಿವ ಸಲೆಮ್ಕ್ಸ್ ಕೊಮಾಸಿತ್ ಅವರ ಸಮ್ಮುಖದಲ್ಲಿ ಬೌದ್ಧ ಧರ್ಮ ಮತ್ತು ರಾಮಾಯಣದ ವಿಷಯದ ಕುರಿತು ಇರುವ ಈ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು. ಈ ಅಂಚೆ ಚೀಟಿಯು ಲಾವೊ ಪಿಡಿಆರ್ ಮತ್ತು ಭಾರತದ ನಡುವೆ ಆಳವಾಗಿ ಬೇರೂರಿರುವ ನಾಗರಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಎತ್ತಿ ತೋರಿಸುವಂತಿದೆ.

ಪೂರ್ವ ಏಷ್ಯಾ ಶೃಂಗಸಭೆಯ ವಿದೇಶಾಂಗ ಸಚಿವರ ಸಭೆ, ಆಸಿಯಾನ್ ಪ್ರಾದೇಶಿಕ ವೇದಿಕೆ ಸಭೆ ಮತ್ತು ಆಸಿಯಾನ್-ಭಾರತ ಸಚಿವರ ಸಮಾವೇಶಕ್ಕಾಗಿ ಡಾ. ಜೈಶಂಕರ್ ವಿಯೆಂಟಿಯಾನ್‌ಗೆ ಭೇಟಿ ನೀಡಿದ್ದಾರೆ.

ಮಿಲಿಯನ್ ಡಾಲರ್ ಬಹುಮಾನ ಬಂದ ಲಾಟರಿ ಟಿಕೆಟ್ ಕಳ್ಳತನ: ಭಾರತೀಯನ ಬಂಧನ

ನ್ಯೂಯಾರ್ಕ್: 1 ಮಿಲಿಯನ್ ಡಾಲರ್ ಬಂಪರ್ ಬಹುಮಾನ ಬಂದ ಲಾಟರಿ ಟಿಕೆಟ್ ಕಳ್ಳತನ ಮಾಡಿದ ಆರೋಪದ ಮೇಲೆ ಭಾರತೀಯ ಮೂಲದ ವ್ಯಕ್ತಿಯೊಬ್ಬನನ್ನು ಅಮೆರಿಕ ಪೊಲೀಸರು ಬಂಧಿಸಿದ್ದಾರೆ. 23 ವರ್ಷ ವಯಸ್ಸಿನ ಮೀರ್ ಪಟೇಲ್ ಅಮೆರಿಕ ಟೆನ್ನೆಸೀ ರಾಜ್ಯದಲ್ಲಿ ಪೆಟ್ರೋಲ್ ಬಂಕ್ ಒಂದರಲ್ಲಿ ಕೆಲಸ ಮಾಡುತ್ತಿದ್ದ.



ಗ್ರಾಹಕ ಬಂಕ್‌ನಲ್ಲೇ ಇದ್ದ ಮಳಿಗೆಯಲ್ಲಿ ತನ್ನ ಲಾಟರಿ ಟಿಕೆಟ್ ತೋರಿಸಿ ಇದಕ್ಕೆ ಬಹುಮಾನ ಬಂದಿದೆಯಾ ಚೆಕ್ ಮಾಡು ಎಂದು ಕೇಳಿದ. ಆಗ ಮೀರ್ ಪಟೇಲ್, ಲಾಟರಿ ಟಿಕೆಟ್ ಅನ್ನು ಸ್ಕ್ಯಾನ್ ಮಾಡಿ ನೋಡಿದಾಗ ಅದಕ್ಕೆ 1 ಮಿಲಿಯನ್ ಡಾಲರ್ ಬಹುಮಾನವಾಗಿ ಬಂದಿರುವುದು ಗೊತ್ತಾಗಿದೆ. ಆದರೆ, ಗ್ರಾಹಕನಿಗೆ ಸುಳ್ಳು ಹೇಳಿದ ಮೀರ್ ಪಟೇಲ್, ತುಂಬಾ ಕಡಿಮೆ ಹಣ ಬಹುಮಾನವಾಗಿ ಬಂದಿದೆ. ಹಣವನ್ನು ಗ್ರಾಹಕನಿಗೆ ನೀಡಿ ಲಾಟರಿ ಟಿಕೆಟ್ ಅನ್ನು ಕಸದ ಬುಟ್ಟಿಗೆ ಎಸೆದ. ಗ್ರಾಹಕ ಬಂಕ್‌ನಿಂದ ವಾಪಸ್ ಹೋದ ಬಳಿಕ ಕಸದ ಬುಟ್ಟಿಯಲ್ಲಿ ಇದ್ದ ಲಾಟರಿ ಟಿಕೆಟ್ ತೆಗೆದುಕೊಂಡು ಲಾಟರಿ ಆಫೀಸ್‌ಗೆ ಹೋದ ಮೀರ್ ಪಟೇಲ್, ತನಗೆ ಬಂಪರ್ ಬಹುಮಾನ ಬಂದಿರುವುದಾಗಿ ಹೇಳಿದ. ಈ ವೇಳೆ ಅನುಮಾನಗೊಂಡ ಸಿಬ್ಬಂದಿ ಪೊಲೀಸರಿಗೆ ವಿಷಯ ತಿಳಿಸಿದರು. ಮೀರ್ ಪಟೇಲ್ ಕೆಲಸ ಮಾಡುತ್ತಿದ್ದ ಪೆಟ್ರೋಲ್ ಬಂಕ್‌ಗೆ ಬಂದು ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ ನಡೆಸಿದ ವೇಳೆ ಆತ ಗ್ರಾಹಕನಿಗೆ ಮೋಸ ಮಾಡಿದ್ದು ಬಯಲಾಯ್ತು. ಪಟೇಲ್‌ನನ್ನು ಈಗ ಬಂಧಿಸಲಾಗಿದೆ.

ಜಪಾನ್‌ನಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಸರ್ಕಾರದಿಂದ 2.85 ಲಕ್ಷ ಕೋಟಿ ಯೋಜನೆ ಘೋಷಣೆ

ಟೋಕಿಯೋ: ಭಾರತವೂ ಸೇರಿದಂತೆ ಇಡೀ ಜಗತ್ತು ಜನಸಂಖ್ಯಾ ಸ್ಫೋಟದ ಬಗ್ಗೆ ಚಿಂತೆಯಲ್ಲಿದ್ದರೆ, ದ್ವೀಪ ರಾಷ್ಟ್ರ ಜಪಾನ್ ಮಾತ್ರ ಜನಸಂಖ್ಯೆ ಕಡಿಮೆಯಾಗುತ್ತಿರುವ ಚಿಂತೆಯಲ್ಲಿದೆ. 2023ರಲ್ಲಿ ಜಪಾನ್‌ನ ಒಟ್ಟು ಜನಸಂಖ್ಯೆಯಲ್ಲಿ 5.32 ಲಕ್ಷ ಜನರು ಕಡಿಮೆಯಾಗಿದ್ದಾರೆ. ಈ ವರ್ಷ 7.30 ಲಕ್ಷ ಮಕ್ಕಳು ಜನಿಸಿದ್ದು, ಇದು ಸಾರ್ವಕಾಲಿಕವಾಗಿ ಅತೀ ಕಡಿಮೆ ಜನನ ಸಂಖ್ಯೆಯಾಗಿದೆ. ಇದೇ ವರ್ಷ 15.8 ಲಕ್ಷ ಜನ ಮೃತಪಟ್ಟಿದ್ದಾರೆ. ಇದರಿಂದ 2024ರ ಜನವರಿಯ ಲೆಕ್ಕಾಚಾರದಲ್ಲಿ ಜಪಾನ್‌ನ ಒಟ್ಟು ಜನಸಂಖ್ಯೆ 12.49 ಕೋಟಿಗೆ ಕುಸಿತ ಕಂಡಿದೆ. ಸತತ 15 ವರ್ಷಗಳಿಂದ ಜನಸಂಖ್ಯೆ ಇಳಿಯುತ್ತಿರುವುದರಿಂದ ಜಪಾನ್ ಸರಕಾರ ದೇಶದ ಜನಸಂಖ್ಯೆ ಹೆಚ್ಚಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಕ್ಕಳಾಗುವ ದಂಪತಿಗೆ ಪ್ರೋತ್ಸಾಹಧನ ನೀಡಲು ಬಜೆಟ್‌ನಲ್ಲಿ ಬರೋಬ್ಬರಿ 5.30 ಟ್ರಿಲಿಯನ್ ಯೆನ್ (ಭಾರತೀಯ ರೂಪಾಯಿ ಲೆಕ್ಕದಲ್ಲಿ 2.85 ಲಕ್ಷ ಕೋಟಿ ರೂ.) ಹಣ ಮೀಸಲಿಟ್ಟಿತ್ತು. ಆದರೆ ಈ ಕ್ರಮ ಯಾವುದೇ ಫಲ ಕೊಟ್ಟಿಲ್ಲ. ಸಮೀಕ್ಷೆಯ ಪ್ರಕಾರ ಜಪಾನ್‌ನ ಅತೀ ದೊಡ್ಡ ಸಮಸ್ಯೆ ಎಂದರೆ ಇಲ್ಲಿನ ಯುವ ಜನತೆ ಮದುವೆಯಾಗಲು ಮತ್ತು ಮಕ್ಕಳನ್ನು ಹೊಂದಲು ಹಿಂಜರಿಯುತ್ತಿದ್ದಾರೆ. ಇದು ವರ್ಷ ವರ್ಷಕ್ಕೂ ಹೆಚ್ಚಾಗುತ್ತಲೇ ಇದೆ.



ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೋ ವೀಕ್ಷಿಸಿ ತಂಗಿ ಮೇಲೆ ಅತ್ಯಾಚಾರವೆಸಗಿ ಕೊಂದ ಅಣ್ಣ!

ಮಧ್ಯಪ್ರದೇಶ: ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೋ ವೀಕ್ಷಿಸಿದ 13 ವರ್ಷದ ಸಹೋದರ ತನ್ನ ತಂಗಿ ಮೇಲೆ ಅತ್ಯಾಚಾರವೆಸಗಿ ಕೊಂದು ಹಾಕಿರುವ ಘಟನೆ ಮಧ್ಯಪ್ರದೇಶದ ರೇವಾದಲ್ಲಿ ನಡೆದಿದೆ.

ಏಪ್ರಿಲ್ 24ರಂದು ನಡೆದಿದ್ದ ಒಂಬತ್ತು ವರ್ಷದ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಈ ಘೋರ ಕೃತ್ಯವನ್ನು ಪತ್ತೆ ಹಚ್ಚಿದ್ದಾರೆ. ಅಲ್ಲದೇ, ಪ್ರಕರಣ ಮುಚ್ಚಿಡಲು ಹಿರಿಯ ಸಹೋದರಿಯರು ಸಹಾಯ ಮಾಡಿರುವುದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

50 ಜನರ ವಿಚಾರಣೆ, ಆರೋಪಿಗಳ ತೀವ್ರ ವಿಚಾರಣೆ ಮತ್ತು ತಾಂತ್ರಿಕ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಪೊಲೀಸರು ಪ್ರಕರಣವನ್ನು ಭೇದಿಸಿ ಸಂತ್ರಸ್ತೆಯ 13 ವರ್ಷದ ಸಹೋದರ, ಅವರ ತಾಯಿ ಮತ್ತು 17 ಮತ್ತು 18 ವರ್ಷದ ಸಹೋದರಿಯರನ್ನು ಬಂಧಿಸಿದ್ದಾರೆ. ಪ್ರಕರಣದ ವಿವರಗಳನ್ನು ಒದಗಿಸಿದ ಪೊಲೀಸ್ ಅಧೀಕ್ಷಕ ವಿವೇಕ್ ಸಿಂಗ್, ಏಪ್ರಿಲ್ 24ರಂದು ಜಾವಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂಬತ್ತು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಕತ್ತು ಹಿಸುಕಿ ಕೊಲೆ ಮಾಡಲಾಗಿತ್ತು.

ಡಿಸಿಎಂ ಡಿ.ಕೆ.ಶಿವಕುಮಾರ್ ಎಲ್ಲಾ ಪಕ್ಷದ ನಾಯಕರಿಗೆ ಕರೆ; ಬೆಂಗಳೂರು ಕಟ್ಟೋಣ ಬನ್ನಿ

ವಿಪಕ್ಷಗಳು ತಮ್ಮವರ ಹೆಸರು ಕೊಟ್ಟರೆ ತಕ್ಷಣವೇ ಸದನ ಸಮಿತಿ ರಚನೆ

ಬೆಂಗಳೂರು, ಜು.27(ಕೆಎಂಶಿ)-ಬೂತ್ ಮಟ್ಟದಲ್ಲಿ ರಾಜಕೀಯ ಮಾಡೋಣ, ಈಗ ಬೆಂಗಳೂರು ಕಟ್ಟೋಣ ಬನ್ನಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಲ್ಲಾ ಪಕ್ಷಗಳ ನಾಯಕರಿಗೆ ಇಂದಿಲ್ಲಿ ಕರೆ ನೀಡಿದ್ದಾರೆ.

'ನಾಗರಿಕರ ಧ್ವನಿ-ಅದೇ ಸರ್ಕಾರದ ಧ್ವನಿ' ಪರಿಕಲ್ಪನೆಯಡಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ನೇತೃತ್ವದಲ್ಲಿ ವಿವಿಧ ಯೋಜನೆಗಳ ಕುರಿತು ನಡೆದ ನಗರದ ಸರ್ವಪಕ್ಷ ಶಾಸಕರು ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ವಿಚಾರದಲ್ಲಿ ಡಾ.ಅಶ್ವಥ್ ನಾರಾಯಣ ಅವರು ಗಾಬರಿಯಾಗುವುದು ಬೇಡ, ವಿಧೇಯಕದ ಪ್ರತಿ ಪದವನ್ನೂ ಪರಿಶೀಲಿಸಿ, ಬೆಂಗಳೂರಿನ ಭವಿಷ್ಯ ಕಾಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು. ಚರ್ಚೆ ಮಾಡಿ, ಸಲಹೆ ಸೂಚನೆ ನೀಡಿ, ಅದನ್ನು ಪರಿಗಣಿಸುತ್ತೇವೆ. ನಿಮ್ಮೆಲ್ಲರ ಒತ್ತಾಯದಂತೆ ಗ್ರೇಟರ್ ಬೆಂಗಳೂರು ವಿಚಾರವಾಗಿ ಸದನ ಸಮಿತಿ ರಚಿಸಲು ತೀರ್ಮಾನಿಸಿದ್ದೇವೆ. ವಿರೋಧ ಪಕ್ಷದಿಂದ ಸಮಿತಿಗೆ ಹೆಸರು ಶಿಫಾರಸ್ಸು ಮಾಡಿದರೆ ಇಂದು ಸಂಜೆಯೇ ಸಮಿತಿ ರಚಿಸಿ ಅಧಿಕೃತ ಘೋಷಣೆ ಮಾಡಬಹುದು, ಚರ್ಚೆಗೆ ಎಷ್ಟು ಸಮಯ ಬೇಕಾದರೂ ತೆಗೆದುಕೊಳ್ಳಿ, ಅಭಿಪ್ರಾಯಗಳನ್ನು ತಿಳಿಸಿ ಎಂದರು.



ಬೆಂಗಳೂರಿನ ಸರ್ವಪಕ್ಷ ಶಾಸಕರು ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬ್ರ್ಯಾಂಡ್ ಬೆಂಗಳೂರು ಕಿರು ಹೊತ್ತಿಗೆ ಬಿಡುಗಡೆ ಮಾಡಿದರು. ಚಿತ್ರದಲ್ಲಿ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ಸಚಿವ ಜಮೀರ್ ಅಹಮದ್ ಇದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸವಾಲಿನ ಇಲಾಖೆ, ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದರು. ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ಕಟ್ಟಿಸಿದರು. ಎಸ್.ಎಂ.ಕೃಷ್ಣ ಅವರು ನಗರವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. ಬೆಂಗಳೂರಿನ ಜನಸಂಖ್ಯೆ 1.40 ಕೋಟಿ ಆಗಿದೆ, 1.04 ಕೋಟಿ ವಾಹನಗಳಿವೆ, ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿಗೆ ಜನರು ಆಗಮಿಸುತ್ತಿದ್ದಾರೆ. ಇಲ್ಲಿಗೆ ಬಂದವರು ತಂತ್ರಜ್ಞಾನ, ಮಾನವ ಸಂಪನ್ಮೂಲ, ಹವಾಮಾನ, ಸಂಸ್ಕೃತಿ ನೋಡಿ ಮತ್ತೆ ವಾಪಸ್ ಹೋಗುತ್ತಿಲ್ಲ, ಮಕ್ಕಳ ಶಿಕ್ಷಣ, ಉದ್ಯೋಗ ಅರಸಿ ಬಂದವರೂ ಇಲ್ಲೇ ಉಳಿದುಕೊಂಡಿದ್ದಾರೆ. ಬೆಂಗಳೂರು ಅನಿಯಂತ್ರಿತವಾಗಿ ಬೆಳೆಯುತ್ತಿದೆ.

ಬಿಜೆಪಿ ಆಡಳಿತ ಸಂದರ್ಭದಲ್ಲಿ ಬಿಬಿಎಂಪಿ ವ್ಯಾಪ್ತಿಗೆ 110 ಹಳ್ಳಿಗಳನ್ನು ಸೇರಿಸಲಾಯಿತಾದರೂ ಮೂಲ ಸೌಕರ್ಯ ಒದಗಿಸಲು ಸಾಧ್ಯವಾಗಿಲ್ಲ, ಒಂದೆಡೆ ಕಾವೇರಿ ನೀರಿನ ಸಮಸ್ಯೆ, ಇನ್ನೊಂದೆಡೆ ಅಂತರ್ಜಲ ಕುಸಿತದಿಂದಾಗಿ ಸಾವಿರಾರು ಕೊಳವೆಬಾವಿಗಳು ಬರಿದಾಗುತ್ತಿವೆ. ಕಸ ವಿಲೇವಾರಿ, ವಾಹನ ಸಂಚಾರ ದಟ್ಟಣೆ ಸಮಸ್ಯೆಗಳು ಹೆಚ್ಚುತ್ತಿವೆ, ಅಧಿಕಾರಿಗಳಿಂದ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ, ಕಾನೂನು ಚೌಕಟ್ಟಿನಲ್ಲಿ ಎಲ್ಲ ಪ್ರಕ್ರಿಯೆ ನಡೆಯಬೇಕು, ಟಿಡಿಆರ್ ದೊಡ್ಡ ಹಗರಣವಾಗಿದ್ದು, ಪರಿಹರಿಸಲು ಹೊಸ ವ್ಯವಸ್ಥೆ ತರಲಾಗುತ್ತಿದೆ, ಬೆಂಗಳೂರಿಗೆ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ಸ್ಕೈಡೆಕ್ ನಿರ್ಮಾಣ ಯೋಜನೆ ರೂಪಿಸಲಾಗಿದೆ ಎಂದರು. ಇದೇ ವೇಳೆ ಬ್ರ್ಯಾಂಡ್ ಬೆಂಗಳೂರು ಕಿರು ಹೊತ್ತಿಗೆ ಬಿಡುಗಡೆ ಮಾಡಲಾಯಿತು.

ಸಿದ್ದರಾಮಯ್ಯ ಮುಖಭಾವದಲ್ಲಿ ಈಗ ಗಂಭೀರತೆ

- ಇಂದು ಮತ್ತೆ ಮೈಸೂರಿಗೆ ಭೇಟಿ: ವಾಸ್ತವ್ಯ
- ನಾಳೆ ಕೆಆರ್‌ಎಸ್, ಕಬಿನಿಗೆ ಬಾಗಿನ ಅರ್ಪಣೆ

ಮೈಸೂರು, ಜು.27(ಬಿಎಲ್‌ಯು)- ಮೈಸೂರಿಗೆ ಬಂದಾಗಲ್ಲೆಲ್ಲಾ ಸೀರಿಯಸ್ಸಾಗಿ, ಸದ್ದು ಮಾಡಿದವರಿಗೆ ಗದರುತ್ತಾ, ಒಮ್ಮೊಮ್ಮೆ ಹಾಸ್ಯ ಧಾಟಿ, ಹಸನ್ಮುಖರಾಗಿರುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಖಭಾವದಲ್ಲಿ ಈಗ ಗಂಭೀರತೆ ಕಂಡುಬರುತ್ತಿದೆ. ನಿನ್ನೆ(ಶುಕ್ರವಾರ) ಮೈಸೂರಿಗೆ ಆಗಮಿಸಿದ್ದ ಸಿದ್ದರಾಮಯ್ಯ ಶಾರದಾದೇವಿ ನಗರದ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು.



ಸಿದ್ದರಾಮಯ್ಯ

ಇಂದು ಬೆಳಗ್ಗೆ ಮನೆಯಿಂದ ಹೊರಬಂದ ಸಿದ್ದರಾಮಯ್ಯರ ಮುಖಭಾವದಲ್ಲಿ ಗಂಭೀರತೆ ಎದ್ದು ಕಾಣುತ್ತಿತ್ತು. ಸಾಮಾನ್ಯವಾಗಿ ಮಾಧ್ಯಮದವರ ಬಳಿ ಬಂದು ಪ್ರಸಕ್ತ ರಾಜಕೀಯ ಬೆಳವಣಿಗೆ ಹಾಗೂ ಆಡಳಿತದ ಬಗ್ಗೆ ಪ್ರತಿಕ್ರಿಯೆ ನೀಡುತ್ತಿದ್ದವರು. ಇಂದು ಮೀಡಿಯಾ ಗ್ಯಾಲರಿಯತ್ತ ತಿರುಗಿಯೂ ನೋಡಲಿಲ್ಲ. ಮನೆ ಮುಂದೆ ನೆರೆದಿದ್ದರಿಂದ ಅಹವಾಲು ಸ್ವೀಕರಿಸಿ, ಬೆಂಗಳೂರಿನತ್ತ ಹೊರಟರು. ಸೋಮವಾರದ ತನಕ ಮೈಸೂರಿನಲ್ಲೇ ವಾಸ್ತವ್ಯ ಹೂಡುವ ಉದ್ದೇಶವಿತ್ತು ಆದರೆ, ವಾಲ್ಮೀಕಿ ನಿಗಮ ಹಾಗೂ ಮುಡಾ ಹಗರಣದ ಹಿನ್ನೆಲೆಯಲ್ಲಿ ಕ್ಷಣಕ್ಷಣದ ಬೆಳವಣಿಗೆಯಿಂದ ಬೆಂಗಳೂರಿನತ್ತ ತೆರಳಿದರು. ಆದರೆ, ಖಾಸಗಿ ಕಾರ್ಯಕ್ರಮದ ನಿಮಿತ್ತ ಮತ್ತೆ ನಾಳೆ ಬೆಳಿಗ್ಗೆ ಮೈಸೂರಿಗೆ ಆಗಮಿಸುವ ಸಿದ್ದರಾಮಯ್ಯ ಮೈಸೂರಿನಲ್ಲಿ ವಾಸ್ತವ್ಯ ಹೂಡುವರು. ಸೋಮವಾರ ಬೆಳಿಗ್ಗೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವರು. ನಿನ್ನೆ ಮೈಸೂರಿನ ಸಾ.ರಾ.ಕನ್ವೆನ್‌ಷನ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರಿಗೆ ನಾಲ್ಕೈದು ಬಾರಿ ಅವರಿಗೆ ತುರ್ತು ಮೊಬೈಲ್ ಕರೆ ಬಂದಾಗ ಅವರ ಮುಖಭಾವದಲ್ಲಿ ದಿಢೀರ್ ಬದಲಾವಣೆ ಆಗಿತ್ತು. ಸಿದ್ದರಾಮಯ್ಯ ಅವರ ಮುಖಭಾವದಲ್ಲಾದ ಬದಲಾವಣೆ ಆಪ್ತರಲ್ಲಿ ಅಚ್ಚರಿ ಮೂಡಿಸಿದೆ.

ಗಾಂಧಿನಗರದ ಶುದ್ಧ ನೀರಿನ ಘಟಕ ಕಾರ್ಯಾರಂಭ



ಮೈಸೂರಿನ ಗಾಂಧಿನಗರ 4ನೇ ಮೇನ್, 4ನೇ ಕ್ರಾಸ್‌ನ ಶುದ್ಧ ಕುಡಿಯುವ ನೀರಿನ ಘಟಕವನ್ನು ಬಡಾವಣೆ ನಿವಾಸಿಗಳ ಸಹಕಾರದೊಂದಿಗೆ ಅಕ್ವಾಗ್ರೀನ್ ವಾಟರ್ ಸಲ್ಯೂಷನ್ಸ್ ಸಂಸ್ಥೆಯು ರಿಪೇರಿ ಮಾಡಿ, ನೀರು ಪೂರೈಕೆಗೆ ಚಾಲನೆ ನೀಡಿತು.

ಮೈಸೂರು, ಜು. 27(ಆರ್‌ಕೆ)- ಕಳೆದ ಹಲವು ವರ್ಷಗಳಿಂದ ಕೆಟ್ಟು ನಿಂತಿದ್ದ ಮೈಸೂರಿನ ಗಾಂಧಿನಗರ 4ನೇ ಮೇನ್, 4ನೇ ಕ್ರಾಸ್‌ನ ದಿಶಾ ಆಸ್ಪತ್ರೆ ಎದುರಿನ ಶುದ್ಧ ಕುಡಿಯುವ ನೀರಿನ ಘಟಕವನ್ನು ಬಡಾವಣೆ ನಿವಾಸಿಗಳ ಸಹಕಾರದೊಂದಿಗೆ ಅಕ್ವಾಗ್ರೀನ್ ವಾಟರ್ ಸಲ್ಯೂಷನ್ಸ್ ಸಂಸ್ಥೆಯು ರಿಪೇರಿ ಮಾಡಿ, ಪುನಃ ನೀರು ಪೂರೈಕೆಗೆ ಚಾಲನೆ ನೀಡಿದೆ.

ಈ ಹಿಂದೆ ಮೈಸೂರು ಮಹಾನಗರ ಪಾಲಿಕೆಯಿಂದ ಗಾಂಧಿನಗರ, ಕರುಣಾಪುರ ಹಾಗೂ ಎನ್.ಆರ್. ಮೊಹಲ್ಲಾ ನಿವಾಸಿಗಳಿಗೆ ನೀರು ಪೂರೈಸಲೆಂದು ಸ್ಥಾಪಿಸಿದ್ದ ಈ ಘಟಕವು ನಂತರ ನಿರ್ವಹಣೆಯಿಲ್ಲದೆ ಕೆಲ ವರ್ಷಗಳಿಂದ ಕೆಟ್ಟು ನಿಂತಿತ್ತು.

ಕಳೆದ ಬೇಸಿಗೆ ಬಿರು ಬಿಸಿಲಲ್ಲಿ ನೀರಿಗೆ ಅಭಾವ ಉಂಟಾಗಿದ್ದರಿಂದ ಕಾರ್ಯ ಸ್ಥಗಿತಗೊಂಡಿದ್ದ ನೀರಿನ ಘಟಕವನ್ನು ರಿಪೇರಿ ಮಾಡಿಸಿ ನೀರನ್ನು ಒದಗಿಸಬೇಕೆಂದು ನಿವಾಸಿಗಳು ತೀವ್ರ ಒತ್ತಡ ಹೇರಿದ ಹಿನ್ನೆಲೆಯಲ್ಲಿ ಪಾಲಿಕೆ ಅಧಿಕಾರಿಗಳು ಅಕ್ವಾಗ್ರೀನ್ ಸಂಸ್ಥೆಯ ಕಾರ್ತಿಕ್ ಎಂಬುವರ ಮೂಲಕ ನಿವಾಸಿಗಳ ನೆರವಿನೊಂದಿಗೆ ರಿಪೇರಿ ಮಾಡಿಸಿ ಘಟಕ ಕಾರ್ಯನಿರ್ವಹಿಸುವಂತೆ ಮಾಡಿದೆ.

ನಿನ್ನೆ (ಜು.26) ಬೆಳಗ್ಗೆ ಬಡಾವಣೆಯ ಪ್ರಮುಖರಾದ ಉದಯ್‌ಕುಮಾರ್, ರಾಜೇಶ್, ಕೃಷ್ಣಮೂರ್ತಿ, ಪ್ರಸಾದ್ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ನಾಣ್ಯ ಹಾಕಿ ನೀರು ತುಂಬಿಸುವ ಮೂಲಕ ನಿವಾಸಿಗಳಾದ ವಿಶ್ವರಾಜ್, ಸ್ವಾಮಿ, ಮಹದೇವ, ಶರತ್, ಜಯಾ ಮೇರಿ, ಹೆನ್ರಿ ಮೋಸೆಸ್, ಎಲಿಜಬೆತ್ ರಾಣಿ, ಮೇರಿ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಮುಕ್ತ ವಿವಿಯಲ್ಲಿ ಪರಿಶಿಷ್ಟ ಜಾತಿ ನೌಕರರಿಗೆ ಅನ್ಯಾಯ ಆರೋಪ

ಮೈಸೂರು,ಜು.27(ಜಿಎ)-ರಾಜ್ಯ ಮುಕ್ತ ವಿವಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನೌಕರರಿಗೆ ಅನ್ಯಾಯ ಮಾಡಲಾಗುತ್ತಿದೆ. ಈ ಬಗ್ಗೆ ಹಲವರ ಗಮನ ಸೆಳೆದರೂ ಪ್ರಯೋಜನವಾಗಿಲ್ಲ ಎಂದು ವಿವಿಯ ಪರಿಶಿಷ್ಟ ಜಾತಿ ಮತ್ತು ಪಂಗಡದ ದಿನಗೂಲಿ ನೌಕರರ ಸಂಘದ ಕಾರ್ಯದರ್ಶಿ ಡಾ.ಎಂ.ಕೆ.ಬಿಳಿಗಿರಿ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಕ್ತ ವಿವಿಗೆ 2011-12ನೇ ಸಾಲಿನಿಂದ ಇಲ್ಲಿವರೆಗೆ ಬಂದಿರುವ ಕುಲಪತಿಗಳು, ಕುಲಸಚಿವರು, ವ್ಯವಸ್ಥಾಪನಾ ಮಂಡಳಿ ಸದಸ್ಯರೂ ತಮಗೆ ನ್ಯಾಯ ದೊರಕಿಸಿಲ್ಲ. ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿದ್ದಾರೆ. ನೇಮಕಾತಿ ವೇಳೆ ಭ್ರಷ್ಟಾಚಾರ ನಡೆದಿದೆ. ನ್ಯಾಯಾಲಯದ ಆದೇಶದ ಅಡಿಯಲ್ಲಿ ಬರುವ 24 ಮಂದಿಯಲ್ಲಿ 15 ಮಂದಿ ಪರಿಶಿಷ್ಟ ಜಾತಿಗೆ ಸೇರಿರುವ ಕಾರಣ ದಲಿತರಿಗೆ ಅನ್ಯಾಯ ಮಾಡಬೇಕೆಂಬ ಉದ್ದೇಶದಿಂದ ನೇಮಕಾತಿ ಕಡೆಗಣಿಸಲಾಗಿದೆ ಎಂದು ದೂರಿದರು. ಸಿಎಂ ತವರು ಜಿಲ್ಲೆಯಲ್ಲಿಯೇ ಮುಕ್ತ ವಿವಿಯಲ್ಲಿ ನೇಮಕಾತಿ ವೇಳೆ ಅನ್ಯಾಯ ನಡೆಯುತ್ತಿದ್ದು, ಸಿಎಂ ಸಹ ಮೌನ ಮುರಿದು ಈ ಬಗ್ಗೆ ಗಮನ ಹರಿಸಬೇಕಿದೆ. ಇಲ್ಲವಾದರೆ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಹೇಶ್, ಸ್ವಾಮಿ, ಶಿವಕುಮಾರ್ ಉಪಸ್ಥಿತರಿದ್ದರು.

ಕೇಂದ್ರ ಸಚಿವ ಕುಮಾರಸ್ವಾಮಿಯ ಪ್ರತಿನಿತ್ಯದ ರಾಜಕಾರಣ ನಮ್ಮ ಸರ್ವನಾಶ ಮಾಡುವುದೇ ಆಗಿದೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯೋಕ್ತಿ

ಬೆಂಗಳೂರು, ಜು.27(ಕೆಎಂಶಿ)- ನಮ್ಮನ್ನು ಸರ್ವನಾಶ ಮಾಡುವುದೇ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಪ್ರತಿನಿತ್ಯದ ಆಲೋಚನೆಯಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮನ್ನು ಸರ್ವನಾಶ ಮಾಡಲು ಕುಮಾರಸ್ವಾಮಿ ಪ್ರತಿನಿತ್ಯ ರಾಜಕಾರಣ ಮಾಡುತ್ತಿದ್ದಾರೆ. ಅವರ ನಡೆ, ಹೆಜ್ಜೆ, ಭಾವನೆ, ಚಿಂತನೆ, ಆಚಾರ-ವಿಚಾರ ಎಲ್ಲವೂ ನಮಗೆ ಗೊತ್ತಿದೆ ಎಂದರು.

ರಾಮನಗರದ ಹೆಸರನ್ನು ಬದಲಿಸುತ್ತಿಲ್ಲ. ಇದು ನಮ್ಮ ಜಿಲ್ಲೆ, ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ ತಾಲೂಕಿನ ಜನ ನಮ್ಮವರು, ಅಂದರೆ ಬೆಂಗಳೂರಿನವರು. ನಾನು ಬೆಂಗಳೂರು ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆ. ಕುಮಾರಸ್ವಾಮಿ ಹಾಗೂ ದೇವೇಗೌಡರು ಹಾಸನದಿಂದ ಬಂದವರು. ಆಗ ಇದು ಬೆಂಗಳೂರಾಗಿಯೇ ಇತ್ತು. ಪ್ರಧಾನ ಮಂತ್ರಿ, ಮುಖ್ಯಮಂತ್ರಿಯಾದಾಗಲೂ ಬೆಂಗಳೂರಾಗಿಯೇ ಇತ್ತು. ನಾವು ಭಾರತೀಯರೆಂಬುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆಯೋ ಅದೇ ರೀತಿ ಬೆಂಗಳೂರಿನವರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಕುಮಾರಸ್ವಾಮಿ ಅಧಿಕಾರಕ್ಕೆ ಬಂದಾಗ ಜಿಲ್ಲೆಯನ್ನು ಒಡೆದು ಬೇರೆ ಹೆಸರು ಕೊಟ್ಟರು. ಜಿಲ್ಲೆಯನ್ನು ಪ್ರತ್ಯೇಕ ಮಾಡುವಾಗ ಬೆಂಗಳೂರು ಹೆಸರು ಉಳಿಸಿಕೊಳ್ಳುವಂತೆ ಸಲಹೆ ನೀಡಿದ್ದೆವು. ಪೂರ್ವಜರು ಕೊಟ್ಟಿರುವ ಹೆಸರನ್ನು ಯಾಕೆ ಕಳೆದುಕೊಳ್ಳಬೇಕು ಎಂದು ಪ್ರಶ್ನಿಸಿದರು.

ಜಿಲ್ಲಾಡಳಿತ ಕೇಂದ್ರ ರಾಮನಗರದಲ್ಲೇ ಇರಲಿದೆ. ಜಿಲ್ಲೆಯ ಜನಕ್ಕೆ ಹೊಸ ದಿಕ್ಕು ನೀಡಬೇಕು, ಹೊಸ ಆಲೋಚನೆ, ಅಭಿವೃದ್ಧಿ ನೀಡಬೇಕು. ಮುಂದಿನ ಪೀಳಿಗೆ ದೃಷ್ಟಿಯಿಂದ ಆಲೋಚನೆ ಮಾಡಿ ತೀರ್ಮಾನ ಮಾಡಿದ್ದೇವೆ. ತೀರ್ಮಾನಕ್ಕೆ ಜನರು ಪಕ್ಷಾತೀತವಾಗಿ ಸಂತೋಷವಾಗಿದ್ದಾರೆ ಎಂದರು.

ಮತ್ತೆ ಅಧಿಕಾರಕ್ಕೆ ಬಂದು ರಾಮನಗರ ಎಂದು ಮರುನಾಮಕರಣ ಮಾಡುವುದು ಕುಮಾರಸ್ವಾಮಿ ಅವರ ಹಣೆಯಲ್ಲಿ ಬರೆದಿಲ್ಲ. 2028ರಲ್ಲೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ, ಬರೆದಿಟ್ಟುಕೊಳ್ಳಿ ಎಂದು ಸವಾಲು ಹಾಕಿದರು. ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಕೆಆರ್‌ಎಸ್ ಬೃಂದಾವನವನ್ನು ವಿಶ್ವದರ್ಜೆಗೆ ಏರಿಸುವ ಯೋಜನೆ ಕೈಗೊಳ್ಳಲಾಗಿದೆ, ಇದರಿಂದ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ಸಿಗಲಿದೆ ಎಂದರು.

ಶ್ರೀ ಚಾಮುಂಡೇಶ್ವರಿ ವರ್ಧಂತಿ ಆಚರಣೆ



ಸಂಧ್ಯಾ ಸುರಕ್ಷ ಟ್ರಸ್ಟ್, ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರದ ಜಿಲ್ಲಾ ಬ್ರಾಹ್ಮಣ ಮಹಾಸಭಾದಿಂದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ವರ್ಧಂತಿ ಆಚರಿಸಲಾಯಿತು. ಈ ವೇಳೆ ಶಾಕಂಬರಿ ಟ್ರಸ್ಟ್‌ನ ಆಡಳಿತಾಧಿಕಾರಿ ಬಿ.ಆರ್. ನಟರಾಜ್ ಜೋಯಿಸ್, ಶ್ರೀಮತಿ ಮಂಗಳ ನಟರಾಜ್ ಜೋಯಿಸ್, ರಘುರಾಂ ವಾಜಪೇಯಿ, ಶ್ರೀಮತಿ ಲತಾ ಮೋಹನ್, ಸತ್ಯನಾರಾಯಣ ಹಾಗೂ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.


ಮೈಸೂರು-ಬೆಂಗಳೂರು ಕಾಂಗ್ರೆಸ್ ಪಾದಯಾತ್ರೆ ರದ್ದು: ಡಿಸಿಎಂ ಶಿವಕುಮಾರ್

ಬೆಂಗಳೂರು, ಜು.27- ಬಿಜೆಪಿಯ ಬೆಂಗಳೂರು-ಮೈಸೂರು ಪಾದಯಾತ್ರೆಗೆ ಕೌಂಟರ್ ಕೊಡಲು ಕಾಂಗ್ರೆಸ್ ನಡೆಸಲು ಉದ್ದೇಶಿಸಿದ್ದ ಮೈಸೂರು- ಬೆಂಗಳೂರು ಪಾದಯಾತ್ರೆಯನ್ನು ರದ್ದುಗೊಳಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅವರು ಪಾದಯಾತ್ರೆಯನ್ನು ಮಾಡಲಿ, ನಾವು ನಮ್ಮದೇ ಆದ ರೀತಿಯಲ್ಲಿ ಅದಕ್ಕೆ ತಿರುಗೇಟು ನೀಡುತ್ತೇವೆ. ಬಿಜೆಪಿಯವರು ಮಾಡಲು ಉದ್ದೇಶಿಸಿರುವ ಪಾದಯಾತ್ರೆಯಲ್ಲಿ ಸದುದ್ದೇಶ ಇಲ್ಲ. ಬರೀ ರಾಜಕೀಯವಿದೆ ಎಂದು ಅವರು ಹೇಳಿದರು.

ದೇಶ ಅಥವಾ ರಾಜ್ಯಕ್ಕೆ ಒಳ್ಳೆಯದಾಗುವುದೆಂದರೆ ಪಾದಯಾತ್ರೆ ಮಾಡಲಿ. ಅದಕ್ಕೆ ನಮ್ಮ ತಕರಾರು ಏನೂ ಇಲ್ಲ. ಬಿಜೆಪಿಯವರು ಅದ್ಯಾವ ಪುರುಷಾರ್ಥಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದಾರೋ ಎನ್ನುವುದು ಸಾರ್ವಜನಿಕರಿಗೆ ಗೊತ್ತಿರುವ ವಿಚಾರ ಎಂದರು.

ಬಿಜೆಪಿಯವರು ಪಾದಯಾತ್ರೆ ಹೊರಡುವ ಮುನ್ನ ಅವರ ಅವಧಿಯಲ್ಲಾದ ಸಾಲು ಸಾಲು ಹಗರಣಗಳ ಬಗ್ಗೆ ವಿವರಣೆಯನ್ನು ನೀಡಲಿ.



ಡಿ.ಕೆ.ಶಿವಕುಮಾರ್

ಯಡಿಯೂರಪ್ಪ ಅಥವಾ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಅಕ್ರಮ ನಡೆಯಿತೋ, ಯಾವ್ಯಾವ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದರು ಎನ್ನುವುದನ್ನು ಜನತೆಗೆ ತಿಳಿಸಲಿ ಎಂದು ಡಿಕೆಶಿ ಹೇಳಿದ್ದಾರೆ.

ಅವರು ಹೇಳಿದ ಜಾಗಕ್ಕೆ, ಅವರು ಹೇಳಿದ ಮಾಧ್ಯಮಗಳ ಮುಂದೆ ಕೂರಲು ನಾವು ಸಿದ್ದರಿದ್ದೇವೆ. ಕುಮಾರಸ್ವಾಮಿ, ಸದಾನಂದಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಯಡಿಯೂರಪ್ಪ, ಆರ್. ಅಶೋಕ್, ವಿಜಯೇಂದ್ರ ಯಾರು ಬೇಕಾದರೂ ಬರಲಿ. ಚರ್ಚೆಗೆ ನಾನು ಸಿದ್ದನಿದ್ದೇನೆ ಅವರು ಸಿದ್ದರಿದ್ದಾರಾ ಎಂದು ಡಿ.ಕೆ.ಶಿವಕುಮಾರ್ ಸವಾಲು ಎಸೆದಿದ್ದಾರೆ.

ಬಿಜೆಪಿಯವರು ಪಾದಯಾತ್ರೆಗೆ ನಾವು ಪ್ರತಿ ಪಾದಯಾತ್ರೆ ಮಾಡುವುದಿಲ್ಲ. ಬದಲಿಗೆ, ಪಾದಯಾತ್ರೆ ಸಾಗುವಷ್ಟು ದಿನ ಅವರ ಕಾಲದ ಒಂದೊಂದು ಅಕ್ರಮಗಳನ್ನು ದಾಖಲೆ ಸಮೇತ ಬಯಲು ಮಾಡುತ್ತಾ ಬರುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷರು ಹೇಳಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ರಾಜಕೀಯ ಉದ್ದೇಶಕ್ಕಾಗಿ ಅವರು ಪಾದಯಾತ್ರೆ ನಡೆಸಲು ಮುಂದಾಗಿದ್ದಾರೆಯೇ ಹೊರತು, ಜನರ ಒಳಿತಿಗಾಗಿ ಅಲ್ಲ ಎನ್ನುವುದು ಅತ್ಯಂತ ಸ್ಪಷ್ಟ ಎಂದು ಡಿಕೆಶಿ ಆಕ್ರೋಶ ಹೊರಹಾಕಿದ್ದಾರೆ.

ಆಗಸ್ಟ್ 16ರಿಂದ ಒಂದು ತಿಂಗಳು ಯುವ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಆರಂಭಗೊಳ್ಳಲಿದೆ, ಹೊಸ ನಾಯಕರನ್ನು ಸೃಷ್ಟಿಸುವ ಉದ್ದೇಶದಿಂದ ಇದನ್ನು ಆರಂಭಿಸುತ್ತಿದ್ದೇವೆ. ಸದಸ್ಯರಾಗಲು ಬಯಸುವವರು ಆನ್ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು ಎಂದು ಡಿಕೆಶಿ ಹೇಳಿದ್ದಾರೆ.

ರಸ್ತೆಯಲ್ಲೇ ಶೆಡ್ ನಿರ್ಮಾಣ: ಪಾಲಿಕೆಗೆ ದೂರು

ಮೈಸೂರು, ಜು.27- ಮೈಸೂರಿನ ಬಡೇಮಕಾನ್‌ನಲ್ಲಿರುವ ಲಿಟಲ್ ಜೆಮ್ಸ್ ಶಾಲೆಯ ಪಕ್ಕದ ಬೀದಿಯ ಮುಖ್ಯ ರಸ್ತೆಗೆ ಅಡ್ಡಲಾಗಿ ವ್ಯಕ್ತಿಯೋರ್ವರು ಶೆಡ್ ನಿರ್ಮಿಸಿ ದನಗಳನ್ನು ಕಟ್ಟಿದ್ದಾರೆ ಎಂದು ಅಲ್ಲಿನ ನಿವಾಸಿಗಳು ನಗರಪಾಲಿಕೆ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.



ರಸ್ತೆಯಲ್ಲಿ ಶೆಡ್ ನಿರ್ಮಿಸಿರುವುದರಿಂದ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಅಲ್ಲದೇ ಇಲ್ಲಿರುವ ಗ್ಯಾರೇಜ್‌ನವರು ತಮ್ಮ ವಾಹನಗಳನ್ನು ಪಾರ್ಕ್ ಮಾಡುತ್ತಿರುವುದರಿಂದ ರಸ್ತೆ ಸಂಪೂರ್ಣವಾಗಿ ಬ್ಲಾಕ್ ಆಗಿದೆ. ಈ ರಸ್ತೆಯಲ್ಲೇ ಸರ್ಕಾರಿ ಶಾಲೆಯೂ ಇದ್ದು, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದರಿಂದ ಈ ಅನಧಿಕೃತ ಶೆಡ್ ತೆರವುಗೊಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಹಲವು ಕಡೆ ಪ್ರವಾಹ

- ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು ● ಸೇತುವೆಗಳು ಮುಳುಗಡೆ ● ರಸ್ತೆ ಸಂಪರ್ಕ ಬಂದ್
- ಮರ ಬಿದ್ದು ವಿದ್ಯುತ್ ವ್ಯತ್ಯಯ ● ವಾಸದ ಮನೆಗಳಿಗೆ ಹಾನಿ ● ಅಧಿಕಾರಿಗಳ ಭೇಟಿ



ಮಕ್ಕಂದೂರು ಮತ್ತು ಮಾದಾಪುರದ ಬಳಿ ಭೂ ಕುಸಿತಗೊಂಡಿರುವುದು.

ಮಡಿಕೇರಿ,ಜು.27– ಕೊಡಗು ಜಿಲ್ಲೆಯಲ್ಲಿ ಶನಿವಾರ ಮಧ್ಯಾಹ್ನದ ಬಳಿಕ ಮಳೆ ಕೊಂಚ ಬಿಡುವು ನೀಡಿತ್ತಾದರೂ ಶುಕ್ರವಾರ ರಾತ್ರಿ ಪೂರ್ತಿ ಸುರಿದ ಭಾರಿ ಮಳೆಯಿಂದ ಹಲವು ಕಡೆಗಳಲ್ಲಿ ಪ್ರವಾಹ ತಲೆದೋರಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಗ್ರಾಮೀಣ ಭಾಗಗಳಲ್ಲಿ ಕೆಲ ಸೇತುವೆಗಳು ಮುಳುಗಿದ ಸ್ಥಿತಿಯಲ್ಲಿವೆ.

ಕಾವೇರಿ, ಲಕ್ಷ್ಮಣತೀರ್ಥ, ರಾಮತೀರ್ಥ, ಹಟ್ಟಿಹೊಳೆ, ಮಾದಾಪುರ ಹೊಳೆ, ಕೀರೆ ಹೊಳೆ ಸಹಿತ ನದಿ ತೊರೆಗಳಲ್ಲಿ ನೀರು ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ಕಾಫಿ, ಅಡಕೆ ಸಹಿತ ಭತ್ತದ ಗದ್ದೆಗಳು ಕೂಡ ಜಲಾವೃತವಾಗಿವೆ. ನದಿ ಪಾತ್ರದ ನಿವಾಸಿಗಳಲ್ಲಿ ಆತಂಕ ಮುಂದುವರೆದಿದ್ದು, ಇದೇ ರೀತಿ ಮಳೆ ಬಿಡುವು ನೀಡಿದಲ್ಲಿ ಮಾತ್ರವೇ ಪ್ರವಾಹ ಇಳಿಕೆ ಕಾಣುವ ಸಾಧ್ಯತೆಗಳಿದೆ. ಮಳೆಯಿಂದ ಮಕ್ಕಂದೂರು ಮತ್ತು ಮಾದಾಪುರದ ಬಳಿ ಭೂ ಕುಸಿತ ಘಟನೆಗಳು ನಡೆದಿದ್ದು, ಮಣ್ಣನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಮೂರ್ನಾಡು–ನಾಪೋಕ್ಲು ರಸ್ತೆಯಲ್ಲೂ ಗುಡ್ಡ ಕುಸಿತವಾಗಿದ್ದು, ಜೆಸಿಬಿ ಮೂಲಕ ರಸ್ತೆ ಸಂಪರ್ಕವನ್ನು ಸುಗಮಗೊಳಿಸಲಾಗಿದೆ.

ಪ್ರವಾಹದಿಂದ ಸಂಪರ್ಕ ಬಂದ್: ಭಾಗಮಂಡಲದ ತ್ರಿವೇಣಿ ಸಂಗಮ ಮುಳುಗಿದ ಸ್ಥಿತಿಯಲ್ಲಿದ್ದರೆ, ಇತ್ತ ನಾಪೋಕ್ಲು, ಕಕ್ಕಬ್ಬೆ, ನೆಲಜಿ ಸೇರಿದಂತೆ ಕಾವೇರಿ ನದಿ ಮೂಲದ ಗ್ರಾಮಗಳಲ್ಲಿ ವ್ಯಾಪಕ ಮಳೆಯಾದ ಕಾರಣ ಚೇರಂಬಾಣೆ ವ್ಯಾಪ್ತಿಯ ದೋಣಿಕಡುವು ಗ್ರಾಮದಲ್ಲಿ ಕಾವೇರಿ ನದಿ ನೀರು ಉಕ್ಕಿ ಹರಿಯುತ್ತಿರುವ ಪರಿಣಾಮ ರಸ್ತೆ ಸಂಪರ್ಕ ಕಳೆದ ಕೆಲವು ದಿನಗಳಿಂದ ಬಂದ್ ಆದ ಸ್ಥಿತಿಯಲ್ಲಿದ್ದು, ಗ್ರಾಮಸ್ಥರ ಅನುಕೂಲಕ್ಕಾಗಿ ಜಿಲ್ಲಾಡಳಿತ ದೋಣಿ ವ್ಯವಸ್ಥೆ ಮಾಡಿದೆ.

ದೋಣಿಯಲ್ಲಿ ಸಂಚರಿಸುವ ಗ್ರಾಮಸ್ಥರ ಸುರಕ್ಷತೆಗಾಗಿ ಲೈಫ್ ಜಾಕೆಟ್‌ಗಳನ್ನು ಕಂದಾಯ ಇಲಾಖೆ ಮೂಲಕ ಒದಗಿಸಲಾಗಿದೆ. ಕಳೆದ ಕೆಲವು ದಿನಗಳಿಂದ ನಾಪೋಕ್ಲು ವ್ಯಾಪ್ತಿಯಲ್ಲಿ ಭಾರಿ ಗಾಳಿಯೊಂದಿಗೆ ಅಬ್ಬರಿಸಿದ ಪುಷ್ಯ ಮಳೆಯಿಂದ ಕಾವೇರಿ ನದಿ ಮೈದುಂಬಿ ಹರಿದು ನಾಪೋಕ್ಲು, ಮೂರ್ನಾಡು ಮುಖ್ಯ ರಸ್ತೆ ಹಾಗೂ ನಾಪೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆರಿಯಪರಂಬು ಕಲ್ಲುಮೊಟ್ಟೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಬೇತು ಗ್ರಾಮದಿಂದ ಬಲಮುರಿ ಪಾರಾಣೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮಕ್ಕಿಕಡವು ರಸ್ತೆಯಲ್ಲಿ ಪ್ರವಾಹದಿಂದ ಸಂಚಾರ ಸ್ಥಗಿತಗೊಂಡಿದೆ.

ಪೊನ್ನಂಪೇಟೆ ತಾಲೂಕಿನ ಮಂಚಳ್ಳಿಯಿಂದ ಪೂಚೆಕಲ್ ಮೂಲಕ ಕಾನೂರು ಲಕ್ಷ್ಮಣ ತೀರ್ಥ ನದಿ ಸೇರುವಲ್ಲಿ ರಾಮನದಿ ಮೈದುಂಬಿ ಹರಿಯುತ್ತಿದೆ. ಪರಿಣಾಮ ಕಬ್ಬಿಣದ ಸೇತುವೆ ಸಂಪರ್ಕಿಸುವ ತಗ್ಗು ಪ್ರದೇಶದಲ್ಲಿ ನೀರು ಪ್ರವಾಹದಂತೆ ಹರಿಯುತ್ತಿದ್ದು, ಇಲ್ಲಿನ ಮೂರೇಕ್ರೆ ನಿವಾಸಿಗಳಿಗೆ ರಾಮನದಿ ಅಕ್ಷರಶಃ ಜಲದಿಗ್ಬಂಧನ ವಿಧಿಸಿದೆ. ಶ್ರೀಮಂಗಲ–ಹರಿಹರ ಗ್ರಾಮವನ್ನು ಸಂಪರ್ಕಿಸುವ ಸೇತುವೆ ಮೇಲೆ ಪ್ರವಾಹ ನೀರು ಹರಿಯುತ್ತಿದ್ದು ರಸ್ತೆ ಸಂಚಾರ ಬಂದ್ ಆಗಿದೆ. ಹರಿಹರ–ಬಲ್ಯಮಂಡೂರು ರಸ್ತೆಯ ಮೇಲೂ ಕೊಲ್ಲಿತೋಡ್ ತೊರೆಯ ಪ್ರವಾಹ ನೀರು ಹರಿಯುತ್ತಿದೆ. ಕಾನೂರು ಬಳಿ ಲಕ್ಷ್ಮಣ ತೀರ್ಥ ನದಿಯಲ್ಲೂ ಪ್ರವಾಹ ಉಕ್ಕೇರಿದ್ದು, ತಗ್ಗು ಪ್ರದೇಶಗಳ ಭತ್ತದ ಗದ್ದೆಗಳಿಗೆ ನೀರು ನುಗ್ಗಿದ್ದು, ಸಮುದ್ರದಂತೆ ಕಂಡು ಬರುತ್ತಿದೆ.

ಮರ ಬಿದ್ದು ವಿದ್ಯುತ್ ವ್ಯತ್ಯಯ: ಪೊನ್ನಂಪೇಟೆ ತಾಲೂಕಿನ ಪೂಕೊಳ–ಬಿರುನಾಣಿ, ಗೋಣಿಕೊಪ್ಪ–ಬಿರುನಾಣಿ, ಸೋಮವಾರಪೇಟೆ ತಾಲೂಕಿನ ಐಗೂರು–ಹೊಸತೋಟ, ಮಡಿಕೇರಿ ತಾಲೂಕಿನ ಕಾಟಕೇರಿ–ಅಪ್ಪಂಗಳ ಸಂಪರ್ಕ ರಸ್ತೆಯಲ್ಲಿ ಬೃಹತ್ ಗಾತ್ರದ ಮರ ಮುರಿದು ಬಿದ್ದು ಕೆಲಕಾಲ ಸಂಚಾರ ಸ್ಥಗಿತವಾಗಿತ್ತು. ಮರ ತೆರವು ಕಾರ್ಯಾಚರಣೆ ನಡೆಸುವ ಮೂಲಕ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ. ಆದರೆ ಮರ ಬೀಳುವ ಸಂದರ್ಭ ವಿದ್ಯುತ್ ಕಂಬಗಳು ಮತ್ತು ತಂತಿಗಳಿಗೆ ಹಾನಿಯಾಗಿದ್ದು, ಭಾರಿ ಗಾಳಿಯ ನಡುವೆ ದುರಸ್ತಿ ಕಾರ್ಯವನ್ನೂ ನಡೆಸಲಾಗುತ್ತಿದೆ. ಕಾಫಿ ತೋಟಗಳ ಸಹಿತ ಅರಣ್ಯ ಭಾಗಗಳಲ್ಲೂ ಮರ ಬಿದ್ದು, ವಿದ್ಯುತ್ ಕಂಬಗಳಿಗೆ ಹಾನಿಯಾಗಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗಗಳಿಗೆ ನಿರಂತರ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವ ಬಗ್ಗೆ ವರದಿಯಾಗಿದೆ. ಮಡಿಕೇರಿ ತಾಲೂಕಿನ ಜೋಡುಪಾಲ ವ್ಯಾಪ್ತಿಯ ಉದ್ದಮ ಮೊಟ್ಟೆ ತೆರಳುವ ಸಂಪರ್ಕ ಸೇತುವೆ ಮೇಲೆ ಮರ ಬಿದ್ದಿದ್ದು, ಸೇತುವೆಯ ರೇಲಿಂಗ್‌ಗಳಿಗೆ ಹಾನಿಯಾಗಿದೆ. ಭಾರಿ ಮಳೆಯಿಂದ ಮೇಕೇರಿ ಸಮೀಪದ ಬಿಳಿಗೇರಿ–ಹಾಕತ್ತೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾಂಕ್ರಿಟ್ ರಸ್ತೆಯ ತಡೆಗೋಡೆ ಕುಸಿದು ಬಿದ್ದಿದ್ದು, ಕಾಂಕ್ರಿಟ್ ರಸ್ತೆಗೆ ಹಾನಿಯಾಗಿದೆ. ಸ್ಥಳದಲ್ಲಿ ಎಂ ಸ್ಯಾಂಡ್ ಮೂಟೆಗಳನ್ನು ಅಳವಡಿಸುವ ಮೂಲಕ ರಸ್ತೆಗೆ ಮತ್ತಷ್ಟು ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಮಳೆ, ಪ್ರವಾಹದಿಂದ ಮನೆಗಳಿಗೆ ಹಾನಿ; ಹಲವರಿಗೆ ಗಾಯ




ನಾಪೋಕ್ಲು ಬೇತು ಗ್ರಾಮದ ಕಾರೆಕ್ಕಾಡು ನಿವಾಸಿ ಬುಶ್ರ ಅಬ್ದುಲ್ಲಾ ಎಂಬವರ ಮನೆ ಮಳೆಯಿಂದ ಹಾನಿಗೀಡಾಗಿದೆ. ಗೋಡೆ ಕುಸಿಯುವ ಸಂದರ್ಭ ಅವರ ಪುತ್ರಿಯ ಕೈಗೆ ಇಟ್ಟಿಗೆ ಬಿದ್ದು ಗಾಯಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಗೊಂಡ ಬಾಲಕಿಯನ್ನು ನಾಪೋಕ್ಲುವಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ. ಪಾಲೂರು ಕೊಟ್ಟಮುಡಿ ಗ್ರಾಮದ ನಿವಾಸಿ ರಶೀದ್ ಎಂಬುವ ಮನೆಯ ಅಡುಗೆ ಮನೆ ಕೋಣೆ ಭಾರಿ ಗಾಳಿ ಮಳೆಗೆ ಕುಸಿದು ಬಿದ್ದು ಹಾನಿ ಸಂಭವಿಸಿದೆ. ನಾಪೋಕ್ಲು ಹಳೇ ತಾಲೂಕು ನಿವಾಸಿ ಎಂ.ಎಚ್.ಅಬೂಬಕ್ಕರ್ ಎಂಬವರ ಹೋಟೆಲ್ ಮಳಿಗೆಯ ಹಿಂಬದಿ ಗೋಡೆ ಭಾರಿ ಗಾಳಿ ಮಳೆಗೆ ಕುಸಿದು ಬಿದ್ದು, ಅಪಾರ ನಷ್ಟ ಸಂಭವಿಸಿದೆ.

ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡ ಗ್ರಾಮದ ನಿವಾಸಿ ಉಲ್ಲಾಸ್ ಎಂಬವು ವಾಸದ ಮನೆಯ ಚಾವಣಿ ಹಾಗೂ ಮನೆಯ ಗೋಡೆ ಗಾಳಿ ಮಳೆಯಿಂದ ಕುಸಿದು ನಷ್ಟ ಸಂಭವಿಸಿದೆ.

ವಿರಾಜಪೇಟೆ ತಾಲೂಕಿನ ಬಿಳುಗುಂದ ನಿವಾಸಿ ಕೆ.ಎಂ.ಕುಶಾಲಪ್ಪ ಎಂಬವರ ಮನೆಯ ಮೇಲೆ ಮರ ಬಿದ್ದಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಮನೆಯ ಚಾವಣಿಗೆ ತೀವ್ರ ಹಾನಿಯಾಗಿದೆ. ಮಡಿಕೇರಿ ತಾಲೂಕಿನ ಕರ್ಣಂಗೇರಿ ಗ್ರಾಮದ ಹೇಮಾವತಿ ನಾಗರಾಜು ಎಂಬವರ ಮನೆಯ ಮೇಲೆ ಮರ ಬಿದ್ದು ಮನೆ ಸಂಪೂರ್ಣ ನಾಶವಾಗಿದೆ. ಮನೆ ಕಳೆದುಕೊಂಡ ಕುಟುಂಬಕ್ಕೆ ತಹಶೀಲ್ದಾರ್ ಪ್ರವೀಣ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಪಡಿತರ ಕಿಟ್‌ಗಳನ್ನು ಹಸ್ತಾಂತರಿಸಿದರು. ಸೋಮವಾರಪೇಟೆ ತಾಲೂಕಿನ ರೇಂಜರ್ ಬ್ಲಾಕ್ ಹರೀಶ್ ಮಾಣಿಕ್ಯ ಎಂಬವರ ವಾಸದ ಮನೆ ಮಳೆಯಿಂದ ಹಾನಿಗೀಡಾಗಿದೆ.



ಪೊನ್ನಂಪೇಟೆ ಬಳಿ ಭಾರಿ ಗಾತ್ರದ ಮರ ವಿದ್ಯುತ್ ಕಂಬದ ಮೇಲೆ ಬಿದ್ದಿರುವುದು.



84.95 ಮಿ.ಮೀ ಮಳೆ

ಕಳೆದ 24 ಗಂಟೆ ಅವಧಿಯಲ್ಲಿ ಕೊಡಗು ಜಿಲ್ಲೆಗೆ 84.95 ಮಿ.ಮೀ ಸರಾಸರಿ ಮಳೆಯಾಗಿದೆ. ಮಡಿಕೇರಿ ತಾಲೂಕಿನ ಭಾಗಮಂಡಲ ವ್ಯಾಪ್ತಿಯಲ್ಲಿ 111.2 ಮಿ.ಮೀ, ನಾಪೋಕ್ಲು ಭಾಗದಲ್ಲಿ 111.4, ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ 188, ಶನಿವಾರಸಂತೆ 109, ಪೊನ್ನಂಪೇಟೆ ತಾಲೂಕಿನ ಹುದಿಕೇರಿ ವ್ಯಾಪ್ತಿಯಲ್ಲಿ 130.8, ಶ್ರೀಮಂಗಲ ಗ್ರಾಮದಲ್ಲಿ 102 ಮಿ.ಮೀ ಮಳೆಯಾಗಿದೆ.

ರಾಜ್ಯ ವನ್ಯಜೀವಿ ಮಂಡಳಿಗೆ ಸಂಕೇತ್ ಪೂವಯ್ಯ ಸದಸ್ಯ



ಮಡಿಕೇರಿ,ಜು.27– ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರಾಗಿ ಕೊಡಗು ಜಿಲ್ಲೆಯ ಸಮಾಜ ಸೇವಕರಾದ ಮೇರಿಯಂಡ ಸಂಕೇತ್ ಪೂವಯ್ಯ ನೇಮಕಗೊಂಡಿದ್ದಾರೆ. ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವ, ಅರಣ್ಯ ಸಚಿವರು ಉಪಾಧ್ಯಕ್ಷರಾಗಿರುವ ಮಂಡಳಿಯ 3 ವರ್ಷದ ಅವಧಿಗೆ ಸದಸ್ಯರಾಗಿ ಜಿಲ್ಲೆಯಿಂದ ಸಂಕೇತ್ ಪೂವಯ್ಯ ಅವರನ್ನು ನೇಮಕ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಸಂಕೇತ್ ಪೂವಯ್ಯನವರು ಪ್ರಸ್ತುತ ಕೆಪಿಸಿಸಿ ವಕ್ತಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಾನವ ಮತ್ತು ವನ್ಯಜೀವಿ ನಡುವಿನ ಸಂಘರ್ಷ ತಪ್ಪಿಸಲು ನಿರಂತರ ಹೋರಾಟ ನಡೆಸುತ್ತಿರುವ ಸಂಕೇತ್ ಪೂವಯ್ಯನವರು ವನ್ಯಜೀವಿ ಮತ್ತು ಅರಣ್ಯ ಸಂಪತ್ತಿನ ಮೇಲೆ ಇಟ್ಟಿರುವ ಅಪಾರ ಕಾಳಜಿಯನ್ನು ಗುರುತಿಸಿ ಸರ್ಕಾರ ಈ ನೇಮಕ ಮಾಡಿದೆ. ಈ ಸಂಬಂಧ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಕೇತ ಪೂವಯ್ಯನವರು, ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಂಡಳಿ ಅಧ್ಯಕ್ಷರಾಗಿರುವ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು.

ಆ.20, ಶ್ರೀ ನಾರಾಯಣ ಗುರು ಜಯಂತಿ ಆಚರಣೆ



ವಿರಾಜಪೇಟೆ, ಜು.27– ವಿರಾಜಪೇಟೆ ತಾಲೂಕು ಬಿಲ್ಲವ ಸೇವಾ ಸಂಘದ ವತಿಯಿಂದ ಆ.20 ರಂದು ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಬ್ಬಂಟಿಯಲ್ಲಿರುವ ನಾರಾಯಣ ಗುರು ಮಂದಿರದಲ್ಲಿ 'ಶ್ರೀ ನಾರಾಯಣ ಗುರು ಜಯಂತಿ' ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಲ್ಲವ ಸೇವಾ ಸಂಘದ ಅಧ್ಯಕ್ಷ ಬಿ.ಎಂ. ಗಣೇಶ್ ತಿಳಿಸಿದರು.

ತಾಲೂಕು ಬಿಲ್ಲವ ಸಂಘದ ವತಿಯಿಂದ ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಲ್ಲವ ಜನಾಂಗದ ಏಳಿಗೆ ಮತ್ತು ಶ್ರೇಯೋಭಿವೃದ್ಧಿಗಾಗಿ ಪ್ರತಿ ವರ್ಷದಂತೆ ಈ ವರ್ಷವು ಕೂಡ ಶ್ರೀನಾರಾಯಣ ಗುರು ಜಯಂತಿಯ ಅಂಗವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಮೇಲ್ಪಟ್ಟು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಅಲ್ಲದೆ ಸಂಸತ್ತಿಗೆ ನೂತನವಾಗಿ ಆಯ್ಕೆಯಾದ ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ಬಿಲ್ಲವ ಸೇವಾ ಸಂಘದ ಉಪಾಧ್ಯಕ್ಷ ಬಿ.ಎಸ್. ಪುರುಷೋತಮ್, ಖಜಾಂಚಿ ಬಿ.ಎಂ. ಸತೀಶ್ ಪೂಜಾರಿ, ಕ್ರೀಡಾ ಸಮಿತಿ ಸಂಚಾಲಕ ಬಿ.ಜಿ.ನಾರಾಯಣ್, ಸದಸ್ಯರಾದ ಬಿ.ಎಸ್.ಕಿಶೋರ್, ಬಿ.ಎಲ್. ಹರೀಶ್ ಉಪಸ್ಥಿತರಿದ್ದರು.

ಕಾಡಾನೆ ದಾಳಿ: ವ್ಯಕ್ತಿಗೆ ಗಾಯ

ಗೋಣಿಕೊಪ್ಪ, ಜು.27– ಬಾಳಾಜಿ ಗ್ರಾಮದ ಜಮ್ಮಡ ಮೋಹನ್ ಎಂಬುವರ ತೋಟದಲ್ಲಿ ತೋಟ ನಿರ್ವಾಹಕ ಕಿರಿಯಮಾಡ ಹರೀಶ್ ಎಂಬವರ ಮೇಲೆ ಇಂದು ಸಂಜೆ ಕಾಡಾನೆಯೊಂದು ದಾಳಿ ನಡೆಸಿದೆ. ಕತ್ತಿನ ಭಾಗಕ್ಕೆ ಪೆಟ್ಟು ಬಿದ್ದಿದ್ದು, ಪ್ರಾಣಾಪಾಯದಿಂದ ಪಾರಾಗಿ ಗೋಣಿಕೊಪ್ಪ ಲೋಪಾಮುದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರಕರಣ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಸ್ಥಳದಲ್ಲಿ ಗೋಣಿಕೊಪ್ಪ ಪೊಲೀಸ್ ಠಾಣಾ ಅಧಿಕಾರಿಗಳು, ಪೊನ್ನಂಪೇಟೆ ಅರಣ್ಯ ಇಲಾಖೆಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸಿ ನಂತರ ಆಸ್ಪತ್ರೆಗೆ ತೆರಳಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೆಆರ್‌ಎಸ್, ಕಬಿನಿಯಿಂದ ನೀರು ಬಿಡುಗಡೆ; ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು

ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಭೇಟಿ, ಪರಿಶೀಲನೆ

ಚಾಮರಾಜನಗರ, ಜು.27– ಜಿಲ್ಲೆಯ ಕಾವೇರಿ ನದಿಯ ತಗ್ಗು ಪ್ರದೇಶಗಳಲ್ಲಿ ಬರುವ ಕೊಳ್ಳೇಗಾಲ ತಾಲೂಕಿನ ಪ್ರವಾಹ ಸಮಸ್ಯೆಯ ವಿವಿಧ ಗ್ರಾಮಗಳಿಗೆ ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ಕಾವೇರಿ ನದಿಗೆ ನೀರು ಬಿಡಲಾಗುತ್ತಿರುವುದರಿಂದ ನದಿಯ ತಗ್ಗು ಪ್ರದೇಶಗಳಲ್ಲಿ ಬರುವ ಕೊಳ್ಳೇಗಾಲ ತಾಲೂಕಿನ ದಾಸನಪುರ, ಹಳೇ ಹಂಪಾಪುರ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ಕೊಟ್ಟು ಪರಿಸ್ಥಿತಿ ಅವಲೋಕಿಸಿದರು.

ನದಿಯ ತೀರ ಹಾಗೂ ಗ್ರಾಮಗಳಿಗೆ ಭೇಟಿ ನೀಡಿ ವೀಕ್ಷಣೆ ಮಾಡಿದ ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಗ್ರಾಮಸ್ಥರ ಅಹವಾಲುಗಳನ್ನು ಆಲಿಸಿದರು. ಈ ಹಿಂದೆ ಪ್ರವಾಹ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳು ಹಾಗೂ ಕೈಗೊಂಡ ಪರಿಹಾರ ಕ್ರಮಗಳ ಕುರಿತು ಚರ್ಚಿಸಿದರು. ಇದೇ ವೇಳೆ ಗ್ರಾಮಸ್ಥರು ಮಾತನಾಡಿ ಪ್ರವಾಹ ಸಂದರ್ಭಗಳಲ್ಲಿ ನಿರಂತರವಾಗಿ ತೊಂದರೆಗಳನ್ನು ಎದುರಿಸುತ್ತಿದ್ದೇವೆ. ಬೆಳೆ ನಷ್ಟವಾಗುತ್ತಿದೆ. ಮನೆಗಳಿಗೆ ನೀರು ನುಗ್ಗುವುದರಿಂದ ಹಾನಿಯಾಗುತ್ತಿದೆ. ಪ್ರವಾಹ ನಿಯಂತ್ರಿಸಲು ತಡೆಗೋಡೆ ನಿರ್ಮಾಣ ಮಾಡಬೇಕಿದೆ ಇದರಿಂದ ಪ್ರವಾಹ ಪೀಡಿತ ಗ್ರಾಮಗಳ ಸಮಸ್ಯೆ ಪರಿಹಾರವಾಗಲಿದೆ. ಬಹುಕಾಲದ ಬೇಡಿಕೆಯಾಗಿರುವ ತಡೆಗೋಡೆ ನಿರ್ಮಾಣ ಮಾಡಿಕೊಡಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳಿಂದ ತಡೆಗೋಡೆ ನಿರ್ಮಾಣಕ್ಕೆ 150 ಕೋಟಿ ರೂ. ವೆಚ್ಚದಲ್ಲಿ ತಯಾರಿಸಲಾಗಿರುವ ಅಂದಾಜುಪಟ್ಟಿಯ ವಿವರ ಪಡೆದ ಸಚಿವರು ಹಂತ ಹಂತವಾಗಿ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸುವುದಾಗಿ ತಿಳಿಸಿದರು.

ನೀರು ಕಡಿಮೆಯಾದ ಕೂಡಲೇ ಹಾನಿಯಾಗಿರುವ ಬೆಳೆಗೆ ಪರಿಹಾರ ನೀಡಲು ಸಮೀಕ್ಷೆ ನಡೆಸಲು ಅಧಿಕಾರಿಗಳಿಗೆ ಸೂಚಿಸುವುದಾಗಿ ಗ್ರಾಮಸ್ಥರಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು. ಪ್ರವಾಹ ಪೀಡಿತ ಗ್ರಾಮಗಳಿಗೆ ನೆರವಾಗಲು ಎಲ್ಲಾ ಅಗತ್ಯ ಸಿದ್ದತೆ ಮಾಡಲಾಗಿದೆ. ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಅಧಿಕಾರಿಗಳ ತಂಡ ಸನ್ನದ್ಧರಾಗಿದ್ದು, ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಸ್ಥಳೀಯ ಆಡಳಿತ, ಅಧಿಕಾರಿಗಳು ನೀಡುವ ಸಲಹೆ, ಸೂಚನೆ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕೆಂದು ಸಚಿವರು ತಿಳಿಸಿದರು.



ನೀರು ನುಗ್ಗಿರುವ ಕೊಳ್ಳೇಗಾಲ ತಾಲೂಕಿನ ಗ್ರಾಮಗಳಿಗೆ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಭೇಟಿ ನೀಡಿ, ಪರಿಶೀಲಿಸಿದರು.

ಇದೇ ವೇಳೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ ಈ ಹಿಂದೆಯು ಪ್ರವಾಹ ಸಮಸ್ಯೆ ಆಗಿತ್ತು. ಪ್ರವಾಹ ಬಾಧಿತ ಗ್ರಾಮಗಳಿಗೆ ಶಾಶ್ವತವಾಗಿ ಪರಿಹಾರ ಕಲ್ಪಿಸಲು ಜಲಸಂಪನ್ಮೂಲ ಸಚಿವರು ಹಾಗೂ ಉಪಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದ್ದು, 150 ಕೋಟಿ ರೂ. ಅಂದಾಜು ವೆಚ್ಚದಲ್ಲಿ ತಡೆಗೋಡೆ ನಿರ್ಮಾಣವನ್ನು ಹಂತಹಂತವಾಗಿ ಕೈಗೊಳ್ಳಲು ಭರವಸೆ ನೀಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಸಹ ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದರು.

ಶಾಸಕರಾದ ಎಂ.ಆರ್. ಮಂಜುನಾಥ್, ಉಗ್ರಾಣ ನಿಗಮದ ಅಧ್ಯಕ್ಷರಾದ ಎಸ್. ಜಯಣ್ಣ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಉಪವಿಭಾಗಾಧಿಕಾರಿ ಮಹೇಶ್, ಇನ್ನಿತರ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

ಬೇಗೂರಲ್ಲಿ ಅದ್ದೂರಿ ಹನುಮ ಜಯಂತಿ



ಬೇಗೂರು ಗ್ರಾಮದಲ್ಲಿ ಹನುಮ ಜಯಂತಿಯನ್ನು ಸಡಗರದಿಂದ ಆಚರಿಸಿದರು.

ಬೇಗೂರು: ಬೇಗೂರು ಗ್ರಾಮದಲ್ಲಿ ಹನುಮ ಜಯಂತಿಯನ್ನು ಶನಿವಾರ ನೂರಾರು ಯುವಕರು ಸಂಭ್ರಮ ಹಾಗೂ ಸಡಗರದಿಂದ ಆಚರಿಸಿದರು.

ಬೇಗೂರು ಹನುಮ ಸೇವಾ ಸಮಿತಿ ನೇತೃತ್ವದಲ್ಲಿ ಬೇಗೂರು–ಹಾಲಹಳ್ಳಿ ರಸ್ತೆಯ ಬಂಡಿಗೆರೆ ಮಹದೇಶ್ವರಸ್ವಾಮಿ ಶನಿವಾರ ಬೆಳಗ್ಗೆ ಹನುಮ ಹಾಗೂ ರಾಮನ ಆಳೆತ್ತರದ ಮೂರ್ತಿಗೆ ಪೂಜೆ ಸಲ್ಲಿಸಿದರು. ಶನಿವಾರ ಮಧ್ಯಾಹ್ನ 3 ಗಂಟೆ ಬಳಿಯ ಬೇಗೂರು ಪೊಲೀಸರ ಸರ್ಪಗಾವಲಿನಲ್ಲಿ ರಾಮನ ಜೆಸಿಬಿಯಲ್ಲಿ, ಹನುಮನ ಟ್ರ್ಯಾಕ್ಟರ್‌ನಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಗ್ರಾಮದ ಯುವಕರು ಮೆರವಣಿಗೆಯಲ್ಲಿ ವೀರಭದ್ರ ಕುಣಿತ, ಮಂಗಳವಾದ್ಯದೊಂದಿಗೆ ಯುವಕರು ಮೆರವಣಿಗೆ ಯುದ್ದಕ್ಕೂ ಕುಣಿದು ಕುಪ್ಪಳಿಸಿ,ಪಟಾಕಿ ಸಿಡಿಸಿದರು. ಡಿಎಸ್‌ಪಿ ಲಕ್ಷ್ಮಯ್ಯ ನೇತೃತ್ವದಲ್ಲಿ ಗುಂಡ್ಲುಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಪರಶಿವಮೂರ್ತಿ,ಸಬ್ ಇನ್ಸ್‌ಪೆಕ್ಟರ್ ಚರಣ್‌ಗೌಡ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೆರವಣಿಗೆ ನಡೆಯಿತು.

ಅಟ್ಟುಗುಳಿಪುರ ಗ್ರಾಪಂ ಉಪಾಧ್ಯಕ್ಷರಾಗಿ ಸೋಮಣ್ಣ ಅವಿರೋಧ ಆಯ್ಕೆ



ಅಟ್ಟುಗುಳಿಪುರ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷರಾಗಿ ಸೋಮಣ್ಣ ಅವಿರೋಧವಾಗಿ ಆಯ್ಕೆಯಾದರು.

ಚಾಮರಾಜನಗರ, ಜು.27– ತಾಲೂಕಿನ ಅಟ್ಟುಗುಳಿಪುರ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷರಾಗಿ ಸೋಮಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಬಸವಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸೋಮಣ್ಣ ಒಬ್ಬರೇ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಮೀನುಗಾರಿಕೆ ಇಲಾಖೆಯ ಜೆ.ಎಂ. ಪ್ರಶಾಂತ್ ಉಪಾಧ್ಯಕ್ಷರ ಆಯ್ಕೆಯನ್ನು ಅಧಿಕೃತವಾಗಿ ಘೋಷಣೆ ಮಾಡಿದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ಶಿವಮ್ಮ, ಗ್ರಾಪಂ ಸದಸ್ಯರಾದ ಸಣ್ಣಕ್ಕಿಗೌಡ, ಮಹದೇವಮ್ಮ, ಎ.ಮೂರ್ತಿ, ಹೋಮಾ, ಜಿ.ಶೈಲಜಾ ಗೋವಿಂದರಾಜು, ಎಸ್.ಪ್ರಶಾಂತ್, ಎಂ.ರೇಖಾವತಿ, ಎಸ್.ಮರಿಸ್ವಾಮಿ, ಬಸವಣ್ಣ, ಎಸ್.ಎಂ. ಮಂಜು, ಎಚ್.ಎನ್.ಕೌಶಲ್ಯ, ಆರ್. ರಾಜೇಶ್ವರಿ, ಸಿ.ವಿಮಲ ಇತರರು ಇದ್ದರು.

ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿ : ನೂತನ ಉಪಾಧ್ಯಕ್ಷ ಸೋಮಣ್ಣ ಅವರನ್ನು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ಆರ್. ಮಹದೇವ್, ಬಿ.ಕೆ.ರವಿಕುಮಾರ್ ಅವರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಲಕ್ಷ್ಮಿನರಸಿಂಹಮೂರ್ತಿ, ಶಿವಕುಮಾರ್, ನೀರು ಬಳಕೆದಾರ ಸಹಕಾರ ಸಂಘದ ಅಧ್ಯಕ್ಷ ಗೋವಿಂದರಾಜು, ಗ್ರಾ.ಪಂ. ಮಾಜಿ ಸದಸ್ಯ ಎಚ್.ಬಸವರಾಜು, ಎಸ್.ಆರ್. ಗೋವಿಂದರಾಜು, ನಂಜುಂಡಸ್ವಾಮಿ, ಸಿದ್ದರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಚನ್ನಂಜಯ್ಯ, ದೊಡ್ಡಯ್ಯ ಮೊದಲಾದವರು ಇದ್ದರು.

ಯಳಂದೂರು : 18ನೇ ಕುಡಿತದ ಚಟ ಬಿಡಿಸುವ ಉಚಿತ ಶಿಬಿರ

ಯಳಂದೂರು, ಜು.27– ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ 18ನೇ ಕುಡಿತದ ಚಟ ಬಿಡಿಸುವ ಉಚಿತ ಶಿಬಿರವು ನಡೆಯಿತು.

ಈ ಸಂದರ್ಭದಲ್ಲಿ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ದುಗ್ಗಹಟ್ಟಿ ರಾಜೇಶ್ ಮಾತನಾಡಿ, ಮದ್ಯವ್ಯಸನಿಗಳನ್ನು ಕುಡಿತದ ಚಟದಿಂದ ಮುಕ್ತಗೊಳಿಸಲು ಕಾರ್ಯಪ್ರವೃತ್ತರಾಗಿರುವ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಇದುವರೆಗೂ 17 ಶಿಬಿರಗಳನ್ನು ಆಯೋಜಿಸಿ1500ಕ್ಕೂ ಹೆಚ್ಚು ಮಂದಿ ಈ ಶಿಬಿರಗಳ ಪ್ರಯೋಜನಗಳನ್ನು ಪಡೆದಿದ್ದಾರೆ. ಮದ್ಯವ್ಯಸನಿಗಳನ್ನು ತಡೆಗಟ್ಟುವುದರಿಂದ ಸಮಾಜದಲ್ಲಿ ನಡೆಯುವ ಕೌಟುಂಬಿಕ ಕಲಹಗಳನ್ನು ತಡೆಗಟ್ಟಿ, ಸಮಸಮಾಜವನ್ನು ನಿರ್ಮಿಸಬಹುದು. ಈ ನಿಟ್ಟಿನಲ್ಲಿ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಮುಖ್ಯಅತಿಥಿಗಳಾಗಿದ್ದ ವೃತ್ತ ನಿರೀಕ್ಷಕ ಶ್ರೀಕಾಂತ ಮಾತನಾಡಿ, ಮದ್ಯವ್ಯಸನಿಗಳು ಹೆಚ್ಚಾದಷ್ಟು ಸಮಾಜದಲ್ಲಿ ಹಲವಾರು ಬಗೆಯ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಮಾಜಕಂಟಕರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಸುತ್ತೂರು ಮಠವು ಇಂತಹ ಉಚಿತ ಕುಡಿತದ ಚಟ ಬಿಡಿಸುವ ಶಿಬಿರಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯವೆಂದರು.

ಈ ಸಂದರ್ಭದಲ್ಲಿ ಕಾರಾಪುರ ವಿರಕ್ತ ಮಠದ ಬಸವರಾಜಸ್ವಾಮಿ, ಕೆಸ್ತೂರು ಮಠದ ತೋಂಟದಾರ್ಯಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ತಾಲೂಕು ಅಧ್ಯಕ್ಷ ವೀರಭದ್ರಸ್ವಾಮಿ, ಶಿಬಿರದ ಸಂಚಾಲಕ ಸೋಮಶೇಖರ್, ಶಿಬಿರಾಧಿಕಾರಿ ಮನೋಹರ್, ಹೆಚ್ ಜಿ ಸಂತೋಷ್, ಪ್ರಭು ಶಂಕರ್, ರೋಟರಿ ಪ್ರಕಾಶ್, ಗೌಡಳ್ಳಿ ಬಸವಣ್ಣ, ಭೀಮಪ್ಪ, ಜೆ.ಶ್ರೀನಿವಾಸ್, ವೈ.ಎಂ. ನಾಗಣ್ಣ, ಕಟ್ನವಾಡಿ ಸಿದ್ದರಾಜು, ವೈ ಆರ್ ಉಮೇಶ್ ಸೇರಿದಂತೆ ಇತರರು ಹಾಜರಿದ್ದರು.

ಆಲೂರು ನಾಗರಾಜು ನಿಧನ



ಚಾಮರಾಜನಗರ, ಜು.27– ಆಲೂರು ಗ್ರಾಮದ ನಿವಾಸಿ ಹಿರಿಯ ರಂಗಕರ್ಮಿ ಹಾಗೂ ಚಲನಚಿತ್ರ ನಟ ಆಲೂರು ನಾಗರಾಜು(84) ಶನಿವಾರ ಬೆಳಿಗ್ಗೆ ನಿಧನರಾದರು.

ಮೃತರು ಅಂದಿನ ರಂಗಭೂಮಿಯ ಹಲವಾರು ಕಂಪನಿಗಳಲ್ಲಿ ಅಭಿನಯಿಸಿದ್ದರು. ಎಚ್ಚಮ ನಾಯಕ ನಾಟಕದಲ್ಲಿ ಎಚ್ಚಮ ನಾಯಕ ಪಾತ್ರದಲ್ಲಿ ಹೆಸರುಗಳಿಸಿದ್ದರು. ಇವರು ನಾಟಕ ಕಂಪನಿ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಮೃತರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನಡೆಯಿತು.

ರಾಮಸಮುದ್ರ ಸಿದ್ದಮ್ಮ



ಚಾಮರಾಜನಗರ: ರಾಮಸಮುದ್ರ ಬಡಾವಣೆಯ ದೊಡ್ಡ ಬೀದಿಯ ನಿವಾಸಿ ಸಿದ್ದಮ್ಮ(85) ಶನಿವಾರ ಮಧ್ಯಾಹ್ನ ನಿಧನರಾದರು.

ಅವರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮಾಜಿ ನಗರಸಭಾ ಸದಸ್ಯರು ಹಾಗೂ ಯಜಮಾನ ಬಿ.ನಾಗರಾಜು ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಶಾಲಿನಿ




ಬೇಗೂರು, ಜು.27–ಬೇಗೂರಿನ ಅರಸ್ ಕಾಂಪ್ಲೆಕ್ಸ್ ಮಾಲೀಕ ರಾಜೇಶ್ ಅರಸ್ ಅವರ ತಾಯಿ ಶಾಲಿನಿ(74) ಅವರು ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿರುವ ನಿವಾಸದಲ್ಲಿ ಇಂದು ನಿಧನರಾದರು.

ಮೃತರು ರಾಜೇಶ್ ಅರಸ್ ಸೇರಿದಂತೆ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅರಸು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ಗಣೇಶ್‌ಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ಜುಲೈ 29 ಕನ್ನಡ ಸಾಹಿತ್ಯ ದಿಗ್ಗಜ ಟಿ.ಪಿ.ಕೈಲಾಸಂ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಕನ್ನಡಕ್ಕೊಬ್ಬನೇ ಕೈಲಾಸಂ



ಕನ್ನಡಕ್ಕೊಬ್ಬನೇ ಕೈಲಾಸಂ ಎನಿಸಿ, ಕನ್ನಡ ನಾಡಿನಲ್ಲಿ ಮೆರೆದ ಟಿ.ಪಿ.ಕೈಲಾಸಂ ಕೈಲಾಸವಾಸಿಯಾಗಿ (ನಿಧನ 24.11.1946) ಮುಕ್ಕಾಲು ಶತಮಾನವೇ ಕಳೆದಿದೆ. ಆದರೂ ಇನ್ನೊಬ್ಬ ಕೈಲಾಸಂರನ್ನು ಕನ್ನಡ ನಾಡು ಇನ್ನೂ ಕಂಡಿಲ್ಲ, ಎಂದೆಂದಿಗೂ ಕನ್ನಡಕ್ಕೊಬ್ಬನೇ ಕೈಲಾಸಂ. One and only kailasam for kannada! ಕೈಲಾಸಂ ಎಂಬುದು ಕೇವಲ ಒಂದು ಹೆಸರಲ್ಲ. ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ತಮ್ಮ ದೈತ್ಯ ಪ್ರತಿಭೆಯ ಪ್ರಭೆಯಿಂದ ಕನ್ನಡ ನಾಡನ್ನು ಬೆಳಗಿದ ಪ್ರಜ್ವಲ ಬೆಳಕವರು. ತಮ್ಮ ಅಪ್ರತಿಮ ಪ್ರತಿಭೆಯಷ್ಟೇ ತಮ್ಮ ವಿಲಕ್ಷಣ ನಡವಳಿಕೆಯಿಂದಲೂ ಪ್ರಸಿದ್ಧರವರು. ಅಂದಹಾಗೆ ಅವರ ಪೂರ್ಣ ಹೆಸರು ತ್ಯಾಗರಾಜ ಪರಮಶಿವ ಅಯ್ಯರ್ ಕೈಲಾಸಂ.

ಬದುಕಿದ್ದಾಗಲೇ ದಂತ ಕಥೆಯಾಗಿದ್ದ ಕರ್ನಾಟಕ ರತ್ನ ವರನಟ ಡಾ.ರಾಜ್‌ಕುಮಾರ್ ಅವರು ತಮ್ಮ 'ಆಕಸ್ಮಿಕ' ಚಿತ್ರದಲ್ಲಿ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು" ಎಂದು ಕನ್ನಡ ನಾಡಿನ ಹಿರಿಮೆಯನ್ನು ಸಾರುತ್ತಾ "ಕೈಲಾಸಂ ಕಂಡ ನಮಗೆ ಕೈಲಾಸ ಯಾಕೆ ಬೇಕು?" ಎಂದು ಹಾಡುತ್ತಾರೆ. ಇದೊಂದು ಸಾಲು ಸಾಕು ಕೈಲಾಸಂ ಏನೆಂಬುದಕ್ಕೆ. ಹಂಸಲೇಖಾರಂಥ ಚಲನ ಚಿತ್ರ ಸಾಹಿತಿಯ ಲೇಖನಿಯ ಕಣ್ಣಲ್ಲಿ ಕೈಲಾಸಂ ಅವರು ಕೈಲಾಸಕ್ಕಿಂತಲೂ ಮಿಗಿಲಾಗಿ ಕಂಡಿದ್ದಾರೆಂದರೆ, ಡಾ.ರಾಜ್‌ಕುಮಾರ್‌ರಂಥ ಮಹಾನ್ ಕಲಾವಿದರ ನಾಲಿಗೆಯಲ್ಲಿ ಕೈಲಾಸಂ ಅವರು ಕೈಲಾಸವಾಗಿ ನಲಿದಿದ್ದಾರೆಂದರೆ ನಿಜಕ್ಕೂ ಅವರು ಕನ್ನಡದ ಕೈಲಾಸವೇ ಸರಿ. ಏಕೆಂದರೆ ಕನ್ನಡವನ್ನು, ಕರ್ನಾಟಕವನ್ನು ಕಟ್ಟುವಲ್ಲಿ ಕೈಲಾಸಂರವರ ಕೊಡುಗೆ ಅಮೋಘವಾದದ್ದು, ಮಹತ್ತರವಾದದ್ದು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗೆ ಕಳೆದ 20ನೇ ಶತಮಾನದ ಕೊಡುಗೆ ಅಪಾರ. ಅದರಲ್ಲೂ ವಿಶೇಷವಾಗಿ ಹವ್ಯಾಸಿ ರಂಗಭೂಮಿಗೆ ವೇಗ ಸಿಕ್ಕಿದ್ದು ಇಲ್ಲಿಯೇ.ಅನೇಕ ಮಂದಿ ಶ್ರೇಷ್ಠ ನಾಟಕಕಾರರನ್ನು ಹಾಗೂ ನಟರನ್ನು ಕಂಡ ಶತಮಾನವದು. ಅಂಥ ಶ್ರೇಷ್ಠರಲ್ಲಿ ಕೈಲಾಸಂ ಮೊದಲಿಗರು.ಮತ್ತೊಬ್ಬರು ಸಂಸ, ಇನ್ನೊಬ್ಬರು 'ಶ್ರೀರಂಗ' ಕಾವ್ಯನಾಮದ ಆದ್ಯ ರಂಗಾಚಾರ್ಯರು. ಆದರೆ ಈ ಮೂವರ ಪೈಕಿ ಕಥಾವಸ್ತುವಿನಿಂದ ಹಿಡಿದು ಕನ್ನಡ–ಇಂಗ್ಲೀಷ್ ಮಿಶ್ರಿತ ತಮ್ಮ ವಿಶಿಷ್ಟ ಸಂಭಾಷಣೆಯ ತನಕ, ಸಂಗೀತ, ದೃಶ್ಯ, ಪ್ರಸಾಧನ... ಹೀಗೆ ನಾಟಕದ ಪ್ರತಿಯೊಂದು ವಿಭಾಗದಲ್ಲೂ ಹೊಸದೊಂದು ಮಾರ್ಗವನ್ನೇ ಹುಟ್ಟುಹಾಕಿ ಕನ್ನಡ ನಾಟಕ ರಚನೆಯನ್ನೂ, ಕನ್ನಡ ನಾಟಕ ಪ್ರದರ್ಶನವನ್ನೂ ಹೊಸತನಕ್ಕೆ ತಿರುಗಿಸಿದ ಕೀರ್ತಿ ಕೈಲಾಸಂಗೇ ಸಲ್ಲುತ್ತದೆ. ಇಂಗ್ಲೀಷಿನ ಜೊತೆಗೆ ತಮಿಳು, ತೆಲುಗು, ಉರ್ದು, ಮಲೆಯಾಳಂ ಮತ್ತು ಸಂಸ್ಕೃತ ಭಾಷೆಗಳನ್ನೂ ನಾಟಕಗಳಲ್ಲಿ ಹೆಣೆದು ಆಡು ಭಾಷೆಯಿಂದ ಕೈಲಾಸಂ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಿದ್ದ ಪರಿಯನ್ನು ಬಲ್ಲವರೇ ಬಲ್ಲರು.

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗ. ಸರ್ ಕೆ.ಶೇಷಾದ್ರಿ ಅಯ್ಯರ್ ಅವರು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಕಾಲವದು. ಆಗ ಅವರು ಬಹಳಷ್ಟು ಮಂದಿ ಪ್ರತಿಭಾವಂತರನ್ನು ತಮಿಳು ನಾಡಿನಿಂದ ಕರೆತಂದು ಇಲ್ಲಿ ಉನ್ನತ ಹುದ್ದೆ ನೀಡಿದ್ದರು. ಅಂಥವರಲ್ಲಿ ಜಸ್ಟೀಸ್ ತ್ಯಾಗರಾಜ ಪರಮ ಶಿವ ಅಯ್ಯರ್ ಸಹ ಒಬ್ಬರು. ಎಡೆಯತಮಂಗಲಂ ನಾರಾಯಣಶಾಸ್ತ್ರಿಗಳ ಮಗಳು ಕಮಲಮ್ಮ ಇವರ ಧರ್ಮಪತ್ನಿ. ಈ ಸುಸಂಸ್ಕೃತ ದಂಪತಿಗಳ ಜೇಷ್ಠ ಪುತ್ರನಾಗಿ 1885ರ ಜುಲೈ 29ರಂದು ಟಿ.ಪಿ. ಕೈಲಾಸಂ ಅವರು ತಾತ ನಾರಾಯಣಶಾಸ್ತ್ರಿಯವರ ಮೈಸೂರಿನ ಮನೆಯಲ್ಲಿ ಜನಿಸಿದರು. ಇವರ ಜನ್ಮ ದಿನಾಂಕದ ಬಗ್ಗೆ ಹಲವು ಗೊಂದಲಗಳಿದ್ದು ಒಂದೊಂದು ಕಡೆ ಒಂದೊಂದು ರೀತಿ ಇದೆಯಾದರೂ ಕನ್ನಡ ಸಾಹಿತ್ಯ ಪರಿಷತ್ತಿನ ದಾಖಲೆಯ ಪ್ರಕಾರ ಇದೇ ಸರಿಯಾದದ್ದೆಂದು ನಂಬಬಹುದಾಗಿದೆ.

> ಲಸಕ್ಕೆ ರಾಜೀನಾಮೆ ನೀಡಿ ಬಯಸಿ ಬಯಸಿ ಕೈಲಾಸಂ ಅವರು ನಾಟಕ ರಂಗಕ್ಕೆ ಬಂದಾಗ ಕೇವಲ ಕೆಲಸವನ್ನಷ್ಟೇ ಅವರು ಬಿಟ್ಟು ಬಂದಿರಲಿಲ್ಲ. ತಾವು ವಾಸಿಸುತ್ತಿದ್ದ ಭವ್ಯವಾದ ವೈಟ್‌ಹೌಸ್ ಅನ್ನೂ ಬಿಟ್ಟಿದ್ದರು. ಜೊತೆಗಿದ್ದ ತಮ್ಮಿಡೀ ಕುಟುಂಬ ವರ್ಗವನ್ನೂ ಬಿಟ್ಟಿದ್ದರು. ಒಟ್ಟಾರೆ ತಮ್ಮ ಆಗರ್ಭ ಶ್ರೀಮಂತಿಕೆಯೆಲ್ಲವನ್ನೂ ಬಿಟ್ಟು ಹೊರಬಂದಿದ್ದರು. ಒಂದು ರೀತಿ ಬುದ್ಧನಾಗುವ ಮುನ್ನ ಸಿದ್ಧಾರ್ಥ ಎಲ್ಲವನ್ನೂ ಬಿಟ್ಟು ಎದ್ದು ಬಂದಂತೆ. ಹೀಗೆ ಎಲ್ಲವನ್ನೂ ಬಿಟ್ಟು ಬಂದ ಕೈಲಾಸಂ ಕೋಳಿ ಗೂಡಿನಂತಹ ಒಂದು ಕೊಠಡಿಯನ್ನು ತಮ್ಮ ಕರ್ಮಭೂಮಿ ಮಾಡಿಕೊಂಡಿದ್ದೇ ಒಂದು ಪವಾಡ.

ಬೆಂಗಳೂರು ಮತ್ತು ಹಾಸನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಲಿತ ಕೈಲಾಸಂ ಪ್ರೌಢಶಾಲಾ ವ್ಯಾಸಂಗವನ್ನು ಮೈಸೂರಿನಲ್ಲಿ ಮಾಡಿದರು. ಆ ಸಂದರ್ಭದಲ್ಲಿ ಇವರಿದ್ದ ವಿದ್ಯಾರ್ಥಿ ನಿಲಯದಲ್ಲೇ ಇವರ ಸಹಪಾಠಿಗಳಾಗಿ ಕನ್ನಡ ಕಣ್ವ ಬಿ.ಎಂ.ಶ್ರೀ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಎನ್.ಎಸ್.ಸುಬ್ಬರಾಯರೂ ಇದ್ದರಂತೆ. ಆಗ ಕೈಲಾಸಂರ ತುಂಟತನ, ಚೇಷ್ಟೆಗಳನ್ನು ತಡೆಯಲಾಗದೆ ಅವರಿಬ್ಬರೂ ಬೇರೊಂದು ರೂಮನ್ನು ಹುಡುಕಿಕೊಂಡಿದ್ದರಂತೆ. ಮುಂದೆ ಕೈಲಾಸಂ ಕಾಲೇಜು ವಿದ್ಯಾಭ್ಯಾಸವನ್ನು ಮದರಾಸಿನ ಪ್ರತಿಷ್ಠಿತ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮುಂದುವರಿಸಿ 1907ರಲ್ಲಿ ಇಡೀ ಮದರಾಸು ಪ್ರಾಂತ್ಯಕ್ಕೇ ಮೊದಲ ಸ್ಥಾನಗಳಿಸಿ ಕ್ರೊಮಾಟ ಪದಕದೊಡನೆ ಬಿ.ಎ. ಪದವಿ ಪಡೆದರು. ನಂತರ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಕೈಲಾಸಂ ಮೈಸೂರು ಸರ್ಕಾರದ ವಿದ್ಯಾರ್ಥಿ ವೇತನ ಪಡೆದು 1908ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಲಂಡನ್‌ಗೆ ತೆರಳಿದರು. ಅಲ್ಲಿನ ರಾಯಲ್ ಸ್ಕೂಲ್ ಆಫ್ ಸೈನ್ಸ್ ಕಾಲೇಜಿನಲ್ಲಿ ಭೂಗರ್ಭ ಶಾಸ್ತ್ರವನ್ನು ಅಧ್ಯಯನ ಮಾಡಿ 1915ರಲ್ಲಿ ಏಳು ಪಾರಿತೋಷಕಗಳೊಡನೆ ಉನ್ನತ ಶ್ರೇಣಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಆಗ ಲಂಡನ್ನಿನ ರಾಯಲ್ ಜಿಯಾಲಾಜಿಕಲ್ ಸೊಸೈಟಿ ಕೈಲಾಸಂ ಅವರಿಗೆ ಪ್ರತಿಷ್ಠಿತ ಫೆಲೊ ಸದಸ್ಯತ್ವ ನೀಡಿ ಗೌರವಿಸಿದ್ದು ಅವರ ಘನ ಪ್ರತಿಭೆಗೊಂದು ಮೆರಗು ನೀಡಿತ್ತು. ಏಳು ವರ್ಷಗಳ ನಂತರ 1915ರಲ್ಲಿ ಕೈಲಾಸಂ, ತವರಿಗೆ ಮರಳುತ್ತಿದ್ದಂತೆಯೇ ಅವರನ್ನು ಸ್ವತಃ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೇ ಪ್ರೊಬೆಷನರಿ ಸಬ್ ಅಸಿಸ್ಟೆಂಟ್ ಜಿಯಾಲಜಿಸ್ಟ್ ಆಗಿ ನೇಮಿಸಿದರು. ಆದರೆ ಅವರಿದ್ದದ್ದು ಕೇವಲ ನಾಲ್ಕೈದು ವರ್ಷಗಳಷ್ಟೆ. ಏಳು ವರ್ಷಗಳು ಲಂಡನ್ನಿನಲ್ಲಿದ್ದಾಗ ಅಲ್ಲಿನ ಅನೇಕ ನಾಟಕಗಳನ್ನು ನೋಡಿ ಪ್ರಭಾವಿತರಾಗಿದ್ದ ಕೈಲಾಸಂ ಚಿತ್ತ ಅತ್ತಲೇ ಸುತ್ತುತ್ತಿದ್ದರಿಂದ ಮತ್ತು ಒಂದೇ ಕಡೆ ನಿಲ್ಲುವ ಜಾಯಮಾನದವರಲ್ಲದ ಅವರು 1920ರಲ್ಲಿ ತಮ್ಮ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಹೊರಬಂದು ಕೈನಲ್ಲಿ ಲೇಖನಿ ಹಿಡಿದರು. ನಾಟಕ ರಚನೆ ಮತ್ತು ನಟನೆಯನ್ನೇ ಗಟ್ಟಿ ಮಾಡಿಕೊಂಡರು. ಅದಾಗಲೇ ಜಿಯಾಲಜಿಸ್ಟ್ ನೌಕರಿಯ ನಡುವೆಯೇ 1918ರಲ್ಲಿ ಮೊಟ್ಟಮೊದಲಿಗೆ ಅವರು ರಚಿಸಿದ್ದ ಟೊಳ್ಳುಗಟ್ಟಿ ನಾಟಕಕ್ಕೆ ಬಿ.ಎಂ.ಶ್ರೀ ಮತ್ತು ಬೆನಗಲ್ ರಾಮರಾವ್‌ರಂಥವರು ತೀರ್ಪುಗಾರರಾಗಿದ್ದ ಬೆಂಗಳೂರಿನ ಅಮೆಚೂರ್ಸ್ ನಾಟಕ ಸಂಘದಿಂದ ಪ್ರಥಮ ಬಹುಮಾನ ಬಂದಾಗಿತ್ತು. ಇದರ ಸ್ಫೂರ್ತಿ ಕೈಲಾಸಂ ಲೇಖನಿಯ ವೇಗವನ್ನು, ರಂಗಭೂಮಿಯ ಬಗ್ಗೆ ಅವರಿಗಿದ್ದ ಸೆಳೆತದ ಓಟವನ್ನು ಹೆಚ್ಚಿಸಿತ್ತು. ಆಗ ಇವರೊಳಗಿನ ಪ್ರತಿಭೆ ಹುಚ್ಚು ಹೊಳೆಯಂತೆ ಉಕ್ಕಿ ಹರಿದಿತ್ತು. ಒಂದರ ಹಿಂದೊಂದರಂತೆ ನಾಟಕ ಕೃತಿಗಳು ಇವರಿಂದ ರೂಪುಗೊಂಡು ಹವ್ಯಾಸಿ ನಾಟಕ ರಂಗದಲ್ಲೊಂದು ಹೊಸ ಕ್ರಾಂತಿಯೇ ನಡೆದದ್ದು ಈಗ ಇತಿಹಾಸ.

ಕೆಲಸಕ್ಕೆ ರಾಜೀನಾಮೆ ನೀಡಿ ಬಯಸಿ ಬಯಸಿ ಕೈಲಾಸಂ ಅವರು ನಾಟಕ ರಂಗಕ್ಕೆ ಬಂದಾಗ ಕೇವಲ ಕೆಲಸವನ್ನಷ್ಟೇ ಅವರು ಬಿಟ್ಟು ಬಂದಿರಲಿಲ್ಲ. ತಾವು ವಾಸಿಸುತ್ತಿದ್ದ ಭವ್ಯವಾದ ವೈಟ್‌ಹೌಸ್ ಅನ್ನೂ ಬಿಟ್ಟಿದ್ದರು. ಜೊತೆಗಿದ್ದ ತಮ್ಮಿಡೀ ಕುಟುಂಬ ವರ್ಗವನ್ನೂ ಬಿಟ್ಟಿದ್ದರು. ಒಟ್ಟಾರೆ ತಮ್ಮ ಆಗರ್ಭ ಶ್ರೀಮಂತಿಕೆಯೆಲ್ಲವನ್ನೂ ಬಿಟ್ಟು ಹೊರಬಂದಿದ್ದರು. ಒಂದು ರೀತಿ ಬುದ್ಧನಾಗುವ ಮುನ್ನ ಸಿದ್ಧಾರ್ಥ ಎಲ್ಲವನ್ನೂ ಬಿಟ್ಟು ಎದ್ದು ಬಂದಂತೆ. ಹೀಗೆ ಎಲ್ಲವನ್ನೂ ಬಿಟ್ಟು ಬಂದ ಕೈಲಾಸಂ ಕೋಳಿ ಗೂಡಿನಂತಹ ಒಂದು ಕೊಠಡಿಯನ್ನು ತಮ್ಮ ಕರ್ಮಭೂಮಿ ಮಾಡಿಕೊಂಡಿದ್ದೇ ಒಂದು ಪವಾಡ. ಇಂಥ ಕರ್ಮಭೂಮಿಯಲ್ಲಿ ಅರಳಿದ ಕಲಾ ಕುಸುಮಗಳೂ ಕೂಡ ಪವಾಡ ಸದೃಶವಾದಂಥವು. ಹೀಗೆ ಕನ್ನಡ ರಂಗಭೂಮಿಗೆ ತಮ್ಮನ್ನೇ ಸಮರ್ಪಿಸಿಕೊಂಡ ಕೈಲಾಸಂ ಕನ್ನಡಕ್ಕೊಬ್ಬರೇ ಅಲ್ಲದೆ ಇನ್ನೊಬ್ಬರೆಲ್ಲಿದ್ದಾರೆ?

ಎ.ವಿ.ವರದಾಚಾರ್ಯರ ರತ್ನಾವಳಿ ಥಿಯೇಟರ್ ಸೇರಿದಂತೆ ಆ ಕಾಲದ ಹಲವಾರು ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ತೊಡಗಿಸಿಕೊಂಡಿದ್ದ ಕೈಲಾಸಂ 1926ರಲ್ಲಿ ಎ.ವಿ. ವರದಾಚಾರ್ಯರು ನಿಧನರಾದ ಮೇಲೆ ರತ್ನಾವಳಿ ಥಿಯೇಟರನ್ನು ತಾವೇ ವಹಿಸಿಕೊಂಡು ಮುನ್ನಡೆಸಿದ್ದರು. 1929ರಲ್ಲಿ ಭವನಾನಿ ಎನ್ನುವವರು ಇಂಗ್ಲೆಂಡಿನ ಮುರ್ರೇ ಎಂಬುವವರೊಡಗೂಡಿ ಮೂಕಿ ಚಿತ್ರಗಳ ಕಾಲದಲ್ಲೇ 'ವಸಂತಸೇನೆ' ಚಲನಚಿತ್ರ ತಯಾರಿಸಲು ಮುಂದಾದಾಗ ಕೈಲಾಸಂ ಆ ಚಿತ್ರದಲ್ಲಿ ಶಕಾರನ ಪಾತ್ರ ಮಾಡಿದ್ದರು. ಕೂತಲ್ಲಿ ಕಂಪನಿ, ನಿಂತಲ್ಲಿ ನಾಟಕ, ನಡೆದಲ್ಲಿ ಚಲನಚಿತ್ರ ಎಂಬಂತೆ ಕಾಲಿಗೆ ಚಕ್ರ ಜೋಡಿಸಿ ಕೊಂಡವರಂತೆ ಕೈಲಾಸಂ ಒಂದು ಕಡೆ ನಿಲ್ಲದೆ ನಿತ್ಯ ಚಲನಶೀಲರಾಗಿದ್ದರು. ಹುಟ್ಟುತ್ತಲೇ ಚಿನ್ನದ ಚಮಚವನ್ನು ಬಾಯಲ್ಲಿ ಇಟ್ಟುಕೊಂಡೇ ಅತ್ಯಂತ ಸಿರಿವಂತ ಕುಟುಂಬದಲ್ಲಿ ಕೈಲಾಸಂ ಜನಿಸಿದ್ದರೂ ಬಡತನದಲ್ಲೇ ಬದುಕಿದರು. ಆದರೆ ಅವರ ಹೃದಯ ಅತ್ಯಂತ ಶ್ರೀಮಂತಿಕೆಯಿಂದ ಕೂಡಿತ್ತು. ಎಲ್ಲರ ಕಷ್ಟ–ಸುಖಗಳಿಗೂ ಮಿಡಿಯುತ್ತಿದ್ದ ಅವರ ಹೃದಯ ವೈಶಾಲ್ಯತೆಗೆ ಕೈಲಾಸ ಪರ್ವತವೂ ಸಮನಲ್ಲವೆಂಬುದು ಅವರನ್ನು ಹತ್ತಿರದಿಂದ ಬಲ್ಲವರ ಅಭಿಮತ. ಗುರು ಹಿರಿಯರ ಬಗ್ಗೆ ಅಪಾರ ಗೌರವ ಹೊಂದಿದ್ದ ಕೈಲಾಸಂ ಕಿರಿಯರನ್ನು ಪ್ರೋತ್ಸಾಹಿಸುವುದರಲ್ಲಿ ಎತ್ತಿದಕೈ. ಆದರೆ ತಮ್ಮ ಗೌರವ, ಘನತೆ, ಸ್ವಾಭಿಮಾನಕ್ಕೆ ಕಿಂಚಿತ್ತು ಧಕ್ಕೆಯಾದರೂ ಅವರು ಸಹಿಸುತ್ತಿರಲಿಲ್ಲ. 1944ರಲ್ಲಿ ರಬಕವಿಯಲ್ಲಿ ಜರುಗಬೇಕಿದ್ದ 28ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಕನ್ನಡ ಸಾಹಿತ್ಯ ಪರಿಷತ್ತು ಕೈಲಾಸಂ ಅವರನ್ನು ಆಯ್ಕೆ ಮಾಡಿತ್ತು. ಆದರೆ ಪರಿಷತ್‌ನ ಆಹ್ವಾನ ಕೈಲಾಸಂ ಅವರ ಕೈ ತಲುಪಲೇ ಇಲ್ಲ. ಆಗ ಸಮ್ಮೇಳನಾಧ್ಯಕ್ಷತೆಯ ಪೀಠ ಏರಲು ಕೈಲಾಸಂ ನಿರಾಕರಿಸಿಯೇ ಬಿಟ್ಟರು. ಮುಂದಿನ ವರ್ಷ ಪರಿಷತ್ತು ಕೈಲಾಸಂರನ್ನು ಬಿಡದೆ ಹಠವಿಡಿದು ಒಪ್ಪಿಸಿದ್ದರಿಂದ 1945ರಲ್ಲಿ ಮದರಾಸಿನಲ್ಲಿ ನಡೆದ 29ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅವರು ಅಲಂಕರಿಸಿದ್ದರು. ಈ ಪೀಠದಿಂದ ಪ್ರತಿಧ್ವನಿಸಿದ ಅವರ ಮಾತುಗಳಾದರೂ ಎಂಥವು ಗೊತ್ತಾ?


"ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ತಾವು ಹೊಸಗನ್ನಡ ನಾಟಕದ ಮೇಲೆ ತಮಗಿರುವ ಆದರವನ್ನು ವ್ಯಕ್ತಪಡಿಸಿದ್ದೀರಿ. ತಾವು ತೋರಿಸಿದ ಈ ಗೌರವ ನಮ್ಮ ನಾಡಿನ ಸಾತು, ಪಾತು, ನಾಗತ್ತೆ, ಪೋಲಿ ಕಿಟ್ಟಿ ಇತ್ಯಾದಿ ನನ್ನ ಬಸುರಿನ ಕೂಸುಗಳಿಗೆ ಸಂದ ಗೌರವ. ನಾನೋ ಬರಿ ನಿಮಿತ್ತ, ನೆಪ! ಸಾತು ಪಾತುಗಳನ್ನು ನಿಮ್ಮ ಮುಂದೆ ಒಪ್ಪಿಸುವ ಸೂತ್ರಧಾರ, ಆ ಪಾತ್ರಗಳ ಪರವಾಗಿ, ಕನ್ನಡ ನಾಟಕ ಪ್ರಪಂಚದ ಪರವಾಗಿ ತಮ್ಮನ್ನು ನಾನು ವಂದಿಸುತ್ತೇನೆ." ನಾಟಕದ ಮೇಲಿದ್ದ ಕೈಲಾಸಂರ ಅನನ್ಯ ಪ್ರೇಮಕ್ಕೆ ಈ ಮಾತುಗಳೇ ಸಾಕ್ಷಿ.

ಮಕ್ಕಳ ಚಿತ್ರಕಥೆ: 'ಇಲ್ಲಿ ಹೊಸ ಮೀನು ಮಾರಾಟಕ್ಕಿದೆ....!'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ನೀತಿ: ಮೀನು ಮಾರುವವ ಬರೆದ ಹಾಗೆಯೇ ನಮ್ಮ ಸಮಸ್ಯೆಗಳು. ಸಮಸ್ಯೆಗಳನ್ನು ಸರಿಯಾಗಿ ನೋಡಲು ಕಲಿತುಕೊಂಡರೆ ಅಳಿಸಿ ಹಾಕಿದ ಪದಗಳ ಹಾಗೆಯೇ ನಮ್ಮ ಸಮಸ್ಯೆಗಳೂ ಕೂಡ ಒಂದೊಂದಾಗಿ ಮಾಯವಾಗುತ್ತದೆ.



ವಾರಭವಿಷ್ಯ

28.7.2024 ರಿಂದ 3.8.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಮೇಷ, ವೃಷಭ, ಮಿಥುನ, ಕಟಕ, ಕುಜ–ವೃಷಭ, ಬುಧ–ಸಿಂಹ, ಗುರು–ವೃಷಭ, ಶುಕ್ರ–ಕಟಕ, ಸಿಂಹ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಉತ್ತಮ ಸ್ನೇಹಿತರ ಮಿಲನದಿಂದ ಮನಸ್ಸಿಗೆ ಹರ್ಷ, ನಿಜ ಸ್ನೇಹಿತರೇ ನೆರವಿಗೆ ಆಗುವುದು. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶ್ರೇಷ್ಠ ಉದ್ಯೋಗದ ಆಫರ್‌ಗಳು ಬರುವುದು. ಭೂ ಸಂಬಂಧಿ ವ್ಯವಹಾರಗಳಲ್ಲಿ ಹೊಸ ಒಡಂಬಡಿಕೆಗಳು ಕಾರ್ಯರೂಪಕ್ಕೆ ಬರುವುದು. ಯಾವುದೇ ದಸ್ತಾವೇಜಿಗೆ ಸಹಿ ಮಾಡುವ ಮೊದಲು ವಕೀಲರ ಸಲಹೆ ಪಡೆಯಿರಿ. ಪಿತ್ತ ಜನಿತ ಹಾಗೂ ನರ ಸೆಳೆತ ಕಾಡಬಹುದು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–2

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಕಂಡು ಬರುವ ಅಡಚಣೆ, ಆತಂಕಗಳು ನಂತರ ನಿವಾರಣೆ ಆಗುವುದು. ತನ್ನ ಉಚ್ಚ ರಾಶಿಗೆ ಬರುವ ಚಂದ್ರನಿಂದ ಮನಸ್ಸು ಹಾಗೂ ಆರೋಗ್ಯ ನಿರ್ಮಲವಾಗಿದ್ದು, ನಿಮ್ಮ ಇಚ್ಛಿತ ಆಕಾಂಕ್ಷೆಗಳು ಸಫಲವಾಗುವುದು. ಸ್ತ್ರೀಯರೊಬ್ಬರ ಸಹಾಯ ಹಸ್ತದಿಂದ ನಿಮ್ಮ ವೈಯಕ್ತಿಕ ಕಾರ್ಯ ಸಾಧನೆಯಾಗುವುದು. ವಾರದ ಕಡೆಗೆ ಅನಿರೀಕ್ಷಿತ ಆರ್ಥಿಕ ಲಾಭವನ್ನು ಕಾಣುವಿರಿ.

ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಹೆಚ್ಚಿನ ಸಮಯ ಸಂತೋಷ ಚಿತ್ತರಾಗಿರುತ್ತೀರಿ. ವ್ಯಾಪಾರ, ವ್ಯವಹಾರಗಳಲ್ಲಿ ನಿಮ್ಮ ಸಹವರ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅನ್ಯಥಾ ಐಕ್ಯಮತ್ಯದ ಕೊರತೆಯಿಂದ ನಷ್ಟ ಸಂಭವಿಸಬಹುದು. ಬೇಡದ ಬಾಬುಗಳಿಗೆ ಹಣವನ್ನು ವ್ಯಯಿಸುವಿರಿ. ಎದುರಾಳಿಗಳು ಬೂದಿ ಮುಚ್ಚಿದ ಕೆಂಡದಂತೆ ಇರುತ್ತಾರೆ.

ಶ್ರೀ ವಿನಾಯಕ ಪೂಜೆ. ಶುಭ ಸಂಖ್ಯೆ–5

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಮುದ ನೀಡುವ ಪ್ರಸಂಗಗಳಿಂದ ಮನಸ್ಸು ಪ್ರಸನ್ನವಾಗಿರುವುದು. ಮಿತ್ರರ ಸಮಾಗಮ ಹಾಗೂ ಸಂತೋಷ ಕೂಟಗಳು ನಡೆಯಲಿವೆ. ಹಣಕಾಸಿನ ಸ್ಥಿತಿಯಲ್ಲಿ ಆಶಾಭಾವನೆಯನ್ನು ಹೊಂದಬಹುದು. ಮನೆಯಲ್ಲಿ ಪೂಜೆ–ಪುನಸ್ಕಾರಗಳು ನಡೆಯುವುದು. ನಿಮಗೆ ಯಾವುದಾದರೂ ಬಹುಮಾನ ದೊರೆಯುವ ಸಾಧ್ಯತೆ ಇದೆ. ಸತಿ–ಪತಿಯರು ಪರಸ್ಪರ ಸೋತು ಗೆಲ್ಲಿ.

ಶ್ರೀದೇವಿ ಸ್ತುತಿ. ಶುಭ ಸಂಖ್ಯೆ–9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ವಿಹಾರ ಹಾಗೂ ವಿಲಾಸ ಜೀವನದಿಂದ ಅಧಿಕ ಖರ್ಚುಗಳು ಎದುರಾಗುವುದು. ಸಜ್ಜನರ ಹಾಗೂ ಸ್ನೇಹಿತರ ಸಹಕಾರಗಳು ಒದಗುತ್ತದೆ. ಟ್ರಾವೆಲ್ ಏಜೆನ್ಸಿ ಹಾಗೂ ಆಟೋಮೊಬೈಲ್ ವ್ಯಾಪಾರಿಗಳಿಗೆ ಅಧಿಕ ಧನಲಾಭವಾಗುವುದು. ವಾರ ಮಧ್ಯೆ ಹೆಂಗಳೆಯರ ಸ್ನೇಹ ಉಂಟಾಗುವುದು. ಮಾತೃಶ್ರೀಯವರಿಂದ ಆಸ್ತಿ ಭಾಗಗಳು ದೊರೆಯುವ ಸಾಧ್ಯತೆ ಇರುತ್ತದೆ. ನಿಮ್ಮ ಆರೋಗ್ಯದ ಕಡೆಗೆ ಅಲಕ್ಷ್ಯ ಬೇಡ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರದಲ್ಲಿ ನಿರುದ್ಯೋಗಿಗಳ ಪ್ರಯತ್ನಗಳಿಗೆ ಅನುಕೂಲಕರ ವಾತಾವರಣ ನೀಡಲಿದೆ ಗುರುಗ್ರಹ. ವ್ಯಾಪಾರ, ವ್ಯವಹಾರಗಳು ಸುಗಮವಾಗಿ ಸಾಗುತ್ತವೆ. ಹೊಸ ಲಾಭದ ಮಾರ್ಗಗಳೂ ತೆರೆದುಕೊಳ್ಳುವುದು. ಸಾಲ ದೊರೆಯುವ ವಿಚಾರದಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗಲಿದೆ. ಸಹೋದರರೊಂದಿಗೆ ಉಂಟಾಗಿದ್ದ ಸ್ಥಿರಾಸ್ತಿ ವಿವಾದಗಳು ಅಂತ್ಯ ಕಾಣದೆ ಮನಸ್ಸಿಗೆ ಬೇಸರ.

ಶ್ರೀ ವಿಷ್ಣುನಾಮ ಜಪ. ಶುಭ ಸಂಖ್ಯೆ–7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ರಾಶ್ಯಾಧಿಪತಿಯ ಅನುಗ್ರಹದಿಂದ ಮುಖ್ಯ ಕೆಲಸಗಳು ನಿರಾಯಾಸವಾಗಿ ಪೂರ್ಣಗೊಳ್ಳುತ್ತವೆ. ಆಪ್ತ ಸ್ನೇಹಿತರು ಹಾಗೂ ಕುಟುಂಬ ಸದಸ್ಯರೊಂದಿಗೆ ಸಂತಸದ ಸಮಯವನ್ನು ಕಳೆಯುತ್ತೀರಿ. ವ್ಯಾಪಾರ, ವ್ಯವಹಾರಗಳು ನೀವು ನಿರೀಕ್ಷಿಸಿದ ಮಟ್ಟದಲ್ಲಿ ನಡೆಯದು. ರಾಜಕೀಯ ವ್ಯಕ್ತಿಗಳಿಗೆ ನ್ಯಾಯಾಲಯದಿಂದ ತೊಂದರೆಗಳು ಎದುರಾಗುತ್ತವೆ. ಸ್ವಲ್ಪ ಆರೋಗ್ಯ ಸಮಸ್ಯೆಯೂ ಬಾಧಿಸುತ್ತದೆ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಮುಖ್ಯ ಕೆಲಸ ಕಾರ್ಯಗಳು ಸ್ವಲ್ಪ ನಿಧಾನವೆನಿಸಿದರೂ ನಿಮ್ಮ ಆಶಯದಂತೆ ಪೂರ್ಣಗೊಳ್ಳುವುದು. ಆತ್ಮೀಯರಿಂದ ಶುಭ ಸುದ್ದಿ ಬರುತ್ತದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಬೃಹತ್ ಕೈಗಾರಿಕೆ ನಡೆಸುವವರಿಗೆ ಇದು ಉತ್ತಮ ಸಮಯವಾಗಿದ್ದು, ಹೆಚ್ಚಿನ ಲಾಭ ದೊರಕುವುದು. ಫ್ಯಾಕ್ಟರಿಯ ಸ್ಥಿತಿಗತಿಗಳು ಹಿಂದಿಗಿಂತ ಸುಧಾರಿಸುತ್ತದೆ. ವಾರಾಂತ್ಯಕ್ಕೆ ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

ಶ್ರೀ ಸುಬ್ರಮಣ್ಯ ಉಪಾಸನೆ. ಶುಭ ಸಂಖ್ಯೆ–3

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಈ ವಾರದಲ್ಲಿ ಕಷ್ಟ–ಸುಖಗಳು ಸಮತೋಲನದಲ್ಲಿ ಇರುತ್ತದೆ. ದುಡುಕು ತೀರ್ಮಾನ ಹಾಗೂ ಕೋಪದಲ್ಲಿ ತೆಗೆದುಕೊಂಡ ತೀರ್ಮಾನಗಳಿಂದ ನಷ್ಟವನ್ನು ಅನುಭವಿಸುವಿರಿ. ಕರ್ಮಸ್ಥಾನದಲ್ಲಿರುವ ಕೇತುವಿನಿಂದ ಕಚೇರಿಯಲ್ಲಿ ವಾದ–ವಿವಾದಗಳಿಂದ ಮನಸ್ಸು ಜರ್ಝರಿತವಾಗುವುದು. ವಾರಾಂತ್ಯಕ್ಕೆ ಮಿತ್ರ ಜನರ ಸಹಾಯದಿಂದ ನೆಮ್ಮದಿ ಆಗುವುದು. ಹಿತಕರ ಸುದ್ದಿಯೊಂದು ಬರುವ ಸಂಭವವಿದೆ.

ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–8

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಖಾಸಗಿ ಉದ್ಯೋಗಿಗಳಿಗೆ ಜವಾಬ್ದಾರಿ ಹೆಚ್ಚುವುದರಿಂದ ಕಾರ್ಯದ ಒತ್ತಡದಿಂದ ಮಾನಸಿಕವಾಗಿಯೂ, ದೈಹಿಕವಾಗಿಯೂ ಬಳಲುವಿರಿ. ನೆರೆಹೊರೆಯಲ್ಲಿ ಮನಸ್ತಾಪಗಳು ಉಂಟಾಗುವುದು. ನಿಮ್ಮ ರಾಶ್ಯಾಧಿಪತಿ ಶನಿದೇವ ಅಶುಭನಿದ್ದಾನೆ. ಕೋಪ ತ್ಯಜಿಸಿ ಮುಂದಾಗುವ ವಿಕೋಪಗಳು ಘಟಿಸದೇ ಇರಲಿ. ವಾರದ ಕಡೆಗೆ ವಾಹನ ಖರೀದಿಯಿಂದ ಸಂತಸ. ಪಂಚಮ ಗುರುವು ನಿಮ್ಮ ಪರವಿದ್ದು ನಿತ್ಯ ಜೀವನ ಹಗುರವೆನಿಸುವುದು. ಶ್ರೀ ಮನ್ನಾರಾಯಣ ನಾಮ ಸ್ಮರಣೆ. ಶುಭ ಸಂಖ್ಯೆ–5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವ್ಯಾಪಾರ ವ್ಯವಹಾರಗಳು ಸಾಧಾರಣವಾಗಿ ನಡೆಯುವುದು. ಗೃಹ ಕೃತ್ಯಗಳಿಗೆ ಮಿತ್ರ ಜನರ ಸಹಾಯ ಒದಗುವುದು. ಹೊಸ ಉದ್ದಿಮೆ, ಫ್ಯಾನ್ಸಿ ಸ್ಟೋರ್, ಗಿಫ್ಟ್ ಪದಾರ್ಥಗಳ ಅಂಗಡಿ ಪ್ರಾರಂಭಿಸಬಹುದು. ಬಂಡವಾಳಕ್ಕೆ ಬ್ಯಾಂಕ್ ಸಾಲ ದೊರೆಯುವುದು. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಡದೆ ಉತ್ತಮ ಫಲ ದೊರೆಯದು. ಅನವಶ್ಯಕ ಸಂಚಾರಗಳು ಬೇಡ. ಸಂಧಿವಾತ, ಮಂಡಿನೋವು ಕಾಡುವುದು.

ಶ್ರೀ ಶನಿಸ್ತುತಿ. ಶುಭ ಸಂಖ್ಯೆ–3


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಮನೆಯಲ್ಲೂ, ಮನದಲ್ಲೂ ಹರುಷದ ವಾತಾವರಣ. ನೂತನ ಗೃಹ ಬಳಕೆ ವಸ್ತುಗಳು ಮನೆಗೆ ಬರುವುದು. ನಿಮ್ಮ ಬುದ್ಧಿ ಸಾಮರ್ಥ್ಯದಿಂದ ಪ್ರಯತ್ನ ಕಾರ್ಯಗಳು ಯಶಸ್ಸಿ ಆಗುವುದು. ಕೆಲವರಿಗೆ ವಿದೇಶಿ ಉದ್ಯೋಗ ದೊರೆಯುವ ಸಾಧ್ಯತೆ. ಸಪ್ತಮ ಕೇತು ಕಾರಣ ವಾರದ ಕಡೆಗೆ ಸತಿ–ಪತಿಯಲ್ಲಿ ವಿರಸ ಉಂಟಾಗುವುದು. ಮಾತಿಗೆ–ಮಾತಿನಿಂದ ಒಳ್ಳೆಯದನ್ನು ನಿರೀಕ್ಷಿಸುವ ಹಾಗಿಲ್ಲ.

ಶ್ರೀ ಗುರುರಾಯರ ಪ್ರಾರ್ಥನೆ. ಶುಭ ಸಂಖ್ಯೆ–4

ಯಾಚೇನಹಳ್ಳಿಯಲ್ಲಿ ಕುವೆಂಪು ಚಿತಾಭಸ್ಮ ಸ್ಮಾರಕ ಭವನಕ್ಕೆ ಶಂಕುಸ್ಥಾಪನೆ

ವಿಶ್ವಮಾನವ ಸಂದೇಶ ಸಾರಿದ ಮಹಾ ಮಾನವತಾವಾದಿ ಕುವೆಂಪು: ಸಚಿವ ಹೆಚ್‌ಸಿಎಂ



ಕುವೆಂಪು ಚಿತಾಭಸ್ಮ ಸ್ಮಾರಕ ಭವನ ನಿರ್ಮಾಣಕ್ಕೆ ಚಾಲನೆ ನೀಡಿದ ನಂತರ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ನಾದಂತ ರಂಗ ಗೌರವ ಗ್ರಂಥ ಬಿಡುಗಡೆಗೊಳಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಚಿತಾಭಸ್ಮವನ್ನು 30 ವರ್ಷಗಳಿಂದ ಸಂರಕ್ಷಣೆ ಮಾಡಿ ಈಗ ಸ್ಮಾರಕ ಭವನ ನಿರ್ಮಿಸಲು ಹೊರಟಿರುವುದು ಉತ್ತಮ ಬೆಳವಣಿಗೆ. ಸರ್ಕಾರದಿಂದ ಭವನ ನಿರ್ಮಾಣಕ್ಕೆ ಯಾವ ಇಲಾಖೆಯಿಂದ ಹಣ ಕೊಡಬಹುದು ಅದೆಲ್ಲವನ್ನು ಕೊಡಿಸುತ್ತೇನೆ. ಕುವೆಂಪು ಅವರ ಹೆಸರಲ್ಲಿ ಒಳ್ಳೆಯ ಸ್ಮಾರಕ ನಿರ್ಮಾಣ ಮಾಡೋಣ.

- ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

ತಿ.ನರಸೀಪುರ, ಜು.27– ಬುದ್ಧ, ಬಸವ, ಅಂಬೇಡ್ಕರ್ ಅವರ ಸ್ಥಾನದ ಮೇರು ವ್ಯಕ್ತಿತ್ವ ಕುವೆಂಪು ಅವರದ್ದಾಗಿತ್ತು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಬನ್ನೂರು ಹೋಬಳಿ ಯಾಚೇನಹಳ್ಳಿ ಗ್ರಾಮದಲ್ಲಿ ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರಕವಿ ಕುವೆಂಪು ಚಿತಾಭಸ್ಮ ಸ್ಮಾರಕ ಭವನ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸಾಹಿತ್ಯ ಲೋಕಕ್ಕೆ ರಾಷ್ಟ್ರಕವಿ ಕುವೆಂಪು ಕಿರೀಟಪ್ರಾಯರಾಗಿದ್ದಾರೆ. ಇತಿಹಾಸ, ಪುರಾಣ, ಪುಣ್ಯಕತೆಗಳನ್ನು ಬಿಂಬಿಸಿದ ಈ ಮಹಾತ್ಮರ ಕಾವ್ಯಗಳು ಅಜರಾಮರ. ಸಾಹಿತ್ಯ ಕ್ಷೇತ್ರಕ್ಕೆ ಕುವೆಂಪು ಕೊಡುಗೆ ಅಪಾರ. ಅಂತಹ ಮೇರು ವ್ಯಕ್ತಿತ್ವದ ವ್ಯಕ್ತಿ 'ತಾನು ವಿದ್ಯಾಭ್ಯಾಸ ಮಾಡದಿದ್ದರೆ ಬ್ರಾಹ್ಮಣರ ಮನೆಯಲ್ಲಿ ಜೀತ ಮಾಡುವ ಪರಿಸ್ಥಿತಿ ನನ್ನದಾಗುತ್ತಿತ್ತು' ಎಂದು ಹೇಳಿದ್ದರು ಅಂದರೆ ಬ್ರಾಹ್ಮಣ ವ್ಯವಸ್ಥೆಯಲ್ಲಿ ಅವರು ಅನುಭವಿಸಿದ ನೋವಿನ ಅನಾವರಣ ನಾವಿಲ್ಲಿ ಕಾಣಬಹುದಾಗಿದೆ ಹಾಗಾಗಿ ಬುದ್ಧ, ಬಸವ, ಅಂಬೇಡ್ಕರ್ ಅವರ ಸ್ಥಾನದ ಮೇರು ವ್ಯಕ್ತಿತ್ವದ ಕುವೆಂಪು ಅವರನ್ನು ಬಿಟ್ಟರೆ ಶೂದ್ರರಿಗೆ ಉಳಿಗಾಲವಿಲ್ಲ ಎಂದರು.

20ನೇ ಶತಮಾನದಲ್ಲಿ ಕುವೆಂಪು ಅವರು ಜನ್ಮ ತಳೆಯದಿದ್ದರೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಕೊರತೆಯಾಗುತ್ತಿತ್ತು ಎಂಬುದನ್ನು ನಾವೆಲ್ಲರೂ ಅರಿಯಬೇಕಿದೆ. ಜಗತ್ತಿನಲ್ಲಿ ಬದುಕಿಗಾಗಿ ಸಾಹಿತ್ಯ ಮತ್ತು ಸಾಹಿತ್ಯಕ್ಕಾಗಿ ಬದುಕು ಎಂಬ 2 ಮುಖಗಳನ್ನು ಕಾಣಬಹುದು. ಆದರೆ, ಕುವೆಂಪು ಅವರು ಬದುಕಿದಂತೆ ಬರೆದ ಮತ್ತು ಬರೆದಂತೆಯೇ ಬದುಕಿದವರಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರಿಗೆ ದೊಡ್ಡ ದೊಡ್ಡ ಕೃತಿಗಳು ಹೇಗೋ, ಸಣ್ಣ ಕೈಪಿಡಿಗಳೂ ಕೂಡ ಅಷ್ಟೇ ಮೌಲಿಕವಾಗಿ ಕಾಣುತ್ತಿದ್ದವು. ಹಾಗಾಗಿ ಅವರು ಸಾಮಾನ್ಯನನ್ನೂ ಮುಖ್ಯವಾಗಿ ಕಂಡ ವ್ಯಕ್ತಿತ್ವ ಹೊಂದಿದ್ದರು ಎಂದು ವಿವರಿಸಿದರು.

70ರ ದಶಕದಿಂದೀಚೆಗೆ ನಾವು ದಲಿತ ಪ್ರಜ್ಞೆಯನ್ನು ಕಾಣುತ್ತಾ ಬಂದಿದ್ದೇವೆ. ಸಾಮಾನ್ಯರ ದೃಷ್ಟಿಯಲ್ಲಿ ವ್ಯವಸ್ಥೆಯನ್ನು ಆಕ್ರೋಶಿಸುವ ಪಾತ್ರಗಳನ್ನು ಸೃಷ್ಟಿಸಿ ಸಮಾಜವನ್ನು ಎಚ್ಚರಿಸಿದ್ದ ವೈಚಾರಿಕ ಪ್ರಜ್ಞೆ ಕೂಡ ಕುವೆಂಪು ಅವರದ್ದೇ ಆಗಿದೆ ಎಂದರು.

20ನೇ ಶತಮಾನದಲ್ಲಿ ಮಹಾಕಾವ್ಯ ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಕಳಶವನ್ನಿಟ್ಟ ಶ್ರೇಷ್ಠ ಕವಿ ಕುವೆಂಪು ಅವರು ಪ್ರತಿಯೊಬ್ಬರೂ ಜಾತಿಯಿಂದ ಮುಖ್ಯರಾಗಬಾರದು ಬದಲಾಗಿ ನೈತಿಕ ವ್ಯಕ್ತಿತ್ವದಿಂದ ಮುಖ್ಯರಾಗಬೇಕೆಂದರು. ಜಾತಿ ಸಂಕೋಲೆ ಬಲವಾಗಿ ವಿರೋಧಿಸಿ ವಿಶ್ವಮಾನವ ಸಂದೇಶ ಸಾರಿದ ಮಹಾ ಮಾನವತಾವಾದಿ. ತಮ್ಮ ಜೀವಿತಾವಧಿವರೆಗೂ ಕನ್ನಡವನ್ನೇ ಉಸಿರಾಗಿಸಿಕೊಂಡು ಬದುಕಿದ ಕುವೆಂಪು ಅವರು ಕನ್ನಡದ ಅನರ್ಘ್ಯ ರತ್ನ ಎಂದು ಬಣ್ಣಿಸಿದರು.

ಇದೇ ವೇಳೆ ನಾದಂತ ರಂಗ ಗೌರವ ಗ್ರಂಥ ಬಿಡುಗಡೆ ಮಾಡಲಾಯಿತು. ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಮಾತನಾಡಿದರು. ಯಾಚೇನಹಳ್ಳಿ ರಾಮಕೃಷ್ಣ ಸೇವಾ ಕೇಂದ್ರದ ವ್ಯವಸ್ಥಾಪಕ ಟ್ರಸ್ಟಿ ಶ್ರೀ ನಾದಾನಂದ ಸ್ವಾಮೀಜಿ, ಸಂಸದ ಸುನೀಲ್ ಬೋಸ್, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಪ್ರಗತಿಪರ ಚಿಂತಕ ಡಾ.ಕೆ.ಎಸ್.ಭಗವಾನ್, ಮೈಮುಲ್ ನಿರ್ದೇಶಕ ಚೆಲುವರಾಜು, ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ, ಮಾಜಿ ಪುರಸಭಾ ಅಧ್ಯಕ್ಷ ಮುನಾವರ್ ಪಾಷ, ಮಹಿಳಾ ಘಟಕದ ಅಧ್ಯಕ್ಷೆ ವೀಣಾ, ಬಿಇಒ ಶಿವಮೂರ್ತಿ, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ರವಿಕುಮಾರ್, ಲಕ್ಷ್ಮಿನಾರಾಯಣ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಗ್ರಾಪಂ ಅಧ್ಯಕ್ಷ ವೈ.ಸಿ.ಶಿವಕುಮಾರ್, ಸದಸ್ಯ ವೈ.ಎಸ್.ಶೇಖರ್, ಸರೋಜಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಾಮಕೃಷ್ಣ ಸೇವಾ ಕೇಂದ್ರದ ಧರ್ಮದರ್ಶಿ ಡಾ.ಹೆಚ್.ಎಲ್.ನಾಗರಾಜ್, ಮಾಜಿ ಜಿಪಂ ಎಂ.ಸುಧೀರ್, ಸೋಸಲೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ, ಪೈ ಅಶೋಕ್, ಸಿಇಓ ಕ್ಯಾತೇಗೌಡ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಮರಿಗೌಡ, ಗ್ರಾಪಂ ಸದಸ್ಯ ಮಹೇಶ್, ಶೇಖರ್ ಸೇರಿದಂತೆ ಗ್ರಾಮಸ್ಥರಿದ್ದರು.

ಸಂವಿಧಾನದಲ್ಲಿ ಮಹಿಳೆಯರು, ಮಕ್ಕಳ ರಕ್ಷಣೆಗೆ ಒತ್ತು

ಕಾನೂನು ಅರಿವು ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಜಿ.ಹೆಚ್.ಹನುಮಂತ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮೂಗೂರು, ಜು.27– ಸಂವಿಧಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಕಾನೂನು ರೂಪಿಸಿ ಅವರ ರಕ್ಷಣೆಗೆ ಒತ್ತು ನೀಡಿದ್ದಾರೆ ಎಂದು ತಿ.ನರಸೀಪುರ ಹಿರಿಯ ಸಿವಿಲ್ ನ್ಯಾಯಾಧೀಶ ಜಿ.ಹೆಚ್.ಹನುಮಂತ ತಿಳಿಸಿದರು.

ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಸರ್ಕಾರಿ ಪಿಯು ಕಾಲೇಜು ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಬಾಲ ನ್ಯಾಯ ಮಂಡಳಿ ಹಾಗೂ ಆಸರೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಬಯಸಿದ ಶಿಕ್ಷಣವನ್ನು ಪೋಷಕರು ಕೊಡಿಸಬೇಕು. ಅವರಿಗೆ ಉನ್ನತ ಶಿಕ್ಷಣ ಕೊಡಿಸಿದರೆ ಅದೇ ನಾವು ಮಾಡುವ ಆಸ್ತಿ. ಬಾಲ್ಯವಿವಾಹಗಳು ಗ್ರಾಮೀಣ ಭಾಗದಲ್ಲಿ ನಡೆಯುತ್ತಿದ್ದು 18 ವರ್ಷದೊಳಗಿನ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವಾದಾಗ ಪೋಕ್ಸೊ ಕಾಯ್ದೆಯಡಿ 10 ವರ್ಷ ಶಿಕ್ಷೆ ಜೊತೆಗೆ ದಂಡವನ್ನು ಕಟ್ಟಬೇಕು. ತಾಲೂಕಿನಲ್ಲೂ ಇಂತಹ ಪ್ರಕರಣಗಳು ಕಂಡು ಬಂದಿವೆ. ಸರ್ಕಾರಿ ನೌಕರರು ತಪ್ಪು ಮಾಡಿದರೆ ಜೀವನ ಪರ್ಯಂತ ಶಿಕ್ಷೆನೀಡುವ ಕಾನೂನಿದೆ. ಇದನ್ನು ಮಕ್ಕಳು ಅರಿತಿರಬೇಕು ಎಂದರು.

ಮೊಬೈಲ್ ನಮಗೆ ಪೂರಕವಾಗುವ ಬದಲು ಮಾರಕವಾಗುತ್ತಿದೆ. ವಿದ್ಯಾರ್ಥಿ ದಿಸೆಯಲ್ಲಿ ನಮ್ಮ ಗುರಿ ಶಿಕ್ಷಣದ ಕಡೆ ಇರಬೇಕು. ಅನ್ಯ ವಿಷಯಗಳಿಗೆ ನಾವು ಕಿವಿಗೊಡಬಾರದು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಕ್ಕಳು ಮಾನಸಿಕವಾಗಿ ಕುಗ್ಗದೇ ಕೂಡಲೇ ಪೋಷಕರಲ್ಲಿ ಘಟನೆ ಬಗ್ಗೆ ತಿಳಿಸಿದರೆ ತಪ್ಪಿತಸ್ಥರು ಶಿಕ್ಷೆಗೆ ಒಳಗಾದಾಗ ಇತರರಿಗೆ ಇದು ಎಚ್ಚರಿಕೆ ಗಂಟೆಯಾಗಲಿದೆ. ನಮ್ಮನ್ನು ರಕ್ಷಣೆ ಮಾಡಲು ಕಾನೂನಿದೆ. ಧೈರ್ಯವಾಗಿ ತಪ್ಪುಗಳನ್ನು ಎದುರಿಸಿ ನಿಲ್ಲಬೇಕು. ಅದನ್ನ ಮುಚ್ಚಿಡಲು ಪ್ರಯತ್ನ ಮಾಡಬೇಡಿ ಎಂದು ಕಿವಿಮಾತು ಹೇಳಿದರು.

ಬಾಲನ್ಯಾಯ ಮಂಡಳಿ ಸದಸ್ಯ ಟಿ.ಜಿ.ಸುರೇಶ್ ಮಾತನಾಡಿ, ವಿದ್ಯಾರ್ಥಿಗಳು ತಂದೆ ತಾಯಿ ತಲೆ ತಗ್ಗಿಸುವ ಕೆಲಸಕ್ಕೆ ಕೈ ಹಾಕದೆ, ಅನ್ಯರ ಆಕರ್ಷಣೆಗೆ ಒಳಗಾಗದೆ, ವಿದ್ಯಾಭ್ಯಾಸದ ಕಡೆ ಗಮನ ನೀಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ ಎಂದರು.

ಈ ವೇಳೆ ಸಿವಿಲ್ ನ್ಯಾಯಾಧೀಶ ಶ್ಯಾಮ್ ಪ್ರಕಾಶ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ವೆಂಕಟೇಶ್, ಬಿಇಒ ಸಿ.ನಾಗೇಶ್, ಎಸ್‌ಡಿಎಂಸಿ ಅಧ್ಯಕ್ಷ ಎಂ.ರಂಗಸ್ವಾಮಿ, ಉಪಾಧ್ಯಕ್ಷೆ ಶೃತಿ, ಸಿ.ಪುಟ್ಟಸ್ವಾಮಿ, ಉಪ ಪ್ರಾಂಶುಪಾಲ ಬಿ.ಮಹೇಶ್, ಟಿ.ಜಿ.ಸುರೇಶ್, ಸದಸ್ಯರಾದ ಎಂ.ಪಿ.ಮಹೇಶ್, ವಕೀಲ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕೋರ್ಟ್ ಮಾದಪ್ಪ, ಶಿಕ್ಷಕ ವೃಂದ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಇತರರಿದ್ದರು.

ಸಿ.ಎಸ್.ಪ್ರಕಾಶ್ ಚನ್ನಕಲ್ ಕಾವಲ್ ಗ್ರಾಪಂ ಅಧ್ಯಕ್ಷ



ಬೆಟ್ಟದಪುರ, ಜು.27– ಪಿರಿಯಾಪಟ್ಟಣ ತಾಲೂಕಿನ ಚನ್ನಕಲ್ ಕಾವಲು (ಬೇಗನಾಳ್) ಗ್ರಾಪಂ ಅಧ್ಯಕ್ಷರಾಗಿ ಸಿ.ಎಸ್.ಪ್ರಕಾಶ್ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಿ.ಎಸ್.ಪ್ರಕಾಶ್ ಹಾಗೂ ಸಿ.ಕೆ.ಪ್ರಭಾಕರ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಮತದಾನದಲ್ಲಿ ಸಿ.ಎಸ್.ಪ್ರಕಾಶ್ 7 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ಸಿ.ಕೆ.ಪ್ರಭಾಕರ್ 6 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಹಾರಂಗಿ ಇಲಾಖೆ ಇಂಜಿನಿಯರ್ ರಂಗಯ್ಯ ಕಾರ್ಯನಿರ್ವಹಿಸಿದರು.

ಮುಖಂಡ ಶೇಖರ್ ಮಾತನಾಡಿ, ಗ್ರಾಪಂ ಅಧ್ಯಕ್ಷರ ಚುನಾವಣೆ ಮಾದರಿಯಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿ ಕಾಂಗ್ರೆಸ್ ಬೆಂಬಲಿತನಾದರೂ ಆತನ ಗುಣ ಹಾಗೂ ಒಳ್ಳೆಯತನ ಮೆಚ್ಚಿ ಜೆಡಿಎಸ್ ಬೆಂಬಲಿತ ಸದಸ್ಯರು ಮತ ನೀಡುವ ಮೂಲಕ ಗೆಲುವಿನ ಕಾರಣರಾಗಿದ್ದಾರೆ. ಹೀಗಾಗಿ ಸಚಿವ ಕೆ.ವೆಂಕಟೇಶ್, ಮಾಜಿ ಶಾಸಕ ಕೆ.ಮಹದೇವ್ ಹಾಗೂ ಅಧ್ಯಕ್ಷರ ಆಯ್ಕೆಗೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದರು.

ಆವರ್ತಿ ಗ್ರಾಪಂ ಸದಸ್ಯ ಎಂ.ಜಿ.ಶಿವಕುಮಾರ್ ಮಾತನಾಡಿದರು. ಈ ವೇಳೆ ಉಪಾಧ್ಯಕ್ಷೆ ಕಲಾವತಿ, ಮಾಜಿ ಉಪಾಧ್ಯಕ್ಷ ಧನರಾಜ್, ಸದಸ್ಯರಾದ ಎನ್.ಜೆ.ಚಂದ್ರಶೇಖರ, ರಾಜು, ಎನ್.ಆರ್.ಗಣೇಶ್, ಎನ್.ಕೆ.ಸುರೇಶ್, ಶೋಭಾವತಿ, ಚಂದ್ರಶೇಖರ್, ದೇವಿರಮ್ಮ, ಲೀಲಾವತಿ, ಶಿವಮ್ಮ ಮುಂದಾರ, ಮುಖಂಡರಾದ ಗ್ರಾಪಂ ಮಾಜಿ ಅಧ್ಯಕ್ಷ ಸುಂದರೇಗೌಡ, ಜಿಪಂ ಮಾಜಿ ಸದಸ್ಯೆ ಕಾವೇರಿ, ರಾಜು, ವೆಂಕಟೇಶ್, ಸುರೇಶ್, ಮುರುಳಿ, ಮಹದೇವ, ರಾಮು ಸೇರಿದಂತೆ ಹಲವರಿದ್ದರು.

ವಿದ್ಯಾರ್ಥಿಗಳು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳಬೇಕು

ಸಾಹಿತಿ ಬನ್ನೂರು ಕೆ.ರಾಜು ಸಲಹೆ



ಹುಣಸೂರು ತಾಲೂಕಿನ ಬೀರತಮ್ಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಲೇಖನ ಸಾಮಗ್ರಿ ವಿತರಿಸಲಾಯಿತು

ಹುಣಸೂರು, ಜು.26– ನಿನ್ನ ಬಾಳಿನ ಶಿಲ್ಪಿ ನೀನೆ ಎಂಬ ಸ್ವಾಮಿ ವಿವೇಕಾನಂದರ ವಾಣಿಯಂತೆ ವಿದ್ಯಾರ್ಥಿಗಳು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳಬೇಕು ಎಂದು ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಬೀರತಮ್ಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಲೇಖನ ಸಾಮಗ್ರಿ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಪ್ರಕೃತಿ ಸಹಜವಾಗಿ ತನ್ನಂತಾನೆ ಬೆಳೆಯುವ ಸ್ವಾಭಾವಿಕ ಸಸ್ಯಗಳನ್ನು ಯಾರೂ ಪೋಷಣೆ ಮಾಡಿ ಬೆಳೆಸುವುದಿಲ್ಲ. ಅವು ತಮ್ಮ ಸುತ್ತಲೂ ಇರುವ ಪರಿಸರದ ಫಲವತ್ತತೆ ಮತ್ತು ಸಂಪನ್ಮೂಲ ಸದ್ಬಳಕೆ ಮಾಡಿಕೊಂಡು ನಿಸರ್ಗದತ್ತವಾಗಿ ಬೆಳೆಯುತ್ತವೆ. ಅದೇ ರೀತಿ ವಿದ್ಯಾರ್ಥಿಗಳು ಪ್ರತಿಯೊಂದಕ್ಕೂ ಇತರರ ಮೇಲೆ ಅವಲಂಬಿತರಾಗದೆ ತಮ್ಮ ಸುತ್ತಲ ಸಮಾಜದಲ್ಲಿ ಸುಲಭವಾಗಿ ದೊರೆಯುವ ಜ್ಞಾನವನ್ನು ಸದುಪಯೋಗಪಡಿಸಿಕೊಂಡು ಸ್ವಶಕ್ತಿಯಿಂದ ಸಹಜವಾಗಿ ಬುದ್ಧಿವಂತರಾಗಿ, ಜ್ಞಾನವಂತರಾಗಿ, ವಿವೇಕವಂತರಾಗಿ ಕ್ರಿಯಾಶೀಲರಾಗಿ ಬೆಳೆಯಬೇಕೆಂದರು.

ಪ್ರಾಥಮಿಕ ಹಂತದಿಂದಲೇ ವಿದ್ಯಾರ್ಥಿಗಳು ಉತ್ತಮವಾಗಿ ಓದುವ ಜೊತೆಗೆ ಅಷ್ಟೇ ಮುಖ್ಯವಾಗಿ ಅನಾರೋಗ್ಯಕರ ಹೊರಗಿನ ತಿಂಡಿ ತಿನಿಸುಗಳಿಂದ ದೂರವಿದ್ದು ಆರೋಗ್ಯ ಕಾಪಾಡಿಕೊಳ್ಳಬೇಕು. ತಂದೆ ತಾಯಿ ಮತ್ತು ಗುರು ಹಿರಿಯರು ಹೇಳಿದಂತೆ ಕೇಳಬೇಕು. ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ ಎಂಬಂತೆ ವಿದ್ಯೆ ಕಲಿಸುವ ಗುರುಗಳ ಬಗ್ಗೆ ಗೌರವ ಇಟ್ಟುಕೊಂಡು ಗುರು ಪ್ರಜ್ಞೆಯಿಂದ ಕಲಿಯಬೇಕು. ಹಿಂದೆ ಗುರು ಮುಂದೆ ಗುರಿ ಇಟ್ಟುಕೊಂಡಿರುವ ವಿದ್ಯಾರ್ಥಿಗಳು ಸಾಧನೆಯಿಂದ ಹಿಂದೆ ಬಿದ್ದಿಲ್ಲ. ಹಾಗಾಗಿ ದೊಡ್ಡ ದೊಡ್ಡ ಕನಸುಗಳನ್ನು, ದೊಡ್ಡ ದೊಡ್ಡ ಗುರಿಗಳನ್ನು ಹೊಂದಿ ವಿದ್ಯಾರ್ಥಿಗಳು ಸಾಧಕರಾಗಬೇಕು. ಭವಿಷ್ಯದಲ್ಲಿ ವಿದ್ಯಾರ್ಥಿಗಳೆಲ್ಲರೂ ಶಿಕ್ಷಣವನ್ನು ಏಣಿಯನ್ನಾಗಿ ಮಾಡಿಕೊಂಡು ಎತ್ತರದ ಸ್ಥಾನ ತಲುಪಿ ಬಹುದೊಡ್ಡ ಸಾಧಕರಾಗಬೇಕೆಂದ ಅವರು, ವಿದ್ಯಾರ್ಥಿಗಳಿಗೆ ಓದುವುದಷ್ಟೇ ಮುಖ್ಯವಲ್ಲ. ಓದಿನಿಂದಾಚೆಗೂ ಒಳ್ಳೊಳ್ಳೆಯ ಅವಕಾಶಗಳು ಇವೆ. ಆದ್ದರಿಂದ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕೆಂದು ಹೇಳಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ವಿಷಯಗಳನ್ನು ತಿಳಿಸಿಕೊಟ್ಟರು.

ಮುಖ್ಯ ಶಿಕ್ಷಕ ಎಂ.ಆರ್.ಮಹೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತಮ್ಮೂರಿನ ಶಾಲೆ ಎಂಬ ಅಭಿಮಾನದಿಂದ ಸ್ವತಃ ತಾವೇ ಪ್ರಾಯೋಜಕತ್ವ ವಹಿಸಿಕೊಂಡು ನಿವೃತ್ತ ಶಿಕ್ಷಕ ಎಂ.ಎನ್.ಸುರೇಶ್ ಉಚಿತವಾಗಿ ಶಾಲಾ ಮಕ್ಕಳೆಲ್ಲರಿಗೂ ಪೂರಕ ಸಮವಸ್ತ್ರ ವಿತರಣೆ ಮಾಡಿ ಶುಭ ಹಾರೈಸಿದರು. ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಅವರು ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳನ್ನು ವಿತರಿಸಿದರು. ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಕನ್ನಡ ಶಿಶುಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶಿಕ್ಷಣ ಇಲಾಖೆ ಸಂಪನ್ಮೂಲ ವ್ಯಕ್ತಿ ಪ್ರಸನ್ನಕುಮಾರ್, ಕಡೇ ಮನುಗನಹಳ್ಳಿ ಗ್ರಾಪಂ ಹಾಲಿ ಸದಸ್ಯ ಲೋಕೇಶ್ ನಾಯಕ ಅಧ್ಯಕ್ಷತೆ ವಹಿಸಿದ್ದರು. ಶಿವಮ್ಮ, ಮುಖ್ಯ ಶಿಕ್ಷಕ ಎಂ.ಆರ್.ಮಹೇಶ್, ಗ್ರಾಪಂ ಸದಸ್ಯ ವೆಂಕಟೇಶ್, ಎಸ್‌ಡಿಎಂಸಿ ಅಧ್ಯಕ್ಷ ಬಿ.ಸಿ.ಚಂದ್ರಶೇಖರ್, ವಿಶ್ರಾಂತ ಶಿಕ್ಷಕ ಎಂ.ಎನ್.ಸುರೇಶ್, ಗ್ರಾಮದ ಮುಖಂಡರಾದ ರಾಜನಾಯಕ, ಸೋಮೇಗೌಡ, ಅಣ್ಣೇಗೌಡ, ಮಹ ದೇವನಾಯಕ, ಲೋಕೇಶ್, ಮಂಜುನಾಥ್, ಎಸ್.ರವಿಕುಮಾರ್, ದರ್ಶನ್, ಅತಿಥಿ ಶಿಕ್ಷಕರಾದ ಪ್ರದೀಪ್, ನಟರಾಜ್ ಇತರರಿದ್ದರು.

ಹುಲಿ ದಾಳಿಗೆ ಹಸು ಬಲಿ



ಹನಗೋಡು, ಜು.27– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಅರಸು ಕಲ್ಲಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಚಂದ್ರಶೇಖರ್ ಎಂಬುವರಿಗೆ ಸೇರಿದ ಹಸು ಹುಲಿ ದಾಳಿಗೆ ಬಲಿಯಾಗಿರುವುದು. ಇಂದು ಜಮೀನಿನಲ್ಲಿ ಹಸುವನ್ನು ಮೇಯಲು ಬಿಟ್ಟಿದ್ದ ವೇಳೆ ಮುತ್ತುರಾಯನಹೊಸಹಳ್ಳಿ ಅರಣ್ಯ ಪ್ರದೇಶದಿಂದ ಬಂದ ಹುಲಿ ದಾಳಿ ನಡೆಸಿ ಹಸುವನ್ನು ಬಲಿ ಪಡೆದಿದೆ. ಈ ಘಟನೆಯಿಂದ 50 ಸಾವಿರ ರೂ. ನಷ್ಟವಾಗಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಪರಿಹಾರ ಕೊಡಿಸುವ ಭರವಸೆ ನೀಡಿದರು. ಈ ವೇಳೆ ಗ್ರಾಮಸ್ಥರು ಈ ಭಾಗದಲ್ಲಿ ಹುಲಿ ಉಪಟಳ ಹೆಚ್ಚಾಗಿದ್ದು, ಹುಲಿ ಸೆರೆ ಹಿಡಿಯುವಂತೆ ಮನವಿ ಮಾಡಿದರು.

ರೈತರಿಗೆ ಸಾಗುವಳಿ ಪತ್ರ ನೀಡಲು ಒತ್ತಾಯ




ಸುದ್ದಿಗೋಷ್ಠಿಯಲ್ಲಿ ಸೋಮೇಶ್ ಮಾತನಾಡಿದರು.

ಹೆಚ್.ಡಿ.ಕೋಟೆ, ಜು.27– ತಾಲೂಕಿನಲ್ಲಿ ಕಳೆದ 40 ವರ್ಷಗಳಿಂದ ಬೇಸಾಯ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರ ನೀಡುವಂತೆ ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸದಸ್ಯ ಭೀಮನಹಳ್ಳಿ ಸೋಮೇಶ್ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ನಮೂನೆ 57ರ ಪ್ರಕಾರ ಸಾಗುವಳಿಗಾಗಿ 7850ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಇವರು ಅಕ್ರಮವಾಗಿ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಹೀಗಾಗಿ ಇವರಿಗೆ ಸರ್ಕಾರದ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸಾಗುವಳಿ ಪತ್ರ ನೀಡಲು ಕ್ರಮ ವಹಿಸಬೇಕು ಎಂದರು.

ವೇದಿಕೆ ಸದಸ್ಯ ಶಿವರಾಜು ಮಾತನಾಡಿ, ಶಾಸಕ ಅನಿಲ್ ಕೆಲ ದಿನಗಳ ಹಿಂದೆ ಮನೆಮನೆಗೆ ತೆರಳಿ ಸಾಗುವಳಿ ಪತ್ರ ವಿತರಿಸಿದ್ದರು. ಅವರ ಆ ಕಾರ್ಯ ಶ್ಲಾಘನೀಯ. ಹೀಗಾಗಿ ಉಳಿದ ಸಾಗುವಳಿ ಪತ್ರ ವಿತರಿಸಲು ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಕ್ರಿಯಾ ಸಮಿತಿ ಅಧ್ಯಕ್ಷ ಅಂಕಯ್ಯ, ಲೋಕೇಶ್, ಶಿವಣ್ಣೇಗೌಡ, ಪ್ರತಿಭೆ ಸಂಸ್ಥೆ ಸಂಯೋಜಕ ಶಿವರಾಜು, ಗೋಪಾಲರಾಜು, ಶಿವರಾಜು, ಸುಶೀಲಾ, ಮಾರ್ಶಲಿನ್, ಶಿವರಾಜು ಇದ್ದರು.

ಭೈರಾಪುರದಲ್ಲಿ ಚಾಮುಂಡಿ ವರ್ಧಂತಿ



ತಿ.ನರಸೀಪುರದ ಭೈರಾಪುರದಲ್ಲಿ ಶನಿವಾರ ಪುರಸಭಾ ಸದಸ್ಯ ಎಲ್.ಮಂಜುನಾಥ್ ನೇತೃತ್ವದಲ್ಲಿ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಮುಖಂಡರಾದ ಎಸ್.ಮಂಜುನಾಥ್, ಪ್ರದೀಪ್ ಕುಮಾರ್, ಪಂಚಿ, ಲೋಕೇಶ್, ಜ್ಞಾನೇಶ್, ಬಿ.ಟಿ.ಮಹೇಶ್, ಯುವ ಮುಖಂಡ ರಘು, ಕಂಟ್ರಾಕ್ಟರ್ ಮಂಜುನಾಥ್, ಆನಂದ, ವಕೀಲ ಹೇಮಂತ್, ಚಾಮರಾಜು, ಮನು, ಶಶಿಕಾಂತ್ ಇತರರಿದ್ದರು.

ನಂಜನಗೂಡಿನಲ್ಲಿ ವ್ಯಕ್ತಿ ಆತ್ಮಹತ್ಯೆ

ನಂಜನಗೂಡು, ಜು.27– ವ್ಯಕ್ತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಅಶೋಕಪುರಂ ಬಡಾವಣೆಯ ಆಶೀರ್ವಾದ್ ಗ್ರಾಂಡ್ ಹೋಟೆಲ್ ಬಳಿ ಜರುಗಿದೆ. ಗ್ರಾಮ ಸಹಾಯಕ, ತಾಲೂಕಿನ ಕರಳಾಪುರ ಗ್ರಾಮದ ನಿವಾಸಿ ಶಿವಣ್ಣ (45) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 6 ತಿಂಗಳಿಂದ ಆಶೀರ್ವಾದ್ ಗ್ರಾಂಡ್ ಹೋಟೆಲ್ ಹಿಂಭಾಗದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಶಿವಣ್ಣ ಜೀವನದಲ್ಲಿ ಜಿಗುಪ್ಸೆಗೊಂಡು ಕಳೆದ ನಾಲ್ಕು ದಿನದ ಹಿಂದೆ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿದು ಶನಿವಾರ ಅಕ್ಕಪಕ್ಕದ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಸ್ಥಳಕ್ಕೆ ನಂಜನಗೂಡು ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು, ಎಸ್‌ಐ ಪ್ರಕಾಶ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ನಗರದ ಟೌನ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿದ್ಯುತ್ ಸ್ಪರ್ಶ: ಬಾಲಕ ಸಾವು



ನಂಜನಗೂಡು, ಜು.27– ವಿದ್ಯುತ್ ಸ್ಪರ್ಶದಿಂದ ಬಾಲಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಶಿವಕುಮಾರ್ ಅವರ ಪುತ್ರ ಯಶವಂತ್ (16) ಸಾವನ್ನಪ್ಪಿದವರು. ಈತ ಶುಕ್ರವಾರ ರಾತ್ರಿ ಟಿವಿ ಸ್ವಿಚ್ ಆನ್ ಮಾಡಲು ಹೋದ ವೇಳೆ ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ನಂಜನಗೂಡು ಗ್ರಾಮಾಂತರ ಠಾಣೆ ಎಸ್‌ಐ ರಾಮಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಓದಿದ ಶಾಲೆ ಋಣ ತೀರಿಸಲು ಮುಂದಾಗಿ

ಹಳೇ ವಿದ್ಯಾರ್ಥಿಗಳಿಗೆ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸಲಹೆ



ಕಾರ್ಯಕ್ರಮದಲ್ಲಿ ಶಾಲೆ ನಿವೃತ್ತ ಶಿಕ್ಷಕ ಎಂ.ಎಂ.ಮಲ್ಲಿಕಾರ್ಜುನ ಮತ್ತು ಇತರರನ್ನು ಸನ್ಮಾನಿಸಲಾಯಿತು.

ಚುಂಚನಕಟ್ಟೆ, ಜು.27– ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿ ಉನ್ನತ ಹುದ್ದೆ ಅಲಂಕರಿಸಿದವರು ತಾವು ಓದಿದ ಶಾಲೆಗೆ ನೆರವು ನೀಡಬೇಕು ಎಂದು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸಲಹೆ ನೀಡಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ನಡೆದ ಗುರುವಂದನಾ ಹಾಗೂ ಸ್ನೇಹ ಬಂಧನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಈ ಶಾಲೆಯಲ್ಲಿ ಓದಿದ್ದು ಹೆಮ್ಮೆ ಎನಿಸುತ್ತಿದೆ ಎಂದರು.

ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಬದುಕು ಕಟ್ಟಿಕೊಂಡಿದ್ದು, ಶಾಲೆಯ ಋಣ ತೀರಿಸಲು ಪ್ರತಿಯೊಬ್ಬರೂ ಮುಂದಾಗಬೇಕೆಂದು ಕರೆ ನೀಡಿದರು.

ಗುರುಗಳ ಆಶೀರ್ವಾದ ದೊರೆತರೆ ಸಮಾಜದಲ್ಲಿ ಸರ್ವವನ್ನು ಸಾಧಿಸಲು ಸಾಧ್ಯವಾಗಲಿದ್ದು, ನಮ್ಮ ಶಾಲೆಯಲ್ಲಿ ಓದಿದ ನೂರಾರು ಮಂದಿ ವಿದೇಶದಲ್ಲೂ ಇದ್ದು ಇದು ನಮಗೆ ಸಂತಸದ ವಿಚಾರ. ಶಾಲೆಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಕಲ್ಪಿಸಲು ನಾನು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದರು.

60 ವರ್ಷಗಳ ಹಿಂದೆ ನಾನು ಈ ಶಾಲೆಯ ವಿದ್ಯಾರ್ಥಿಯಾಗಿ ನನ್ನ ಸಹಪಾಠಿಗಳೊಂದಿಗೆ ಕಲಿತ ನೆನಪು ಈಗಲೂ ಹಚ್ಚ ಹಸಿರಾಗಿದ್ದು, ನಮಗೆ ವಿದ್ಯೆ ಕಲಿಸಿದ ಗುರುಗಳು ಮತ್ತು ಅವರ ಕುಟುಂಬಕ್ಕೆ ಭಗವಂತನ ಆಶೀರ್ವಾದ ಸದಾ ಇರಲೆಂದು ಹಾರೈಸಿದರು.

ಶಾಲೆಯಲ್ಲಿ ಸೇವೆ ಸಲ್ಲಿಸಿದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾತನಾಡಿ, ಅಂಧಕಾರದಲ್ಲಿರುವ ನಮ್ಮ ಬದುಕನ್ನು ಜ್ಞಾನದ ಕಡೆಗೆ ನಡೆಸಿ ಜೀವನ ಕಟ್ಟಿಕೊಳ್ಳಲು ನೆರವಾಗುವ ಗುರುಗಳು ನಿಜವಾದ ದೇವರು ಎಂದರು.

ಶಿಕ್ಷಕರು ಗುರುಗಳ ಸ್ಥಾನ ಅಲಂಕರಿಸಬೇಕಾದರೆ ಆಧ್ಯಾತ್ಮ ಶಕ್ತಿ ಮೈಗೂಡಿಸಿಕೊಂಡು ಆ ಮೂಲಕ ವಿದ್ಯಾರ್ಥಿಗಳಿಗೆ ಜ್ಞಾನ ದಾಹ ನೀಗುವಂತೆ ಮಾಡಿ ಅವರ ಬದುಕು ಹಸನಾಗುವಂತೆ ಮಾಡಬೇಕೆಂದು ಸಲಹೆ ನೀಡಿದರು.

ಈ ವೇಳೆ ಹಳೇ ವಿದ್ಯಾರ್ಥಿಗಳ ಸಂಘದಿಂದ ಪ್ರೌಢಶಾಲಾ ನಿವೃತ್ತ ಶಿಕ್ಷಕರು, ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕ ವೃಂದ, ಬೋಧಕೇತರ ವರ್ಗ, ಶಾಲೆಯಲ್ಲಿ ವ್ಯಾಸಂಗ ಮಾಡಿದ ಸಾಧಕರು, ಜೀವಿತ ವಯೋವೃದ್ಧ ಸದಸ್ಯರು ಮತ್ತು ಯುಪಿಎಸ್‌ಪಿ ಪರೀಕ್ಷೆಯಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು.

ಹಳೆಯ ವಿದ್ಯಾರ್ಥಿಗಳಾದ ಸಣ್ಣನಾಯಕ, ಪರಶುರಾಮ್, ಚನ್ನಕೇಶವ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಬಿ.ಪ್ರಕಾಶ್, ವಿ.ಹೆಚ್.ಗೌಡಪ್ಪ, ಡಾ.ಎಸ್.ಎಸ್.ಪ್ರಕಾಶ್, ಪ್ರೌಢಶಾಲಾ ಮುಖ್ಯ ಶಿಕ್ಷಕ ಕೆ.ಸಿ.ಮಧು, ಗುರುಕುಲ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಬಿ.ಟಿ.ಕುಮಾರಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಇಓ ಆರ್.ಕೃಷ್ಣಪ್ಪ, ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ಹೆಚ್.ಜಯರಾಮೇಗೌಡ, ಉಪಾಧ್ಯಕ್ಷ ಎಸ್.ಎಸ್.ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಮಕೃಷ್ಣೇಗೌಡ, ಸಹ ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಕೆ.ಎ.ಕೆಂಪರಾಜು, ಸಂಘಟನಾ ಕಾರ್ಯದರ್ಶಿ ವೈ.ಎ.ಮಹದೇವ್, ಸಂಚಾಲಕರಾದ ಸಿ.ಟಿ.ಧರ್ಮಪಾಲ, ಆರ್.ಟ್ಯಾಗೋರ್, ಸಾಂಸ್ಕೃತಿಕ ಕಾರ್ಯದರ್ಶಿಗಳಾದ ಕೆ.ಎಸ್.ಲೋಕೇಶ್, ಪರಶುರಾಮ್ ನಿರ್ದೇಶಕರಾದ ಎಂ.ಟಿ.ಮಂಜುನಾಥ್, ಎಸ್.ಎಸ್.ಪ್ರಕಾಶ್, ಎಸ್.ಕೆ.ರಾಜು, ಎಸ್.ಟಿ.ಪುರುಷೋತ್ತಮ, ಅಶ್ವತ್ಥ್ ಕುಮಾರ್, ಪ್ರಸನ್ನಕುಮಾರ್, ವಿಜಯಕುಮಾರ್, ಕೆ.ಎಸ್.ವೆಂಕಟೇಶ್, ಭಾಗ್ಯಮ್ಮ, ಹೇಮಲತಾ, ಗೌರವ ಸಲಹೆಗಾರರಾದ ಡಿ.ಕೆ.ಸಣ್ಣನಾಯಕ, ಜಯರಾಮೇಗೌಡ, ನಿವೃತ್ತ ಶಿಕ್ಷಕ ಎಂ.ಮಲ್ಲಿಕಾರ್ಜುನ, ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಧನಲಕ್ಷ್ಮೀ, ನೂರ್ ಜಹಾನ್, ಮಂಜುಳ, ಎಂ.ವಿ.ಸವಿತಾ, ಕಲಾ, ರಾಚಯ್ಯ, ಚೇತನ, ಸಿ.ಕೆ.ಪಂಜು, ಸಿ.ಎಸ್.ಮಂಜುನಾಥ್ ವಿಠಲ, ಶೇಖರ, ಜಮೃತ್ ಖಾನ್, ರಮೇಶ್, ಕಾಂತರಾಜು, ಸಂತೋಷ್, ಪತ್ರಿಕಾ ಕಾರ್ಯದರ್ಶಿಗಳಾದ ಕುಪ್ಪೆ ಮಹದೇವಸ್ವಾಮಿ, ಸಿ.ಜಿ.ಮಧು ಸೇರಿದಂತೆ ನೂರಾರು ಹಳೇ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ಹೆಚ್.ಸಿ.ರಾಘವೇಂದ್ರ ನಿಧನ



ನಂಜನಗೂಡು, ಜು.27– ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಈಡಿಗರ ಬೀದಿ ನಿವಾಸಿ ಚಿನ್ನಸ್ವಾಮಿ ಅವರ ಪುತ್ರ ಹೆಚ್.ಸಿ.ರಾಘವೇಂದ್ರ(45) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಶೋಕ



ಬೆಟ್ಟದಪುರ, ಜು.27– ಇಲ್ಲಿಗೆ ಸಮೀಪದ ಬಿಲ್ಲಹಳ್ಳಿ ಗ್ರಾಮದ ನಿವಾಸಿ ಅಶೋಕ(40) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವರಾಜು



ಬೆಟ್ಟದಪುರ, ಜು.27– ಇಲ್ಲಿಗೆ ಸಮೀಪದ ಬಿಲ್ಲಹಳ್ಳಿ ಗ್ರಾಮದ ನಿವಾಸಿ ದೇವರಾಜು(42) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಟಿ.ಸ್ವಾಮಿ



ಮೈಸೂರು, ಜು.27–ಹುಣಸೂರಿನ ನಲ್ಲೂರುಪಾಲ ನಿವಾಸಿ ಎಂ.ಟಿ.ಸ್ವಾಮಿ(58) ಅವರು ಇಂದು ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ ನಲ್ಲೂರುಪಾಲದಲ್ಲಿರುವ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮೈಸೂರು ಜಿಲ್ಲೆ, ಹುಣಸೂರು ಮತ್ತು ಪೊನ್ನಂಪೇಟೆ ತಾಲೂಕು ಮಡಿವಾಳ ಸಂಘಟನೆಗಳು ಸಂತಾಪ ಸೂಚಿಸಿವೆ.

ಮುಡಾದಿಂದ 50:50 ಅನುಪಾತದಡಿ ನಿವೇಶನ ಹಂಚಿಕೆ ವಿವಾದ

ಹಗರಣ ಸಂಬಂಧ ಎಸ್‌ಐಟಿ ತನಿಖೆಗೆ ಮಾಜಿ ಸಚಿವ ಸಾರಾ ಮಹೇಶ್ ಆಗ್ರಹ

● ನಾನು ನಿವೇಶನಕ್ಕಾಗಿ ಯಾರಿಗೂ ಶಿಫಾರಸು ಮಾಡಿಲ್ಲ; ಒಂದು ವೇಳೆ ಅದನ್ನು ಸಾಬೀತುಪಡಿಸಿದರೆ ಆ ನಿವೇಶನ ಮುಡಾಗೆ ವಾಪಸ್ ಕೊಡಿಸುತ್ತೇನೆ ● ಸಚಿವರು ಸಿಎಂ ಸಮ್ಮುಖದಲ್ಲಿ ಓದಿದ ಪಟ್ಟಿಯಲ್ಲಿ ಕೆಲವೇ ಕೆಲವರ ಹೆಸರಿದೆ; ಕೇಳಿದರೆ ನಾನೇ ಪೂರ್ಣಪಟ್ಟಿ ನೀಡುವೆ

ಮೈಸೂರು, ಜು.27(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ 50:50 ಅನುಪಾತದಡಿ ನಿವೇಶನ ಹಂಚಿಕೆಯಲ್ಲಿನ ಹಗರಣ ಸಂಬಂಧ ಎಸ್‌ಐಟಿ ತನಿಖೆಗೆ ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷರೂ ಆದ ಮಾಜಿ ಸಚಿವ ಸಾ.ರಾ.ಮಹೇಶ್ ಆಗ್ರಹಿಸಿದ್ದಾರೆ.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸುದ್ದಿಗೋಷ್ಠಿಯಲ್ಲಿ ತಮ್ಮ(ಸಾ.ರಾ.ಮಹೇಶ್) ಶಿಫಾರಸ್ಸಿನ ಮೇಲೆ ನಿವೇಶನ ಮಂಜೂರು ಮಾಡಿರುವುದಾಗಿ ಪ್ರಸ್ತಾಪಿಸಿದ್ದರ ಬಗ್ಗೆ ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿ, ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಲು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

ಮುಡಾ 50:50 ಅನುಪಾತದಲ್ಲಿ 1100ಕ್ಕೂ ಹೆಚ್ಚು ಹಾಗೂ ಪ್ರೋತ್ಸಾಹಕ ಯೋಜನೆಯಡಿ 500ಕ್ಕೂ ಹೆಚ್ಚು ನಿವೇಶನ ಮಂಜೂರು ಮಾಡಿದೆ. ಈ ಬಗ್ಗೆ ಸರಿಯಾದ ರೀತಿ ತನಿಖೆಗೆ ಮುಖ್ಯಮಂತ್ರಿಗಳು ಮುಂದಾಗಬೇಕು. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ನಿರ್ದೇಶನದಂತೆ ಅಂದಿನ ಆಯುಕ್ತ ಕಾಂತರಾಜು ಸುಮಾರು 10 ಸಾವಿರ ನಿವೇಶನಗಳನ್ನು ಸೀಡಿಂಗ್ ಮಾಡಿ, ಮುಡಾ ಅಧೀನದಲ್ಲಿಡಲಾಗಿತ್ತು. ಆ ನಿವೇಶನಗಳು ಏನಾಗಿವೆ? ಎಂಬುದು ಗೊತ್ತಾಗಲಿ. 50:50 ಅನುಪಾತ ಶುರುವಾದಾಗಿನಿಂದ ಯಾರು ಯಾರೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದಾರೆ, ಯಾರ ಹೆಸರಿಗೆ ನಿವೇಶನ ನೋಂದಣಿಯಾಗಿದೆ, ಯಾರು ಖರೀದಿಸಿದ್ದಾರೆ, ಅದರ ಹಿಂದಿರುವವರು ಯಾರು? ಎಲ್ಲದರ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರು ಯಾರೇ ಆದರೂ ಜನತೆ ಮುಂದೆ ತಲೆ ಬಾಗಲಿ ಎಂದರು.

ಎಸ್‌ಐಟಿಗೆ ವಹಿಸಿ: ಕೆಲವು ರೈತರಿಗೆ ನೇರವಾಗಿ ನಿವೇಶನ ಸಿಕ್ಕಿದೆ. ಕೆಲವರಿಗೆ ನೇರವಾಗಿ ಸಿಕ್ಕಿಲ್ಲ. ರೈತರಿಂದ ಸಹಿ ಹಾಕಿಸಿಕೊಂಡು, ಅವರ ಹೆಸರಿಗೆ ನಿವೇಶನ ಮಂಜೂರಾದ ಮೇಲೆ ಅವರನ್ನೇ ಕರೆದುಕೊಂಡು ಹೋಗಿ ಬೇರೆಯವರಿಗೆ ಮಾರಾಟ ಮಾಡಿಸುತ್ತಾರೆ. ಇದೆಲ್ಲವೂ ತನಿಖೆಯಲ್ಲಿ ಬಹಿರಂಗವಾಗಬೇಕು. ಕೆ.ಆರ್.ನಗರದ ಮಹಿಳೆ ಅಪಹರಣ ಪ್ರಕರಣದಲ್ಲಿ ಬೆಳಗ್ಗೆ 9.15ಕ್ಕೆ ಎಫ್‌ಐಆರ್ ಮಾಡಿ, ದೂರುದಾರೆ ಎಲ್ಲಿದ್ದಾರೆ ಎಂದು ತಿಳಿಯದಿದ್ದರೂ ಮೂರೇ ಗಂಟೆಯಲ್ಲಿ ಒಬ್ಬನನ್ನು ಆರೋಪಿ ಎಂದು ಬಂಧಿಸಿದಿರಿ. ಆ ರೀತಿಯಲ್ಲೇ ಎಸ್‌ಐಟಿ ಮೂಲಕ ತ್ವರಿತವಾಗಿ ತನಿಖೆ ಮಾಡಿಸಿ. ಸ್ವಪಕ್ಷದವರನ್ನು ರಕ್ಷಣೆ ಮಾಡದಂತೆ ಸರಿಯಾಗಿ ತನಿಖೆಗೆ ಅವಕಾಶ ಕೊಡಿ. ಆಗ ನಿವೇಶನ ಪಡೆದ ನಿಜವಾದ ರೈತ ಯಾರು? ಬೇನಾಮಿ ರೈತ ಯಾರು? ಮೃತಪಟ್ಟವರ ಹೆಸರಲ್ಲಿ ಎಷ್ಟು ನಿವೇಶನ ಪಡೆಯಲಾಗಿದೆ ಎಲ್ಲವೂ ಬಹಿರಂಗವಾಗುತ್ತದೆ. ತಪ್ಪಿತಸ್ಥರು ಯಾರೇ ಆದರೂ ಬಂಧಿಸಿ ಎಂದು ಆಗ್ರಹಿಸಿದರು.



ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಶನಿವಾರ ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಚಿವರು ಜನರ ದಿಕ್ಕು ತಪ್ಪಿಸುತ್ತಿದ್ದಾರೆ..

ಕೇಂದ್ರ ಸಚಿವ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ ನಿವೇಶನ ಮಂಜೂರಾಗಿದೆ ಎಂಬ ನಗರಾಭಿವೃದ್ಧಿ ಸಚಿವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಾ.ರಾ.ಮಹೇಶ್, 35 ವರ್ಷಗಳ ಹಿಂದೆ ಅರ್ಜಿ ಹಾಕಿದವರಿಗೆಲ್ಲಾ ಕೈಗಾರಿಕಾ ನಿವೇಶನ ಮಂಜೂರಾಗುತ್ತಿತ್ತು. ಆ ವೇಳೆ ಕುಮಾರಸ್ವಾಮಿ ಅವರಿಗೂ ಮಂಜೂರಾಗಿದೆ. ಆದರೆ ಇನ್ನೂ ಕುಮಾರಸ್ವಾಮಿ ಅವರಿಗೆ ನಿವೇಶನ ಕೊಟ್ಟಿಲ್ಲ. ಮಂಜೂರಾತಿ ನಂತರ ಗುತ್ತಿಗೆ ಕ್ರಯಪತ್ರ ಆಗಬೇಕು. ಬಳಿಕ ಸ್ವಾಧೀನ ಹಾಗೂ ಟೈಟಲ್ ಡೀಡ್ ಆಗಬೇಕು. ಆದರೆ 35 ವರ್ಷವಾದರೂ ಕ್ರಯಪತ್ರವನ್ನು ಕೊಟ್ಟಿಲ್ಲ. ಈ ಬಗ್ಗೆ 2013 ಹಾಗೂ ಇತ್ತೀಚೆಗೂ ಮನವಿ ಮಾಡಿದ್ದಾರೆ. ಅಂದು 17 ಬಿ ಎಂದಿತ್ತು. ಈಗ 17 ಸಿ ಕೊಡಬೇಕು ಎಂದು ಸಭೆಯಲ್ಲಿ ಪ್ರೊಸಿಡಿಂಗ್ಸ್ ಆಗಿದೆ. ನಗರಾಭಿವೃದ್ಧಿ ಸಚಿವರು ಹೇಗೆ ರಾಜ್ಯದ ಜನತೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಟೈಟಲ್ ಡೀಡ್ ಇದ್ದರೆ, ಸ್ವಾಧೀನಕ್ಕೆ ಕೊಟ್ಟಿದ್ದರೆ ಆ ಬಗ್ಗೆ ದಾಖಲೆ ಮೂಲಕ ಸ್ಪಷ್ಟಪಡಿಸಿ ಎಂದು ಸವಾಲು ಹಾಕಿದರು.

ಕಾನೂನು ಎಲ್ಲರಿಗೂ ಒಂದೇ...

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಧರ್ಮಪತ್ನಿ ಪಾರ್ವತಿ ಅವರಿಗೆ ನಿವೇಶನ ಮಂಜೂರಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ನಿಜವಾದ ರೈತರಾಗಿದ್ದರೆ, ಅದು ಪಿಟಿಸಿಎಲ್ ಭೂಮಿ ಆಗಿರದಿದ್ದರೆ, ಭೂಸ್ವಾಧೀನ ಪ್ರಕ್ರಿಯೆ ನಡೆಸದೆ ಮುಡಾ ಬಳಕೆ ಮಾಡಿದ್ದರೆ, ಅದೇ ಬಡಾವಣೆಯಲ್ಲಿ ನಿವೇಶನಗಳು ಲಭ್ಯವಿಲ್ಲ ಎಂದಾದರೆ ಇದನ್ನು ಪರಿಗಣಿಸಬಹುದು. ನಾನು ಎಲ್ಲವೂ ಸರಿ, ಎಲ್ಲವೂ ತಪ್ಪು ಎನ್ನುವುದಿಲ್ಲ. ತನಿಖೆ ಆಗಲಿ. ಕಾನೂನು ಎಲ್ಲರಿಗೂ ಒಂದೇ ಎಂದರು.

ಪತ್ರ ಬಿಡುಗಡೆ ಮಾಡಿ: ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಗರಾಭಿವೃದ್ಧಿ ಸಚಿವರು ಸುದ್ದಿಗೋಷ್ಠಿಯಲ್ಲಿ ನನ್ನ ಹೆಸರನ್ನು ಎರಡು ಬಾರಿ ಗಟ್ಟಿಯಾಗಿ ಹೇಳಿದ್ದಾರೆ. ಕಾನೂನುಬದ್ಧ ಹಾಗೂ ಕ್ರಮಬದ್ಧವಾಗಿ ಸಾ.ರಾ.ಮಹೇಶ್ ಶಿಫಾರಸ್ಸಿನ ಮೇಲೆ ದಟ್ಟಗಳ್ಳಿ ಸರ್ವೆ ನಂ. 130/3 ರಲ್ಲಿ 9 ಗುಂಟೆ ಮತ್ತು ಬೋಗಾದಿ 170, 171 ಹಾಗೂ 173 ರಲ್ಲಿ 2 ಎಕರೆ 11 ಗುಂಟೆಯನ್ನು ಮಂಜೂರು ಮಾಡಿರುವುದಾಗಿ ಪಟ್ಟಿಯಲ್ಲಿ ತಿಳಿಸಿದ್ದಾರೆ. 130/3ರ ಛತ್ರವಿರುವ ಭೂಮಿ ನನ್ನ ಧರ್ಮಪತ್ನಿ ಹೆಸರಿನಲ್ಲಿದ್ದು, ಆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ, ತನಿಖೆ ನಡೆದು ಅದು ಖರಾಬು ಅಥವಾ ಗೋಮಾಳವಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಇದರಲ್ಲಿ 50:50ರ ಅನುಪಾತದ ಪ್ರಸ್ತಾಪವೇ ಅಪ್ರಸ್ತುತ. ಇನ್ನು ಬೋಗಾದಿಯ ಮೂರು ಸರ್ವೆ ನಂಬರ್‌ಗಳ ಭೂಮಿ ಯಾರಿಗೆ ಮಂಜೂರು ಮಾಡಿದ್ದಾರೆಂದು ಆರ್‌ಟಿಐ ಅರ್ಜಿ ಹಾಕಿ ತಿಳಿದುಕೊಳ್ಳಬೇಕಿದೆ. ಅಷ್ಟಕ್ಕೂ ವಿಶ್ರಾಂತಿಯಲ್ಲಿರುವ ನಾನು ಶಿಫಾರಸು ಮಾಡಲು ಹೇಗೆ ಸಾಧ್ಯ?. ಒಂದು ವೇಳೆ ಮಾಜಿ ಸಚಿವ ಎನ್ನುವ ಕಾರಣಕ್ಕೆ 50:50ರ ಅನುಪಾತದಡಿ ನಿವೇಶನ ಹಂಚಿಕೆಗೆ ನನ್ನ ಶಿಫಾರಸು ಪರಿಗಣಿಸಿದ್ದಾರೆ ಎನ್ನುವುದಾದರೆ ಆ ಪತ್ರವನ್ನಾದರೂ ಬಿಡುಗಡೆ ಮಾಡಲಿ. ನಾನು ನುಣುಚಿಕೊಳ್ಳುವ ವ್ಯಕ್ತಿಯಲ್ಲ. ಶಿಫಾರಸು ಸಾಬೀತುಪಡಿಸಿದರೆ ಆ ನಿವೇಶನವನ್ನು ನಾನೇ ಪ್ರಾಧಿಕಾರಕ್ಕೆ ವಾಪಸ್ ಕೊಡಿಸುತ್ತೇನೆ. ಈ ವಿಚಾರವಾಗಿ ನಾನು ಯಾರಿಗೂ ಶಿಫಾರಸು ಮಾಡಿಲ್ಲ. ನಗರಾಭಿವೃದ್ಧಿ ಸಚಿವರು ಜನರ ದಾರಿ ತಪ್ಪಿಸಬಾರದು. ಕೋತಿ ತಿಂದು ಮೇಕೆ ಬಾಯಿಗೆ ಒರೆಸುವ ಕೆಲಸ ಮಾಡಬಾರದು ಎಂದು ತಿರುಗೇಟು ನೀಡಿದರು.

ಬೇಕಿದ್ದರೆ ಪಟ್ಟಿ ಕೊಡುವೆ: ನಗರಾಭಿವೃದ್ಧಿ ಸಚಿವರು ನಿನ್ನೆ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಈ ವಿಚಾರಕ್ಕೆ ಸಂಬಂಧಿಸದ ಕೆಲವರನ್ನು ಸೇರಿಸಿದ್ದು, ಸೇರಿಸಬೇಕಿದ್ದ ಕೆಲವರನ್ನು ಕೈಬಿಟ್ಟಿದ್ದಾರೆ. ಸಚಿವರು ಕೇಳಿದರೆ ನಾನೇ ಪೂರ್ಣ ಪಟ್ಟಿ ನೀಡುವೆ. ಪಡೆದುಕೊಂಡಿರುವ ಕೆಲವರು ಸುಮ್ಮನಿದ್ದಾರೆ, ಮತ್ತಷ್ಟು ಮಂದಿ ನನಗೇನು ಗೊತ್ತಿಲ್ಲ ಎನ್ನುವಂತಿದ್ದಾರೆ. ಹಾಗಾದರೆ ಫಲಾನುಭವಿಗಳು ಯಾರು?. ಎಲ್ಲವೂ ನನ್ನ ತಲೆಯಲ್ಲಿದೆ. ಆದರೆ ಅದಕ್ಕೆಲ್ಲಾ ಅಧಿಕೃತ ದಾಖಲೆ ಬೇಕು. ಆ ನಿಟ್ಟಿನಲ್ಲೇ ಪ್ರಯತ್ನ ನಡೆಸಿದ್ದೇನೆ. ಸತ್ಯ ಹೇಳಿ ಈಗಾಗಲೇ ಅನುಭವಿಸಿದ್ದೇನೆ. ಈ ವಿಚಾರ ಹೇಳಿದರೆ ಉಳಿಯುವುದುಂಟೇ?. ಇಂದು ಎಲ್ಲಾ ಮಾತನಾಡುತ್ತಿದ್ದಾರೆ. ಪ್ರಾಧಿಕಾರದ ನಿರ್ಣಯ ಆಗುವಾಗ ಏನು ಮಾಡುತ್ತಿದ್ದರು. ಸರ್ಕಾರದ ಗಮನಕ್ಕೆ ಏಕೆ ತರಲಿಲ್ಲ. ಅಧಿಕಾರಿಗಳು ತಪ್ಪು ಮಾಡಿದ್ದರೆ ಎಚ್ಚರಿಸಬೇಕಿತ್ತಲ್ಲವೇ? ಎಂದು ಪ್ರಶ್ನಿಸಿದರು.

ತನ್ವೀರ್ ಸೇಠ್ ಮಾತನಾಡಲಿ: ಪ್ರಾಧಿಕಾರದ ವಿಚಾರ ಮಾತನಾಡಲು ತುಂಬಾ ನೋವಾಗುತ್ತದೆ. ಯಾರೆಲ್ಲಾ ಎಷ್ಟು ನಿವೇಶನ ಪಡೆದಿದ್ದಾರೆ, ಅವು ಯಾವ ಬಡಾವಣೆಯಲ್ಲಿವೆ, ಎಷ್ಟು ಮಾರಾಟವಾಗಿವೆ ಎಲ್ಲವೂ ಗೊತ್ತಿದೆ. ಆದರೆ ಅದನ್ನು ಸಾರ್ವಜನಿಕವಾಗಿ ಹೇಳುವುದಕ್ಕೆ ತುಂಬಾ ಕಷ್ಟ ಹಾಗೂ ಹಿಂಸೆಯಾಗುತ್ತದೆ. ಆಡಳಿತ ಪಕ್ಷದವರನ್ನು ಸುಮ್ಮನೆ ಕೂರಿಸಿ, ವಿರೋಧ ಪಕ್ಷದವರು ನಿವೇಶನ ಪಡೆಯುವಂತಹ ಸಾಧ್ಯತೆ ಇದೆಯೇ?. ಈ ಬಗ್ಗೆ ಸ್ನೇಹಿತರಾದ ತನ್ವೀರ್ ಸೇಠ್‌ಗೆ ವಿಷಯ ತಿಳಿದಿದೆ. ಅವರು ಈ ಬಗ್ಗೆ ಮಾತನಾಡಬೇಕು. ಇದೆಲ್ಲವೂ ವಿಷಯಾಂತರ ಮಾಡುವ ಕೆಲಸ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಮುಖಂಡರಾದ ಎಸ್‌ಬಿಎಂ ಮಂಜು, ರವಿಚಂದ್ರೇಗೌಡ, ಸೋಮು, ಫಾಲ್ಕನ್ ಬೋರೇಗೌಡ, ದ್ವಾರಕೀಶ್, ರಾಮು, ಪ್ರಕಾಶ್ ಪ್ರಿಯದರ್ಶನ್ ಮತ್ತಿತರರು ಹಾಜರಿದ್ದರು.

ತನಿಖೆಗೆ ಸಹಕರಿಸಲಿ...



ಸಾ.ರಾ.ಮಹೇಶ್ ಅವರ ಪತ್ರಿಕಾಗೋಷ್ಠಿಯನ್ನು ಟಿವಿ ಚಾನೆಲ್‌ವೊಂದರಲ್ಲಿ ನೋಡಿದೆ. ಅವರು, ಮುಡಾದಲ್ಲಿ 50:50 ಅನುಪಾತ ದಡಿ ನಿವೇಶನ ಪಡೆದವರ ಸಂಪೂರ್ಣ ಪಟ್ಟಿ ತಮ್ಮ ಬಳಿ ಇರುವುದಾಗಿ ತಿಳಿಸಿದ್ದಾರೆ. ಆ ಪಟ್ಟಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ನೀಡಿ, ತನಿಖೆಗೆ ಸಹಕರಿಸಲಿ. ಆ ಮೂಲಕ ಪ್ರತಿಷ್ಠಿತ ಮುಡಾಗೆ ಅಂಟಿರುವ ಕಪ್ಪು ಮಸಿ ತೊಲಗಲಿ.

-ಸಂದೇಶ್ ನಾಗರಾಜ್
ಮುಡಾ ಮಾಜಿ ಅಧ್ಯಕ್ಷರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಾಸ್ತ್ರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆಡ್‌ಪೂಲ್ & ವೊಲ್ವೆರಿನ್ (ಇಂ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ರಾಜಹುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನರಬಲಿ (ತೆ)	4 ಪ್ರದರ್ಶನಗಳು
ಪ್ರಭಾ	
ರಕ್ತಾಕ್ಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.8ಕ್ಕೆ, ಬೆ.10.40ಕ್ಕೆ, ರಾಯನ್ (ತ): ಮ.1.20ಕ್ಕೆ, ಸಂ.410ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಕ್ತಾಕ್ಷ (ಕ): ಬೆ.10.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಮ.12.50ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಲೆವೆಲ್ ಕ್ರಾಸ್ (ಮ): ಬೆ.10.25ಕ್ಕೆ.
ಸ್ಕ್ರೀನ್ 3	ಬ್ಯಾಡ್ ನ್ಯೂಸ್ (ಹಿಂ): ಬೆ10.30ಕ್ಕೆ, ಸಂ.4.15ಕ್ಕೆ, ರೂಪಾಂತರ (ಕ): ಮ.1.15ಕ್ಕೆ, ಫ್ಯಾಮಿಲಿ ಡ್ರಾಮಾ (ಕ): ರಾ.7.10ಕ್ಕೆ, ರುದ್ರವೀಣಾ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.35ಕ್ಕೆ, ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಸಿಸಿಬಿ ಪೊಲೀಸರಿಂದ 70 ಲಕ್ಷ ಮೌಲ್ಯದ ನಕಲಿ ತಂಬಾಕು ಜಪ್ತಿ

ಮೈಸೂರು, ಜು.27–ಮೈಸೂರಿನ ಸಿಸಿಬಿ ಪೊಲೀಸರು 70 ಲಕ್ಷ ರೂ. ಮೌಲ್ಯದ ನಕಲಿ ತಂಬಾಕು ಉತ್ಪನ್ನಗಳು ಹಾಗೂ ಅದನ್ನು ತಯಾರಿಸಲು ಬಳಸುತ್ತಿದ್ದ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ.

ಐಟಿಸಿ ಕಂಪನಿಯ ಸಿಗರೇಟ್ ಮತ್ತು ಹನ್ಸ್ ಉತ್ಪನ್ನಗಳನ್ನು ನಕಲಿಯಾಗಿ ತಯಾರಿಸಿ, ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ ಎಂದು ಐಟಿಸಿ ಕಂಪನಿ ಅಧಿಕಾರಿಗಳು ನೀಡಿದ ಮಾಹಿತಿಯನ್ನಾಧರಿಸಿ ಜುಲೈ 22ರಂದು ಇಟ್ಟಿಗೆಗೂಡಿನ ಅರುಣಾಚಲಂ ಸ್ಟ್ರೀಟ್‌ನಲ್ಲಿರುವ ಮನೆಯೊಂದರ ಮೇಲೆ ದಾಳಿ ನಡೆಸಿದ ಸಿಸಿಬಿ ಅಧಿಕಾರಿ ಮತ್ತು ಸಿಬ್ಬಂದಿ, ನಕಲಿ ಸಿಗರೇಟ್ ಮತ್ತು ಹನ್ಸ್ ಅಕ್ರಮವಾಗಿ ದಾಸ್ತಾನು ಮಾಡಿದ್ದನ್ನು ಪತ್ತೆ ಹಚ್ಚಿ, ಓರ್ವನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿ, ಆತ ನೀಡಿದ ಮಾಹಿತಿ ಮೇರೆಗೆ ನಂಜನಗೂಡು ರಿಂಗ್ ರಸ್ತೆ ಬಳಿ ನಕಲಿ ಹನ್ಸ್ ಸರಬರಾಜು ಮಾಡುತ್ತಿದ್ದ ಮತ್ತೋರ್ವನನ್ನು ವಶಕ್ಕೆ ಪಡೆದರು. ಆತ ನೀಡಿದ ಮಾಹಿತಿಯನ್ವಯ ಕೋಟೆಹುಂಡಿ ಗ್ರಾಮದಲ್ಲಿ ನಕಲಿ ಹನ್ಸ್ ತಯಾರಿಸುತ್ತಿದ್ದ ಘಟಕದ ಮೇಲೆ ದಾಳಿ ನಡೆಸಿ 20 ಲಕ್ಷ ರೂ. ಮೌಲ್ಯದ ನಕಲಿ ತಂಬಾಕು ಉತ್ಪನ್ನಗಳು ಹಾಗೂ ಅದನ್ನು ತಯಾರಿಸಲು ಬಳಸುತ್ತಿದ್ದ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ನಾಲ್ವರನ್ನು ಬಂಧಿಸಿದ್ದು, ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ನಕಲಿ ಹನ್ಸ್ ಉತ್ಪಾದನಾ ಘಟಕವನ್ನು ಪತ್ತೆ ಹಚ್ಚಿದ ಸಿಸಿಬಿ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಶಂಸಿಸಿದ್ದಾರೆ ಎಂದು ಪೊಲೀಸ್ ಆಯುಕ್ತರ ಕಚೇರಿ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕಾಶ್ಮೀರದಲ್ಲಿ ಕಮರಿಗೆ ಬಿದ್ದ ಕಾರು; ಐದು ಮಕ್ಕಳು ಸೇರಿ ಒಂದೇ ಕುಟುಂಬದ ಎಂಟು ಮಂದಿ ಸಾವು

ಶ್ರೀನಗರ, ಜು.27– ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಶನಿವಾರ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಿಂದ ಸ್ಕಿಡ್ ಆಗಿ ಕಮರಿಗೆ ಬಿದ್ದಿದ್ದು, ಭೀಕರ ಅಪಘಾತದಲ್ಲಿ ಐದು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಎಂಟು ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರಿನಲ್ಲಿದ್ದ ಒಬ್ಬ ಪೊಲೀಸ್, ಇಬ್ಬರು ಮಹಿಳೆಯರು ಮತ್ತು 6 ರಿಂದ 16 ವರ್ಷದೊಳಗಿನ ಐದು ಮಕ್ಕಳು ಮೃತಪಟ್ಟಿದ್ದಾರೆ ಎಂದು ಅವರು ಹೇಳಿದ್ದಾರೆ. ಮೃತರು ಕಿಶ್ತ್ವಾರ್‌ನಿಂದ ಸಿಂಥನ್ ಟಾಪ್ ಮೂಲಕ ಮಾರ್ವಾ ಕಡೆಗೆ ಪ್ರಯಾಣಿಸುತ್ತಿದ್ದಾಗ ಅವರ ಕಾರು ರಸ್ತೆಯಿಂದ ಸ್ಕಿಡ್ ಆಗಿ ದಕ್ಸಮ್‌ನಲ್ಲಿ ಕಮರಿಗೆ ಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತರ ಸಮಸ್ಯೆ ಬಗೆಹರಿಸಲು ಸರ್ಕಾರ ಬದ್ಧ

ಕಬ್ಬು ಬೆಳೆಗಾರರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಭರವಸೆ

ಮೈಸೂರು, ಜು. 27(ಆರ್‌ಕೆ)– ರೈತರ ಸಮಸ್ಯೆ ಬಗೆಹರಿಸಲು ಸರ್ಕಾರ ಬದ್ಧವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಬ್ಬು ಬೆಳೆಗಾರರೊಂದಿಗೆ ಸಭೆ ನಡೆಸಿ ಕುಂದು ಕೊರತೆ, ಬೇಡಿಕೆಗಳನ್ನು ಆಲಿಸಿದ ಸಚಿವರು, ನಮ್ಮ ಸರ್ಕಾರ ರೈತರು ಎದುರಿಸುತ್ತಿರುವ ಸಮಸ್ಯೆ ಪರಿಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ ಎಂದರು.

ರೈತರು ಬೆಳೆದ ಕಬ್ಬನ್ನು ಖರೀದಿಸಿ ಅರೆಯುವ ನಿಟ್ಟಿನಲ್ಲಿ ಕೆ.ಆರ್. ನಗರದಲ್ಲಿ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಪುನಾರಂಭಿಸಲು ಸಂಸ್ಥೆಯೊಂದಿಗೆ ಚರ್ಚಿಸಿ ಈ ಹಿಂದೆ ಸರ್ಕಾರದೊಂದಿಗೆ ಒಡಂಬಡಿಕೆಯಾಗಿರುವಂತೆ ಅಗತ್ಯ ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದರು.

ರೈತರ ಎಲ್ಲಾ ಜಮೀನುಗಳಿಗೂ ನೀರು ಹರಿಸುವಂತೆ ಹಾಗೂ ಅನಧಿಕೃತವಾಗಿ ನಾಲೆಗೆ ಮೋಟಾರ್ ಅಳವಡಿಸಿ ನೀರು ಬಳಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಿದ ಡಾ. ಮಹದೇವಪ್ಪ, ಈ ಸಂಬಂಧ ರೈತರು ನೀಡುವ ದೂರು, ಸಲಹೆಗಳನ್ನು ಪರಿಗಣಿಸಲಾಗುವುದು ಎಂದು ನುಡಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಬ್ಬು ಬೆಳೆಗಾರರೊಂದಿಗೆ ಸಭೆ ನಡೆಸುತ್ತಿರುವುದು

ಬ್ಯಾಂಕ್ ಅಧಿಕಾರಿಗಳು ರೈತರ ನೆರವಿಗೆ ಬರುತ್ತಿಲ್ಲ, ಸರ್ಕಾರದ ಯೋಜನೆಗಳನ್ನು ತಲುಪಿಸಲು ಹಿಂಜರಿಯುತ್ತಿದ್ದಾರೆ ಎಂದು ರೈತ ಮುಖಂಡರು ಆರೋಪಿಸಿದ ಹಿನ್ನೆಲೆಯಲ್ಲಿ, ತಾವು ಬ್ಯಾಂಕ್ ಮ್ಯಾನೇಜರ್‌ಗಳ ಸಭೆ ಕರೆದು ಅಗತ್ಯ ಸೂಚನೆ ನೀಡುವುದಾಗಿ ಇದೇ ಸಂದರ್ಭ ತಿಳಿಸಿದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 'ನಮ್ಮ ಹೊಲ–ನಮ್ಮ ರಸ್ತೆ' ಉದ್ದೇಶ ಸಫಲವಾಗುವ ನಿಟ್ಟಿನಲ್ಲಿ ರೈತರು ಬೆಳೆದ ಬೆಳೆ ಸಾಗಿಸಲು ಅನುಕೂಲ ಮಾಡಿಕೊಡಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡುತ್ತೇವೆ. ಮಧ್ಯವರ್ತಿಗಳಿಲ್ಲದೆಯೇ ರೈತರ ಬೆಳೆ ಮಾರಾಟ ಮಾಡಬೇಕು ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಎನ್. ವಿಷ್ಣುವರ್ಧನ, ಕೃಷಿ, ತೋಟಗಾರಿಕೆ, ನೀರಾವರಿ ಇಲಾಖೆ ಹಾಗೂ ಸೆಸ್ಕ್ ಅಧಿಕಾರಿಗಳು, ಮೈಸೂರು–ಚಾಮರಾಜನಗರ ಜಿಲ್ಲಾ ಕಬ್ಬು ಬೆಳೆಗಾರರು, ರೈತ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

130 ಕಿ.ಮೀ. ವೇಗದಲ್ಲಿ ಗಾಡಿ ಓಡಿಸಿದರೆ ಆ.1ರಿಂದ ಎಫ್‌ಐಆರ್

ಬೆಂಗಳೂರು, ಜು.27– ಯಾವುದೇ ಚಾಲಕರು 130 ಕಿ.ಮೀ. ವೇಗದಲ್ಲಿ ವಾಹನ ಓಡಿಸಿ ಸಿಕ್ಕಿಬಿದ್ದರೆ ಅಂತಹವರ ವಿರುದ್ಧ ಆಗಸ್ಟ್ 1ರಿಂದ ಎಫ್‌ಐಆರ್ ದಾಖಲಿಸಲಾಗುವುದು ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷೆ) ಅಲೋಕ್ ಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ಅವರು, ಕರ್ನಾಟಕ ದಲ್ಲಿ ಎಲ್ಲಿಯಾದರೂ ಗಂಟೆಗೆ 130 ಕಿಮೀ ವೇಗದಲ್ಲಿ ಚಾಲನೆ ಮಾಡುವವರ ವಿರುದ್ಧ ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗುವುದು. ದುಡುಕಿನ ಮತ್ತು ಅಪಾಯಕಾರಿ ಚಾಲನೆ ತಪ್ಪಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಶೇ.90ರಷ್ಟು ಮಾರಣಾಂತಿಕ ಅಪಘಾತಗಳಿಗೆ ಅತೀ ವೇಗವು ಕಾರಣವಾಗುತ್ತದೆ. ಗುರುವಾರ, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ, 155 ವಾಹನಗಳು ಗಂಟೆಗೆ 130 ಕಿ.ಮೀ. ವೇಗದಲ್ಲಿ ಚಲಿಸುತ್ತಿದ್ದವು. ಸ್ಪಾಟ್ ಮತ್ತು ಸೆಕ್ಷನಲ್ ಸ್ಪೀಡ್ ದಾಖಲಿಸಲಾಗುತ್ತದೆ ಎಂದು ಟ್ವಿಟ್ಟರ್‌ನಲ್ಲಿ ಮಾಹಿತಿ ನೀಡಿದ್ದಾರೆ.

ವಿಭಾಗೀಯ ವೇಗವು ಎರಡು ಕ್ಯಾಮೆರಾ ಬಿಂದುಗಳ ನಡುವಿನ ಸರಾಸರಿ ವೇಗವಾಗಿದೆ. ಬೇರೆಡೆ ವೇಗವಾಗಿ ಓಡಿಸಿ ಕ್ಯಾಮರಾಗಳ ಬಳಿ ಚಾಲಕ ವೇಗ ಕಡಿಮೆ ಮಾಡಿದರೂ ಕೇಸ್ ಬುಕ್ ಆಗುತ್ತಾರೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಂಟೆಗೆ 105 ಕಿ.ಮೀ. ವೇಗದಲ್ಲಿ ಸಂಚರಿಸುವವರಿಗೆ ದಂಡ ವಿಧಿಸಲಾಗುತ್ತದೆ ಎಫ್‌ಐಆರ್‌ಗಳ ನೋಂದಣಿಗೆ 130 ಕಿಮೀ ಮಿತಿ ಇರಿಸಲಾಗಿದೆ ಎಂದು ತಿಳಿಸಿದ್ದಾರೆ.

ಚಾಮುಂಡೇಶ್ವರಿ ದರ್ಶನಕ್ಕೆಂದು ಬಂದಿದ್ದ ಯುವಕ ಹೃದಯಾಘಾತದಿಂದ ಸಾವು


ಮೈಸೂರು: ಚಾಮುಂಡೇಶ್ವರಿ ದೇವಿ ದರ್ಶನಕ್ಕೆಂದು ಬಂದಿದ್ದ ಯುವಕ ನೊಬ್ಬ ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ಇಂದು(ಶನಿ ವಾರ) ನಡೆದಿದೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ಮೂಲದ ರಕ್ಷಿತ್ (27) ಮೃತ ಯುವಕನಾಗಿದ್ದು, ಈತ ಇಂದು ಚಾಮುಂಡೇಶ್ವರಿ ವರ್ಧಂತಿ ಹಿನ್ನಲೆಯಲ್ಲಿ ಚಾಮುಂಡೇಶ್ವರಿ ಬೆಟ್ಟಕ್ಕೆ ಸ್ನೇಹಿತರ ಜೊತೆ ದರ್ಶನಕ್ಕೆ ಬಂದಿದ್ದ. ದರ್ಶನ ಮುಗಿಸಿ ದೇವಸ್ಥಾನದಿಂದ ವಾಪಸ್ ಬರುವಾಗ ರಕ್ಷಿತ್‌ಗೆ ಎದೆ ನೋವು ಕಾಣಿಸಿಕೊಂಡು, ದೇವ ಸ್ಥಾನದ ಹೊರಭಾಗದಲ್ಲಿ ಕುಸಿದು ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	123.98 ಅಡಿ
ಒಳಹರಿವು	122021 ಕ್ಯೂಸೆಕ್
ಹೊರಹರಿವು	131234 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಶನಿವಾರ	2282.32 ಅಡಿ
ಒಳಹರಿವು	33608 ಕ್ಯೂಸೆಕ್
ಹೊರಹರಿವು	35000 ಕ್ಯೂಸೆಕ್

ಕಣ್ಮನ ಸೆಳೆಯುತ್ತಿದೆ ಬೃಹತ್ ಗ್ರಾಹಕ ಎಕ್ಸ್‌ಪೋ

ಮೈಸೂರು,ಜು.27(ಪಿಎಂ)– ಚಿಟ್ಟೆ, ಕ್ರಿಮಿ–ಕೀಟ ಪ್ರಪಂಚ, ಘೀಳಿಡುವ ಆನೆ ಸೇರಿದಂತೆ ವನ್ಯ ಮೃಗಗಳ ಘರ್ಜನೆಯ ಲೋಕವು ಅತ್ಯಾಕರ್ಷಣೆಯೊಂದಿಗೆ ಕಣ್ಮನ ಸೆಳೆಯುತ್ತಿದ್ದು, ಈ ಎಲ್ಲವೂ ನೈಜವಲ್ಲವಾದರೂ ರೋಬೋಟಿಕ್ ತಂತ್ರಜ್ಞಾನದ ಕಾರಣ ದಿಟವಾದ ಪ್ರಾಣಿ ಹಾಗೂ ಕ್ರಿಮಿ–ಕೀಟದಂತೆ ಗೋಚರಿಸುವ ಮೂಲಕ ಮಕ್ಕಳ ಮನಸೂರೆಗೊಳ್ಳುವಂತಾಗಿದೆ.

ಇಂತಹ ಮಾದರಿಗಳ ಜೊತೆಗೆ 100ಕ್ಕೂ ಹೆಚ್ಚು ಮಳಿಗೆಗಳಲ್ಲಿ ಗೃಹೋಪಯೋಗಿ ಸಾಮಗ್ರಿ ಸೇರಿದಂತೆ ನಿತ್ಯ ಜೀವನಕ್ಕೆ ಅಗತ್ಯವಾದ ನಾನಾ ಬಗೆಯ ವಸ್ತುಗಳು ಲಭ್ಯವಿವೆ ಆಟೋಟ ಅಂಕಣವೂ ಇದೆ. ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನ (ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ)ದಲ್ಲಿ ಇಂತಹ ಮನಮೋಹಕ ತಾಣವೊಂದು ತಲೆ ಎತ್ತಿದೆ.

ಚಿಟ್ಟೆ, ಕ್ರಿಮಿ–ಕೀಟ ಮಾದರಿಗೆ ಪುಟಾಣಿಗಳು ಪುಳಕ



ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಆಯೋಜಿಸಿರುವ ಎಕ್ಸ್‌ಪೋದಲ್ಲಿರುವ 'ರೊಬೊಟಿಕ್ ಬಟರ್‌ಫ್ಲೈ ಶೋ' ಅಂಕಣ.

'ಕರ್ನಾಟಕ ಸಂಭ್ರಮ–50'ರ ಸವಿನೆನಪಿಗಾಗಿ ಮೈಸೂರಿನಲ್ಲಿ ಮೊಟ್ಟಮೊದಲಿಗೆ ಇಂತಹ ಬೃಹತ್ ಗ್ರಾಹಕ ಮೇಳವು (ಗ್ರಾಹಕ ಎಕ್ಸ್‌ಪೋ) ಸೈಮನ್ ಎಕ್ಸಿಬಿಟರ್ಸ್ ವತಿಯಿಂದ ಆಯೋಜನೆಗೊಂಡಿದೆ. 1973ರ ನ.1ರಂದು ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರು ನಾಮಕರಣ ಮಾಡಿದ ಸುವರ್ಣ ಮಹೋತ್ಸವದ ಪ್ರಯುಕ್ತ ಮೇಳ ಆಯೋಜಿಸಿರುವ ಹಿನ್ನೆಲೆಯಲ್ಲಿ ಕೇವಲ ವ್ಯಾಪಾರ ವಹಿವಾಟಿಗೆ ಮಾತ್ರವೇ ಸೀಮಿತಗೊಳ್ಳದೇ ಕನ್ನಡ ನಾಡಿನ ಬಗ್ಗೆ ಮಹತ್ವದ ಮಾಹಿತಿ ಸಹ ಇಲ್ಲಿ ಅನಾವರಣ ಮಾಡಲಾಗಿದೆ.

ಎಕ್ಸ್‌ಪೋಗೆ ಪ್ರವೇಶ ಪಡೆಯುತ್ತಿದ್ದಂತೆ 'ರೊಬೊಟಿಕ್ ಬಟರ್‌ಫ್ಲೈ ಶೋ' ಶೀರ್ಷಿಕೆಯಡಿ ಸಜ್ಜುಗೊಳಿಸಿರುವ ಬೃಹತ್ ಚಿಟ್ಟೆ, ಕ್ರಿಮಿ–ಕೀಟ ಪ್ರಪಂಚ ತೆರೆದುಕೊಳ್ಳುತ್ತದೆ. ರೊಬೋಟಿಕ್ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಚಿಟ್ಟೆ, ಕೀಟಗಳ ಹತ್ತಾರು ಮಾದರಿಗಳು ಹಾರಾಡುತ್ತಿರುವುದು ನೋಡುತ್ತಿದ್ದಂತೆ ಪುಟಾಣಿಗಳು ಪುಳಕಗೊಳ್ಳುವುದು ಇಲ್ಲಿ ಸಾಮಾನ್ಯ. ಕಾಡು ಪ್ರಾಣಿಗಳು, ಅವತಾರ್ ಪಾತ್ರಗಳ ಅನಾವರಣ, ಹಿಮಾಲಯನ್ ಅನಿಮಲ್ಸ್ ಸಹ ಆಕರ್ಷಣೆಯಾಗಿದ್ದು, ಆನೆ, ಕರಡಿ, ಕಾಡೆಮ್ಮೆ, ಹುಲಿ ಸೇರಿದಂತೆ ಮೊದಲಾದ ವನ್ಯಮೃಗಗಳ ಮಾದರಿಗಳನ್ನು ಅದರದ್ದೇ ನೈಜ ಗಾತ್ರದಲ್ಲಿ ವಿನ್ಯಾಸಗೊಳಿಸಲಾಗಿದೆ.

ಡ್ರೆಸ್ ಮೆಟೀರಿಯಲ್ಸ್, ರೆಡಿಮೇಡ್ ಉಡುಪು, ಸೀರೆ, ಕುರ್ತಾ, ಪೈಜಾಮಾ, ಶರ್ಟಿಂಗ್ ಮತ್ತು ಸೂಟಿಂಗ್ ಮಳಿಗೆಗಳು ಮಾತ್ರವಲ್ಲದೆ, ಆಹಾರ ಮಳಿಗೆಗಳೂ ಇಲ್ಲಿ ಆಕರ್ಷಿಸುತ್ತಿವೆ. ಜು.25ರಿಂದ ಆರಂಭಗೊಂಡಿರುವ ಈ ಮೇಳವು ಆ.25ರವರೆಗೆ ಇರಲಿದೆ. ಪ್ರತಿದಿನ ಸಂಜೆ 4ರಿಂದ ರಾತ್ರಿ 9.30ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಎಕ್ಸ್‌ಪೋಗೆ ಪ್ರವೇಶ ದರ 60 ರೂ. ಇದ್ದು, 5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶವಿದೆ.

ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿನಲ್ಲಿ ಪೂರ್ಣಕಾಲಿಕವಾಗಿ ಪಿ.ಹೆಚ್.ಡಿ ಸಂಶೋಧನೆ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ) ಸಮುದಾಯದ ವಿದ್ಯಾರ್ಥಿಗಳಿಗೆ (J.R.F ಮಾದರಿ) ಫೆಲೋಶಿಪ್ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯವು ರೂ.8 ಲಕ್ಷಗಳನ್ನು ಮೀರಬಾರದು. ವಿದ್ಯಾರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರಬೇಕು. ವಿದ್ಯಾರ್ಥಿಯ ಗರಿಷ್ಠ ವಯೋಮಿತಿ 35 ವರ್ಷ ಮೀರಬಾರದು ಹಾಗೂ ಕೋರ್ಸ್– ಪೂರ್ಣಕಾಲಿಕ ಸ್ನಾತಕೋತ್ತರವಾಗಿರಬೇಕು. ಅರ್ಹ ಅಭ್ಯರ್ಥಿಗಳು https://sevasindhu.karnataka.gov.in/Sevasindhu/DepartmentServices ಮೂಲಕ ಆ.31ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಅಲ್ಪಸಂಖ್ಯಾತರ ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗೆ https://dom.karnataka.gov.in ಅಥವಾ ದೂ.ಸಂ:0821–2422088, 8951087207 ಅನ್ನು ಸಂಪರ್ಕಿಸಬಹುದು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿ.,
ಗಾಂಧಿಚೌಕ, ಮೈಸೂರು

ಮುಖ್ಯ ಕಛೇರಿ:0821–2521631 ಶಾಖೆ :0821–2563851

ಪ್ರಕಟಣೆ

ತಾ|| 10.07.2024 ರಿಂದ ಒಂದು ವರ್ಷದ ಅವಧಿಗೆ ಖಾಯಂ ಠೇವಣಿಗಳ ಮೇಲೆ ನೀಡುವ ಬಡ್ಡಿ ದರವನ್ನು ಶೇ.8% ರಿಂದ **ಶೇ.8.5%ಗೆ** ಹೆಚ್ಚಿಸಲಾಗಿದೆ. (ಹಿರಿಯ ನಾಗರೀಕರಿಗೆ) ಹಾಗೂ ಸಾಮಾನ್ಯರಿಗೆ 7.5% ರಿಂದ **8%ಗೆ** ಹೆಚ್ಚಿಸಲಾಗಿದೆ.

1) ಇದು ಸೀಮಿತ ಅವಧಿಯ ಕೊಡುಗೆಯಾಗಿದ್ದು **ರೂ.5,00,000/-** ಮತ್ತು ಮೇಲ್ಪಟ್ಟು ಠೇವಣಿ ಮಾಡುವ ಠೇವಣಿದಾರರಿಗೆ ನಿಬಂಧನೆಯ ಮೇರೆಗೆ ಬ್ಯಾಂಕಿನ ಷೇರು ಸದಸ್ಯತ್ವವನ್ನು (ಹಿರಿಯ ನಾಗರೀಕರನ್ನು ಹೊರತು ಪಡಿಸಿ) ನೀಡಲಾಗುವುದು. ಆದ್ದರಿಂದ ಮಾನ್ಯ ಸದಸ್ಯರು/ ಗ್ರಾಹಕರು ಇದರ ಸದುಪಯೋಗ ಪಡೆಯಬೇಕೆಂದು ಕೋರಲಾಗಿದೆ.

2) ಮಾನ್ಯ ಸದಸ್ಯರುಗಳಿಗೆ ಬ್ಯಾಂಕಿನ ಮುಖ್ಯ ಕಛೇರಿ ಮತ್ತು ಶಾಖಾ ಕಛೇರಿಯಲ್ಲಿ ಲಾಕರ್ ಸೌಲಭ್ಯ ದೊರೆಯುತ್ತದೆ.

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ಸಹಿ/– ಕೆ.ಹರ್ಷಿತ್ ಗೌಡ, ಮುಖ್ಯಕಾರ್ಯ ನಿರ್ವಹಣಾಧಿಕಾರಿ
ಮೊ.9148037007

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನು ಅಗಲಿ ಇಂದಿಗೆ 1 ವರ್ಷವಾಗಿದೆ. ದೇವರು ನಿಮ್ಮ ದಿವ್ಯ ಆತ್ಮಕ್ಕೆ ಶಾಂತಿಯನ್ನು ನೀಡಲಿ, ಮತ್ತೆ ಹುಟ್ಟಿ ಬನ್ನಿ.

ಕ್ಯಾಪ್ಟನ್ ಕುಯ್ಯಮುಡಿ ಕುಶಾಲಪ್ಪ ಎ (ಕುಮಾರ)

ದುಃಖತಪ್ತರು: ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ ಜಯಮ್ಮ ಕೋಂ ದಿ|| ಸುಬ್ಬೇಗೌಡ ಮತ್ತು ಮಕ್ಕಳಾದ ಪ್ರಮೀಳಾ. ಸಿ ರವಿ, ಚಂದ್ರು, ರಘು, ಮನೆ ನಂ. 208, 15ನೇ ಕ್ರಾಸ್, ಬೆಳವಾಡಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ, ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂದವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು, ತಕರಾರು ಹಾಗೂ ಹಕ್ಕೊತ್ತಾಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ದಾಖಲೆ ಸಹಿತ ನನ್ನ ಕಕ್ಷಿದಾರರಿಗಾಗಲೀ ಅಥವಾ ನನಗಾಗಲೀ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ನೋಂದಾಯಿತ ದಾಸ್ತವೇಜು ಮೂಲಕ ಕ್ರಯಕ್ಕೆ ಪಡೆಯುವವರಿದ್ದು. ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ದಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂ.96/1 ರಲ್ಲಿರುವ 1 ಎಕರೆ ಆಕಾರ 0.83 ಪೈಸೆ ಉಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ 96/3, 96/6 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.96/2 ಮತ್ತು 389 ರ ಜಮೀನು, ಉತ್ತರಕ್ಕೆ: ಸರ್ವೆ ನಂ.474 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ.96/4 ರ ಜಮೀನು.

(ಹೆಚ್.ಎಂ. ಸುಧಾಕರ)
ವಕೀಲರು, ಕೆಎಆರ್ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ನಿವೇದಿತನಗರ, ಮೈಸೂರು Ph: 94485 58136

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಶ್ರೀ ಅನಂತರಾಮನ್ ಆಯಲೂರ್ ವೆಂಕಟೇಶ್ವರನ್ ಎಂಬುವರಿಂದ ಕೆಳಗೆ ಎ, ಬಿ ಮತ್ತು ಸಿ ಅನುಸೂಚಿಯಲ್ಲಿ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಏಳು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಏಳು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಎ ಷೆಡ್ಯೂಲ್

ಮೈಸೂರು ನಗರ ದೇವರಾಜ ಮೊಹಲ್ಲಾ ಯಾದವಗಿರಿ ಒಂದನೇ ಮೈನ್‌ನಲ್ಲಿರುವ ಪೂರ್ವ ಪಶ್ಚಿಮ (115.30 + 116.60)/2 ಅಡಿಗಳು ಮತ್ತು ದಕ್ಷಿಣೋತ್ತರ 45.00 ಅಡಿಗಳು ಅಂದರೆ 5169.375 ಚದರ ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವ : ಗಲ್ಲಿ (ಕನ್ಸರ್‌ವೆನ್ಸಿ) ಪಶ್ಚಿಮ ರಸ್ತೆ, ಉತ್ತರ : ಸ್ವತ್ತಿನ ನಂಬರ್ 115/2 ದಕ್ಷಿಣ : ಸ್ವತ್ತಿನ ನಂಬರ್ 156 (ಖಾಲಿ ನಿವೇಶನ)

ಬಿ ಷೆಡ್ಯೂಲ್

ಪ್ಲಾಲಾಟೈನ್ ಇಲೈಟ್ ನ ಮೊದಲನೇ ಮಹಡಿಯಲ್ಲಿರುವ 1750 ಚದರ ಅಡಿಗಳುಳ್ಳ ಒಂದು ಕಾರ್ ಪಾರ್ಕಿಂಗ್ ಉಳ್ಳ ಫ್ಲಾಟ್ ನಂಬರ್ ಎಫ್ 2 ಸ್ವತ್ತಿಗೆ ಚಕ್ಕುಬಂದಿ: ಪೂರ್ವ : ಹಿಂಬದಿಯ ಸೆಟ್ ಬ್ಯಾಕ್, ಪಶ್ಚಿಮ ಫ್ಲಾಟ್ ನಂಬರ್ ಎಫ್ – 1, ಉತ್ತರ : ಮುಂಭಾಗ (ಕಾಮನ್ ಎಂಟ್ರೆನ್ಸ್), ದಕ್ಷಿಣ : ಸೆಟ್ ಬ್ಯಾಕ್

ಸಿ ಷೆಡ್ಯೂಲ್

ಎ ಷೆಡ್ಯೂಲ್ ಸ್ವತ್ತಿನಲ್ಲಿರುವ 877 ಚದರ ಅಡಿ ಅಳತೆಯುಳ್ಳ ಅವಿಭಜಿತ ಪಾಲು


ಸಹಿ/– **ರೋಹಿತ್ ಸುಬ್ಬಯ್ಯ**
ವಕೀಲರು
ನಂ.1230/ಎ, 2ನೇ ಕ್ರಾಸ್,
(ಕೃಷ್ಣಮೂರ್ತಿಪುರಂ ರಾಮಮಂದಿರದ ಹಿಂಭಾಗ)
ಚಾಮರಾಜ ಮೊಹಲ್ಲಾ, ಮೈಸೂರು–570004
ಮೊ: 9480004999

Inclusion of Surname

I, G. Sanjay Krish, S/o K.A. Gopinath, aged 18 years, residing at No. 11, 1st Main Road, Vijayanagar Railway Layout, Mysore-570016, solemnly affirm on oath that my father's name is K.A. Gopinath (as mentioned in my Aadhar Card No. 2956 8473 2660 and other documents, that it is mentioned as K.A. Gopinath, vide affidavit sworn in before Notary C. Mangala. Mysuru on 5-7-2024.

Sd/- G. Sanjay Krish

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಬಿ. ಎನ್. ಗುಂಡೂರಾವ್
(ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್)
ಗಾಯಿತ್ರಿಪುರಂ, ಮೈಸೂರು

ಪ್ರಿಯ ಬಂಧು ಮಿತ್ರರೇ,
ನಮ್ಮ ಪೂಜ್ಯ ತೀರ್ಥರೂಪರಾದ
ಶ್ರೀ ಬಿ. ಎನ್. ಗುಂಡೂರಾವ್ ರವರು
(ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್)
ದಿನಾಂಕ 22.07.2024 ಸೋಮವಾರದಂದು
ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಸದ್ಗತಿ ಸಂಬಂಧ
'ವೈಕುಂಠ ಸಮಾರಾಧನೆ' ಕಾರ್ಯ
ದಿನಾಂಕ: 04–08–2024 ಭಾನುವಾರದಂದು
'ಬ್ರಾಹ್ಮಣ ಸಭಾ ಕಲ್ಯಾಣ ಭವನ'
ತ್ಯಾಗರಾಜ ರಸ್ತೆ, ಅಗ್ರಹಾರ,
ಮೈಸೂರು ಇಲ್ಲಿ ನೆರವೇರಲಿದೆ.
ತಾವುಗಳು ಆಗಮಿಸಿ ಮೃತರ
ಆತ್ಮಕ್ಕೆ ಚಿರಶಾಂತಿಯನ್ನು
ಕೋರಬೇಕಾಗಿ ವಿನಂತಿಸುವ

ದುಃಖತಪ್ತರು: ಮಣಿಯಮ್ಮ,
ಮಂಜುನಾಥ್, ಉಮಾ, ಸುಮಾ ಮತ್ತು ಮೊಮ್ಮಕ್ಕಳು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರಾದ ನಂಜುಂಡ ಎಂ ಬಿನ್ ಲೇಟ್ ಮುದ್ದೇಗೌಡ ನಂ. 10, 3ನೇ ಕ್ರಾಸ್, ನಂದಿನಿ ಲೇಔಟ್, ಟಿ.ನರಸೀಪುರ ರಸ್ತೆ, ಮೈಸೂರು, ಇವರು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರು ಮಂಜುನಾಥ ಬಿನ್. ಎಂ. ಬಿನ್ ಮಲ್ಲಪ್ಪ ಸಿ., ಹೆಚ್. ಐ. ಜಿ. 963, ಮುಖ್ಯರಸ್ತೆ, ದೋಣಾಡಿ, 2ನೇ ಹಂತ, ಮೈಸೂರು ಹಾಗೂ ಗೌತಮ್ ಎ. ಎಸ್. ಬಿನ್ ಶಿವಣ್ಣೇಗೌಡ ಕೆ. 17ನೇ ವಾರ್ಡ್, 3ನೇ ಮುಖ್ಯರಸ್ತೆ, ಕನಕನಗರ, ಕೆ. ಆರ್. ನಗರ ಟೌನ್, ಇವರುಗಳ ವಿರುದ್ಧ 10ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, (ಕಿ.ಶ್ರೇ), ಮೈಸೂರು, ಅಸಲು ದಾವಾ ಸಂಖ್ಯೆ: 1868/2023 ಪ್ರಕರಣ ದಾಖಲಿಸಿದ್ದು, ಸದರಿಯವರುಗಳು ಪ್ರತಿವಾದಿಗಳಾಗಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರ (ವಾದಿಗಳ) ಹಕ್ಕು, ಮಾಲೀಕತ್ವ ಹಾಗೂ ಶಾಂತಿಯುತ ಸ್ವಾಧೀನಾನುಭವಕ್ಕೆ ಯಾವುದೇ ರೀತಿ ತೊಂದರೆ ನೀಡದಂತೆ ಪ್ರಕರಣ ಮುಗಿಯುವವರೆಗೂ ನಿರ್ಬಂಧಕಾಜ್ಞೆಯನ್ನು ದಿನಾಂಕ: 30–03–2024 ರಂದು ಜಾರಿಗೊಳಿಸಿರುತ್ತದೆ ಹಾಗೂ ಯಥಾಸ್ಥಿತಿಯನ್ನು ಕಾಯ್ದಿರಿಸಲು ಸೂಚಿಸಿರುತ್ತದೆ. ಆದುದರಿಂದ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಪ್ರತಿವಾದಿಗಳ ಜೊತೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಯಾರಾದರೂ ಮುಂದುವರೆದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಿದರೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯವರ ಹಕ್ಕು ಮಾಲೀಕತ್ವ ಹಾಗೂ ಶಾಂತಿಯುತ ಸ್ವಾಧೀನಾನುಭವಕ್ಕೆ ಬದ್ಧ ಪಡಿಸುವುದಿಲ್ಲವೆಂದು ಹಾಗೂ ಇದರಿಂದಾಗುವ ಎಲ್ಲಾ ಖರ್ಚು–ವೆಚ್ಚಗಳಿಗೆ ತಾವೇ ಜವಾಬ್ದಾರರಾಗಿರುತ್ತೀರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರಗಳು

ಐಟಂ ನಂ.1:–
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂ. 312 (ಹಳೇ ನಂ.115) ಕ್ಕೆ ಸಂಬಂಧಿಸಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ಅಭಿವೃದ್ಧಿಪಡಿಸಿರುವ ನಿವೇಶನ ಸಂಖ್ಯೆ 1, ಪೂರ್ವ ಪಶ್ಚಿಮ 18ಮೀ. ಉತ್ತರ ದಕ್ಷಿಣ 30 ಮೀ ಅಳತೆಯ ನಿವೇಶನಕ್ಕೆ ಚಕ್ಕುಬಂದಿ:
ಪೂರ್ವ : ಖಾಸಗಿ ಸ್ವತ್ತು, ಪಶ್ಚಿಮ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 2.

ಐಟಂ ನಂ.2:–
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂ. 312 (ಹಳೇ ನಂ.115) ಕ್ಕೆ ಸಂಬಂಧಿಸಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ಅಭಿವೃದ್ಧಿಪಡಿಸಿರುವ ನಿವೇಶನ ಸಂಖ್ಯೆ 2, ಪೂರ್ವ ಪಶ್ಚಿಮ 18ಮೀ. ಉತ್ತರ ದಕ್ಷಿಣ 12 ಮೀ ಅಳತೆಯ ನಿವೇಶನಕ್ಕೆ ಚಕ್ಕುಬಂದಿ:
ಪೂರ್ವ : ಖಾಸಗಿ ಸ್ವತ್ತು, ಪಶ್ಚಿಮ : ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ 1, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 3.

ಐಟಂ ನಂ.3:–
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂ. 312 (ಹಳೇ ನಂ.115) ಕ್ಕೆ ಸಂಬಂಧಿಸಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ಅಭಿವೃದ್ಧಿಪಡಿಸಿರುವ ನಿವೇಶನ ಸಂಖ್ಯೆ 5, ಪೂರ್ವ ಪಶ್ಚಿಮ 18ಮೀ. ಉತ್ತರ ದಕ್ಷಿಣ 22.5 ಮೀ ಅಳತೆಯ ನಿವೇಶನಕ್ಕೆ ಚಕ್ಕುಬಂದಿ:
ಪೂರ್ವ : ಖಾಸಗಿ ಸ್ವತ್ತು, ಪಶ್ಚಿಮ : ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ 4, ದಕ್ಷಿಣಕ್ಕೆ : ರಸ್ತೆ

ಸಹಿ/– **ಎ. ಎಂ. ಭಾಸ್ಕರ್,** ಬಿ.ಎಸ್.ಸಿ., ಎಲ್‌ಎಲ್.ಬಿ.,
ವಕೀಲರು, 1411, ಸಿ.ಹೆಚ್. 26, 6ನೇ ಅಡ್ಡ ರಸ್ತೆ,
ಕೃಷ್ಣಮೂರ್ತಿಪುರಂ, ಮೈಸೂರು. ಮೊ: 94482 46647